Rare

~~1190~~ ~~1177~~ 1154 ~~21~~

ಶೀ:- ಹೆತ್ತರೊಡನೆ ಹೆನ್ಸೊಂದು

1939

ಕ್ಷೀರಸಾಗರ

ಹತ್ತರೊಡನೆ ಹನ್ನೊಂದು.
(ಕತೆಗಳು)

ಲೇಖಕ
ಎಮ್. ಎನ್. ಕಾಮತ
[ನರಸಿಂಹ]

ಪ್ರಕಾಶಕ
ಕುಡ್ಪಿ ವಾಸುದೇವ ಶೆಣೈ
ಮಂಗಳೂರು

1939

ತರೂಡನ ಹನೂಂದು



ಶ್. ಎಸ್. ಕಾಮತ್.

ಪುತ್ರರೊಡನೆ ಹಸ್ಬೆಂಡು.

ಎಮ್. ಎಸ್. ಕಾಮತ್

With best compliments
from the author

29/9/[illegible]

1939

ಪ್ರಕಾಶಕ
ಕುಡ್ಪಿ ವಾಸುದೇವ ಶೆಣೈ
ಸಂಪಾದಕ, "ಪ್ರಭಾತ" ಮಂಗಳೂರು.

ಪ್ರಸ್ತಾವನೆ

ಇನ್ನೂ ಮಳೆ ಸುರಿಯದು, ಗಾಳಿ ಹರಿಯದು. ಮೈಯಿಂದ ಬೆವರೂ, ಮೂಗಿನಿಂದ ಬಿಸಿಯುಸಿರೂ ಧಾರಾಳವಾಗಿ ಸುರಿದೂ ಹರಿದೂ ಬೇಸರಗೊಂಡ ದಿನ. ಮಿಂಯಲು ನೀರಿಲ್ಲ, ಕುಡಿಯಲು ದೊರೆವ ನೀರು ಕಡಿಮೆ, ಮಂದ; ಬಟ್ಟೆ ಒಗೆಯುವ ಮಾತೇ ಬೇಡ, ಮೈಗೆ ಬಟ್ಟೆ ತೊಟ್ಟರೆ ಬಿಸಿನೀರ ರಬ್ಬರು ಚೀಲದ ಶಾಖ ದೊರೆವಂತಾಗಿದೆ. ನೀರು ಕಡಿಮೆಯಾಗಿದ್ದರೂ, ಐಸ್ ಹೆಚ್ಚಿದೆ; ಹೋಟ್ಲಿನಲ್ಲಿ ಕಾಫಿಯೆಲ್ಲ ಹಾಲೇ; ದೊಡ್ಡ ಸೋಡಾ ಬಾಟಲಿಯಲ್ಲಿ ನೀರಿದೆ ಒಂದು ಗುಟುಕು. ಮನೆ ಸೆರೆಮನೆಯಂತಾಗಿದೆ; ಆಗತ್ಯವೇನೂ ಇಲ್ಲದಿದ್ದರೂ ರಭಸದಿಂದ ಓಡಾಡುವ ಮೋಟರುಗಳು, ನೀರಮೋಟರು ಚೆಲ್ಲಿದ ನೀರನ್ನು ಹೆದ್ದಾರಿಯ ಹಳ್ಳದಿಂದ ದಾರಿಗರ ಬಟ್ಟೆಗಳ ಮೇಲೆ ಓಕುಳಿಯಾಡಿಸಿ, ಅಥವಾ ನೀರೊಣಗಿದ್ದಲ್ಲಿ ಧೂಳು ಮೋಡಗಳನ್ನೆಬ್ಬಿಸಿ, ಮಡಿವಳಿಗೋ ವೈದ್ಯರಿಗೋ ಅವರವರ ವೃತ್ತಿಯನ್ನು ಸುರಕ್ಷಿತಗೊಳಿಸಿ, ಸುಧಾರಣೆಯ ಮಾರಣ ಮಹಿಮೆಯನ್ನು ಸಾರುತ್ತಿವೆ. ಸೂರ್ಯನು ಮೋಡಗಳ ಮುಸುಕಿನಲ್ಲೇ ಇದ್ದು, ಈ ವಾತಾವರಣವನ್ನೇ ನೋಡಲಿಚ್ಛಿಸಿಲ್ಲ. ಇಳಿಹೊತ್ತಾದರೂ ಸೆಕೆಯು ರವಷ್ಟೂ ಇಳಿದಿಲ್ಲ. ನೆಲಕ್ಕೂ ಜ್ವರ, ನೀರಿಗೂ ಜ್ವರ. ಹೊಳೆಯ ದಡದಲ್ಲಿ ವಿಶಾಲತೆ ತೋರುವುದೆಂದು ಮಾತ್ರ ಆ ವಿಶಾಲತೆಗೆ ತಂಪಿನ ಹೆಸರುಕೊಟ್ಟು ಅತ್ತ ನಡೆದು, ದಂಡೆಯಲ್ಲಿ ಪಿಸುಮಾತಾಡುತ್ತ ಕುಳಿತಿದ್ದೇವೆ. ಇತ್ತ, ನಿನ್ನೆ ತಾನೆ ಪಾಸುಪಟ್ಟಿಯಲ್ಲಿ ಹೆಸರು ಮುದ್ರಣ ಹೊಂದಿದ ಕೊಲೆಜ್ ವಿದ್ಯಾರ್ಥಿಗಳು, ಈ ಬೇಸುಗೆಯ ವ್ಯಥೆಯನ್ನೆ ಮರೆತು, ಹಾಯಿ ತುಂಬಲು ಗಾಳಿಯಿರದುದರಿಂದ ದಡಕ್ಕೆ ತಾಗಿ ತೇಲುತ್ತಿರುವ ದೊಡ್ಡ ದೋಣಿಯನ್ನೇರಿ, ಯಾವ ಕಡೆಗೆ ವಿಜಯ ಯಾತ್ರೆ ಮಾಡಬಹುದೆಂದು ಹಿಂದೆ ಅಲ್ಲಾವುದ್ದೀನ, ಆಲಿಬಾಬರ ಕಥೆಯೋದಿದ್ದುದನ್ನು ನೆನೆದು ಪರಾಮರ್ಶಿಸುತ್ತಿದ್ದಾರೆ. ಅತ್ತ 25–30 ವರ್ಷಗಳ ಹಿಂದೆಯೆ ಏನೋ ಅವರೂ ಪಾಸುಪಟ್ಟಿಯೊಂದರಲ್ಲಿ ಹೆಸರು ಕಂಡಿದ್ದು, ಅಂದಿನಿಂದ ಇಂತಹ ವಿಜಯ ಯಾತ್ರೆಯನ್ನು ಮಾಡಿ ಮುಗಿಸಿ, ಈಗ ಸ್ಥಿರವಾದ ಪೀಯರಿನ ಮೇಲೆ ಮಂಡಲ ರಚಿಸಿ ಕೂತಿದ್ದು, ಸಿಂದಬಾದ ನಾವಿಕನಂತೆ ತಮ್ಮ ಅಪೂರ್ವ ಯಾತ್ರಾ ವೃತ್ತಾಂತಗಳನ್ನು ಒಬ್ಬೊಬ್ಬರು ಹೇಳುತ್ತ, ವೃದ್ಧರಾದರೂ ತಾರುಣ್ಯದ ನವಿರಿಂದ ನಗುವ ಪೆನ್ಶನರರೂ ಸದ್ಯಕ್ಕೆ ಬೇಸುಗೆಯ ಪೀಡೆಯನ್ನ ಮರೆತಿದ್ದಾರೆ. ಎಡಕ್ಕೆ, ಆಕಾಶದಲ್ಲಿ ತೋರದ ಕಪ್ಪುಮೋಡವನ್ನು ಕಾರುತ್ತ, ಹೊಗೆಯ ಗಾತ್ರಕ್ಕೂ ಹೆಚ್ಚಾದ ಗುಡುಗಿನಿಂದ, ಆದರೂ ನಿಧಾನವಾಗಿ ಚಲಿಸುವ ರೈಲ್ವೆ ಇಂಜಿನು; ಹೊಳೆಯಲ್ಲಿ, ಏಕೋ ಸೊಯ್ಯೆಂದು ಉದ್ದಕ್ಕೂ ಅಗಲಕ್ಕೂ ಸುಳಿದಾಡಿ ತಟಕ್ಕನೆ ವಿಜೃಂಭಣೆಯಿರದ ಪೀಯರಿನ ಬಳಿ ತಂಗಿದೊಂದು ಮೋಟರುದೋಣಿ; ಹಿಂದಕ್ಕೆ, ಲೇಖನೀ

ವೀರರಾಗಿ ಮ್ಯುನಿಸಿಪಾಲಿಟಿಯ ಸೇವೆಗಾಗಿ ಸಮರ್ಪಿಸಿಕೊಳ್ಳಲುದ್ಯುಕ್ತರಾದ 197 ಉಮೇದ್ವಾರರುಗಳಲ್ಲಿ ನಾಲ್ವರು ಗುಮಾಸ್ತೆಯರ ನೇಮಕಕ್ಕಾಗಿ ಅತಿ ಗಭೀರ ಆಲೋಚನಾಪರರಾಗಿರುವ ಜಿ ಫೀಸರರ ಮೌನಭಂಗವಾಗುವ ಮುಹೂರ್ತ ಕಾಯುತ್ತಿರುವ ಅಷ್ಟು ಮಂದಿ (ಚಾದಗೆಗಳು ಮಳೆಹನಿ ಕಾದಿರುವಂತೆ) ಮತ್ತೊಂದು ಕಡೆ, ಗೃಹಕೃತ್ಯದಿಂದ ಪರಮಾರ್ಥವನ್ನೂ ಕಾರ್ಖಾನೆ ಕೂಲಿಯಿಂದ ಪುರುಷಾರ್ಥವನ್ನೂ ಸಾಧಿಸಿ, ಸ್ತ್ರೀ ಧರ್ಮವನ್ನು ಅಚ್ಚುಳಿಯದೆ ಪಾಲಿಸುತ್ತ, ಈಗ ತಾನೆ ಮನೆಯ ಒಲೆಯ ಬಳಿಗೆಂದು ಒಲವಿಂದ ಹಿಂತಿರುಗುವ ಹೆಂಗಸರ ಹಿಂಡು. ಈ ಚಿತ್ರಗಳೊಂದೊಂದನ್ನೆ ನೋಡುತ್ತ ಭಾವಿಸುತ್ತಲಿದ್ದರೆ ಮಾತ್ರ ಬೇಸಗೆಯ ತಾಪವನ್ನು ಮರೆಯಲು ಅನುಕೂಲವಾಗಿದ್ದಿತೆಂದು ಹಾಗೆ ಭಾವಿಸುವಾಗ, ನಿರುದ್ದೇಶರಾಗಿ ನಿರುದ್ಯೋಗಿಗಳಾಗಿ ಗಂಭೀರವಾಗಿ ಅತ್ತಿತ್ತ ಹೋಗುತ್ತ ಬರುತ್ತ ನೂತನ ಮಾದರಿಯ ಪೋಷಾಕು ಪ್ರಕಾರಗಳನ್ನು ಪ್ರದರ್ಶಿಸುವ ಕೆಲವರನ್ನು ಕಾಣಬಹುದಾಗಿದ್ದಿತು.

ಇಷ್ಟರಲ್ಲಿ,—ಭಗವಾನ್ ಸೂರ್ಯನಾರಾಯಣನು ಪಶ್ಚಿಮವಾರಿಧಿಯಲ್ಲಿ ಅಸ್ತಂಗತನಾಗುವ ಬದಲಾಗಿ, ಬರೇ ಸೂರ್ಯನು ಕಡಲಕಡೆಯಲ್ಲಿ ಕಂತಿದುದನ್ನು ಕಂಡು,– ಬೇಸುಗೆಯ ಬೇಗೆಗೆ ಬಳಲಿ ಬೆಂದು ಬಾಯಾರಿದ ಕುರಿಮರಿಯಂತಾದೆವು; ಎಂದರೆ, ಶ್ರೀಮಾನ್ ಸಂಪಾದಕ ಮಹಾಶಯರು ಮತ್ತು ನಾನು. ಇವರ ಆಸೆ,—ಪತ್ರಿಕೆಗೆ ಲೇಖನಗಳನ್ನು ಹೇಗೂ ಸೆಳೆಯೋಣವೆಂದು; ನನ್ನ ಉದ್ದೇಶ, ಬರೆಯಬಲ್ಲಷ್ಟು ಬರೆದುಕೊಟ್ಟು ಹೊರಗಿನ ಸೆಕೆಯಂತಿರಲಿ, ಒಳಗಣ ಹೊಟ್ಟೆಯನ್ನು ತಂಪಾಗಿರಿಸಿಕೊಳ್ಳಬೇಕೆಂದು. ಸಣ್ಣಕತೆ, ಕವಿತೆ, ಹಾಸ್ಯ, ಒಂದಂಕದ ನಾಟಕ, ಇತ್ಯಾದಿ ಏನೂ ಒಂದು ಬಗೆ ಯಾರಿಂದಲಾದರೂ, ಸರಾಗ ಬರುತ್ತಲಿದ್ದರೆ, ಯಾವುದೊಂದು ಪತ್ರಿಕೆಗೆ ಕುಂದಿಲ್ಲ ಎಂಬುದನ್ನು ಇವರು ತಿಳಿದು, ಹಾಗೇ ಮಾಡಿಸಲು ಉಪಕ್ರಮಿಸಿದ್ದಾರೆ. ಕತೆಯಲ್ಲಿ ಶಿವರಾತ್ರಿಯ ಕಲ್ಲುಗಳು, ಕವಿತೆಯಲ್ಲಿ ಸಮಾಧಿಸ್ತೂಪಗಳು, ಹಾಸ್ಯದಲ್ಲಿ ವಿಕಟಪ್ರತಾಪ, ನಾಟಕದಲ್ಲಿ ತಿಮ್ಮಿಯ ತಿಮಿಂಗಿಲ, ಇಷ್ಟಿದ್ದರೆ ಧನ್ಯವಾಗುವುದೆಂದು; ನುರಿತ ಲೇಖಕನೆಂದರೆ, ಸರ್ವಾದೃತ ಸಾಹಿತ್ಯ ಸೇವಕನೆಂದರೆ,— ಈ ಚತುರ್ವಿಧಗಳಲ್ಲಿ ಯಾವುದೊಂದು ಅಥವಾ ಹೆಚ್ಚು ಬಗೆಯ ಲೇಖನ ಸೃಷ್ಟಿಮಾಡುವವನೆಂದು; ಅದರಲ್ಲೂ ಬೆಡಗು ಬೀರಿ, ಸಿನೆಮದಲ್ಲಿನ ಪರಿಚ್ಛೇದಗಳಂತೆ ಒಂದೊಂದು ಸಲ ಪ್ರಕಟವಾಗುವುದರ ಕೊನೆಗೆ ಕಥಾ ಪಾತ್ರಗಳಲ್ಲಾರಿಗೂ ಪ್ರಾಣಾಂತಿಕವಾಗುವಂತೆಯೂ ಪ್ರಯಾಣಕಾಲವು ಸಿದ್ಧವಾಗುವಂತೆಯೂ ಮಾಡಿ, ಅವನ ಉಸಿರು ಮುಂದಣವಾರದ ಪರಿಚ್ಛೇದ ಓದಸಿಗುವ ತನಕ ಉಳಿಯಿತೋ ಅಳಿಯಿತೋ ಎಂದು ಭಾವಿಸಿಯೇ ವಾಚಕನು ಏಳು ದಿನ ಅಳಿಯುತ್ತ ಉಳಿಯುವಂತೆ ಮಾಡಿದರೆ ಕೃತಾರ್ಥವಾಯಿತೆಂದು; ಎಲ್ಲ ಲೇಖನ ರೀತಿಯನ್ನೂ ವಿವರಿಸಿದ್ದಾಯಿತು.

ಬರೆಯಲೇನೆಂದರಿಯದೆ ಮೋಸಹೋದ ನೂರಾರು ಸಾಹಿತ್ಯ ಸೇವಕರು

ನಮ್ಮ ಸುತ್ತಲೂ ಅಲ್ಲೇ ಅಡ್ಡಾಡುತ್ತಿರುವಾಗ, ಇವರ ಮಾತಿಗೆ ಬರೆದುದೇನೆಂದರಿಯದೆ ಬರೆದೂ ಮೋಸಹೋಗುವುದಕ್ಕೆ ಸಿದ್ಧರಾಗಬಹುದಾದ ಲೇಖಕರಿದ್ದಾರೆಯೆ? ಅದರಲ್ಲೂ ಪುನಃ ವಿಮರ್ಶಕರಿರುವರು, ಕೃಶಾನುಗಳು. ದುಡ್ಡುಕೊಟ್ಟುಕೊಂಡು ಓದುವವರು ದೂರಿದರೆ ಸಹಿಸಬೇಕು; ದುಡ್ಡು ಕೊಡದೆ ಓದುವ ಚಾಳಿಯೇ ಮುಖ್ಯ ಲಕ್ಷಣವಾಗಿರುವ ವಿಮರ್ಶಕರೂ ಪ್ರಚಾರಕರೂ ಏನೆಂದರೂ ಬರೆದವನಿಗೆ ದುಬಾರಿಯ ಹಾನಿ,—ದುಡ್ಡೂ ಇಲ್ಲ, ಬೇರೆ ಕೊಳ್ಳುವ ಗಿರಾಕಿಯೂ ತಪ್ಪುವನು. ಭಾಷೆ ಮತ್ತು ಶೈಲಿ, ಇವುಗಳ ರಗಳೆ ಪುನಃ ಇದ್ದೇ ಇದೆ. 'ವಿಷಯ ಬಲು ಕಠಿನ; ವಿಚಾರ ಅತ್ಯಲ್ಪ; ವಿನೋದ ಕಿರಿದು.' ಹೀಗಾದರೆ ಬರೆದವನು ಮಾತ್ರ ಓದಿ, ಲೇಖನಕ್ಕೆ ತನ್ನ ಹೆಸರು ಕೊಡಬಹುದಲ್ಲದೆ, ಸಂಪಾದಕನು ಸಹ ಅದನ್ನು ಓದುವ ಹಾಗಿಲ್ಲ. ಪಠ್ಯಪುಸ್ತಕವನ್ನಲ್ಲದೆ, (ಅದನ್ನು ತಾನೇ ಬರೆದು ತಾನೇ ವಿಮರ್ಶಿಸಿ, ತಾನೇ ನೇಮಿಸಿ, ತಾನೇ ಪರೀಕ್ಷಕನಾದರೆ ಮಾತ್ರ ಅಂಥ ಪುಸ್ತಕವನ್ನು ಬೇರೆ ಉಪಾಯವಿಲ್ಲದೆ ಓದಬೇಕಾಗುತ್ತದೆಂದೂ) ಇತರ ಪುಸ್ತಕ ಓದುವವರಿಲ್ಲೆಂದು ಕನ್ನಡ ಪುಸ್ತಕಗಳ ಹಣೆಯ ಮೇಲೆ ಬರೆದ ಒಕ್ಕಣೆಯಿದೆಂದೂ ಒಂದು ಅಪವಾದ ಇದ್ದೇ ಇದೆಯಷ್ಟೆ. ಹೀಗೆಲ್ಲ ಭಾವಿಸಿ, ಜೇಗೆಯ ನೆವಹಿಡಿದು ಮೌನವಾಗಿ ಕೂತರೆ, ಸಂಪಾದಕರು ಕೇಳುವವರೆ? ಮುದ್ರಣಾಲಯಗಳನ್ನು ಊರ್ಜಿತಪಡಿಸುವುದಕ್ಕಾಗಿ ಅಲ್ಲದಿದ್ದರೂ, ಮುದ್ರಣಕಾರ್ಯದಲ್ಲಿ ಕೆಲಸಮಾಡುವವರಿಗೂ, ಲೇಖಕ–ಪ್ರಕಾಶಕರಿಗೆ ಚಿಕ್ಕಾಸು ಸಿಗದಿದ್ದರೂ ಖಂಡಿಗಟ್ಟಲೆಯಾಗಿ ಹಳೆ ಪುಸ್ತಕದ ಕಟ್ಟುಗಳನ್ನು ಮಾರುವವರಿಗೂ ರಸಿಕ ವಾಚಕರಿಗಲ್ಲದಿದ್ದರೂ ರಸಜ್ಞ ಗೆದ್ದಲು ದಂಡುಗಳಿಗೂ ಆಹಾರ ಸಂಪಾದನೆಯಾಗಲೆಂದು, ಅಷ್ಟಾದರೂ ದಾನಬುದ್ಧಿಯಿಂದ ತ್ಯಾಗಶೀಲನಾಗಿ ಕರ್ತವ್ಯನಿಷ್ಠನಾದ ಕನ್ನಡಿಗನಾಗಲೇಬೇಕೆಂದು ಅವರು ಮೈದಾನು ಭಾಷಣವನ್ನು ಲಕ್ಷಣವಾಗಿ ಮಾಡಿ ಮುಗಿಸಿ ನನ್ನನ್ನು ಹುರಿದುಂಬಿಸಿದರು.

ಅಂತೂ, ನಿರುದ್ಯೋಗಿಗಳ ಸಮಸ್ಯೆಯನ್ನು ನಿವಾರಿಸಲು, ಬಿಡಿಸಲು, ಅಥವಾ ಪೂರಯಿಸಲು (ಇವುಗಳ ತಾತ್ಪರ್ಯ ಒಂದೇಯಾಗಿರಬಹುದು) ಇದೊಂದು ಹಂಚಿಕೆಯೆಂದಾಯಿತು. ಸಣ್ಣಕತೆಗಳನ್ನೆ ಬರೆಯಬೇಕೆಂದಾಯಿತು; ನಮ್ಮ ಖರ್ಚು ಹೇರಳವಾಗಿದ್ದರೂ ಜೀವಮಾನವು ಸ್ವಲ್ಪ; ನಿರುದ್ಯೋಗಿಗಳೇ ನಾವಾದರೂ ನಮಗೆ ಓದಲು ಅವಕಾಶ ಕಡಿಮೆ; ಚಿಂತಾಮಯ ಜೀವನವಾದರೂ ಕಥಾವಿನೋದವು ಅಗತ್ಯ; ಎಲ್ಲರಂತೆ ನಾವಾದರೂ, ನಾವು ನೂತನಧೋರಣೆಯವರು; ಪ್ರಪಂಚವೇ ಮಿಥ್ಯ, ಜೀವನವೇ ಮಾಯೆ ಎಂದಿರುವಾಗ ಕತೆಗಳೇ ಸರಸ್ವತಿಯ ಸರ್ವಸ್ವ;—ಎಂದು ಮೊದಲಾಗಿ ಬೋಧನೆ, ಸೂಚನೆ, ಅನುಜ್ಞೆ. ಇಷ್ಟೂ ಅಲ್ಲದೆ, ನನ್ನ ಸ್ವಚ್ಛಂದ ಮನೋವೃತ್ತಿಗಾಗಿ, ಅಗತ್ಯ ತೋರಿದರೆ,—'ಶ್ರೀನಿವಾಸ ಸುತ'— 'ಗೋಪಾಲಪಿತ'— 'ಅನಸೂಯಾಪತಿ'—'ಟೌನ್‌ಬೇಂಕ್ ಪಾಲಿತ'—'ಕೋಮಲವಿಲಾಸ ಭಕ್ತ'— 'ಕನ್ನಡ ನಂದನ' ಇತ್ಯಾದಿಯಾಗಿ ಮುದ್ರಿ

ಕೆಯನ್ನೂ ಶಾಸನವಿರಿಸಿ, ಮೋರೆಮರೆಯಲ್ಲಿರಿಸಿಕೊಳ್ಳಲೂ ಅನುಕೂಲ ಉಪದೇಶ ಸಿಕ್ಕಿತು.

"ಆಗ,—ಬಲು ರಭಸದಿಂದ ಕೇತು ರಾಕ್ಷಸನು, ಆಗಲೆ ಕಂತಿದ ಸೂರ್ಯನನ್ನು ನುಂಗಲು, ಅಟ್ಟಹಾಸದಿಂದ ಕಣ್ಗೆರಳಿ ಹೊಗೆಸುಯ್ಯುತ ಎತ್ತಣಿಂದಲೋ ಎರಗಿದಂತೆ,-ಪ್ರಬಲವಾಗಿ ಗಾಳಿ ನಾಲ್ಕೂ ಕಡೆಯಿಂದ ಬೀಸಿತು. ಕತ್ತಲೆ ಗಾಢವಾಯಿತು. ಗುಡುಗಿನ ಗರ್ಜನೆ ನಡುಗಿಸಿತು. ಆಕಾಶದಗಲಕ್ಕೆ ಮಿಂಚಿನ ಹತ್ತೆಂಟು ರೈಲುಮಾರ್ಗಗಳು ಫಕ್ಕನೆ ತೋರಿ ಅಡಗಿದುವು. ಒಂದೆರಡು ಕಡೆ ಸಿಡಿಲು ಹತ್ತಿರವೇ ಎರಗಿದಂತಾಯಿತು. ಹೊಳೆಯ ದಡದಲ್ಲೊಂದು ಚಿಕ್ಕ ಗುಡಿಸಲಿನಲ್ಲಿ, ಆಗಲೆ ಹೊತ್ತಿಸಿದ್ದ ಮಿಣಿಮಿಣಿ ಚಿಮಿಣಿ ದೀಪವು ಆರಿಹೋಯಿತು. ಮಳೆ ಗಾಳಿ ಒಳಕ್ಕೆ ಸುಳಿಯುದಂತೆ, ಗುಡಿಸಲು ತುಂಬಿ ಅದನ್ನೆಬ್ಬಿಸಿ ಕೊಂಡೊಯ್ಯದಂತೆ ಬಾಗಿಲಿಕ್ಕಲು ಬಡವೆಯೊಬ್ಬಳು ಹೊಸ್ತಿಲ ಕಡೆಗೆ ಬಂದಳು. ಬಾಗಿಲಿಕ್ಕಿ ನೋಡಿದರೆ, ಎಳೆಯ ಅದೊಂದೇ ಕೂಸು ಒಳಗಿಲ್ಲ. ಬಾಗಿಲು ತೆರೆದು ಹೊರಗೆ ಬಂದು ಕೂಗಿದಳು. ಮಿಂಚು! ಮಗು ಕಾಣುತ್ತಿದೆ; ಕೂಗನ್ನು ಕೇಳದು. ಮುಂದೆ ನಡೆದಳು, ಮಗುವೂ ಕತ್ತಲಲ್ಲಿ ಗಾಳಿಯ ಸೆಳತಕ್ಕೆ ದಿಕ್ಕುಗೆಟ್ಟು ಮುಂದಾಯಿತು. ಮಿಂಚು! ಹನ್ನೆರಡು ಮಾರು ಆಳದ ಬಾವಿಯೊಂದು, ಆವರಣವಿಲ್ಲ, ತಡೆಯಿಲ್ಲ, ಅದೇ ಒಣಬಾವಿಯನ್ನು ಆಳವಾಗಿ ತೆರೆದು ಹಾದಿಯಲ್ಲಿದೆ. ಮಿಂಚು! ಮಗು ಅದರ ಬದಿಯಿಂದ ಎರಡೇ ಅಡಿ ದೂರ; ಕಾಲಿಟ್ಟು ನಡೆಯಲಾರದೆ ಅಳುತ್ತ ನಿಂತಿದೆ. ಬಿರುಗಾಳಿ! ಮಿಂಚು! ಮಗು ಮತ್ತೊಂದಡಿ ಹತ್ತಿರವಾಗಿದೆ. ಮಿಂಚು! ತಾಯಿ ಮಗುವಿನಿಂದ ಎರಡೇ ಮಾರು ದೂರ, ಅವಳ ಸೀರೆಯ ಸೆರಗು ಗಾಳಿಗೆ ನಾಲ್ಕಡಿ ಹಿಂದಕ್ಕೆ ಗಾಳೀಪಟವಾಗಿ ಹಾರುತ್ತಿದೆ. ಗುಡುಗು! ಅವಳು ಕೂಗಿದರೂ ಗೋಳಿಟ್ಟರೂ ಕೇಳುವವರಿಲ್ಲ; ಇನ್ನು ಮಾತು ಹೊರಡದು. ಮಿಂಚು! ಗುಡಿಸಲ ಕಂಭವಾದ ತೆಂಗಿನ ಮರಕ್ಕೆ ಸಿಡಿಲೆರಗಿತು! ತಾಯಿ ಹಾರಿ ಮಗುವನ್ನು ಮುಟ್ಟುವಳೆಂಬಷ್ಟರಲ್ಲಿ, ಗುಡುಗಿನ ಗರ್ಜನೆಗೆ ಅಂಗಳವಲ್ಲಾಡಿತು. ತಾಯಿಗೆ ಇನ್ನು ಪ್ರಾಣವೆಂದರೆ,—ಅವಳ ಎದೆಯೊಳಗಿನದಲ್ಲ, ಒಂದೇ ಮೊಳ ದೂರದಲ್ಲಿರುವ, ಅವಳದೊಂದೇ ಮಗು. ಅದೇ ಅಲ್ಲಿ, ಬಾವಿಯ ಅಂಚಿನ ಬಳಿಯಲ್ಲಿ! ಮಿಂಚು, ಕೂಡಲೆ ಗುಡುಗು,—ಸಿಡಿಲು ಬಡಿಯಿತು. ಆಗ ಏನೆನ್ನಲಿ?—ಭೂಮಿ ಜಲ ಅಗ್ನಿ ವಾಯು ಆಕಾಶಗಳೆಂಬೀ ಪಂಚಭೂತಗಳಿಗೂ ಈ ಮಗುವಿನ ಬಲಿಯಾಗಬೇಕೆಂಬಾಸೆಯೇ?—"(ಮುಂದುವರಿಯುವುದು.)

—ಹೀಗೆ ಮಿದುಳಿಂದ ಕಥೆಯು ಸುರಿಯಿತು. ಇಂತಹದೇನೂ ಬೇಡ; ಈಗಿನ ಹೊಸ ರಚನೆಯ ಪ್ರಕಾರದವಾಗಬೇಕೆಂದರು. ದಿನಕ್ಕೆ ಹತ್ತು ಹೊಚ್ಚಹೊಸ ಸಣ್ಣಕತೆಗಳು ಹೊರಡುತ್ತಲೇ ಇವೆಯೆಂದು ತಿಳಿದೇ ಇರುವೆವು. ಆದರೂ ಅವುಗಳೊಡನೆ ಇದೂ ಒಂದಿರಲಿ,—

ಹತ್ತರೊಡನೆ ಹನ್ನೊಂದು!

ಇಂತು ಓದುಗರ ಪೀಡಕ,

ನರಸಿಂಹ.

ಹತ್ತರೊಡನೆ ಹನ್ನೊಂದು

೧. ಏಕಾದಶಿಯ ಪ್ರೇತ

ಅಂದು ನಿಜವಾಗಿಯೂ ಏಕಾದಶಿ ಅದೊಂದು ಕೃಷ್ಣಪಕ್ಷದಲ್ಲಿನ ಮೊದಲ ಹತ್ತು ದಿನಗಳ ತರುವಾಯದ ಹನ್ನೊಂದನೆಯ ತಿಥಿ. ಉರಿಬಿಸಿಲು, ನೀರಿಗೆ ತತ್ವಾರ. ಎಂತೂ ಉಪವಾಸವೆ; ನೀರಡಿಕೆಗೂ ಉಪಾಯವಿಲ್ಲದರಿಂದ ಕಡು ಉಪವಾಸ. ಉಪವಾಸವಿಂತು ಕಠಿನವೇ ಆಗಿದ್ದ ಬಳಿಕ ಒಂದಿಷ್ಟು ಭಕ್ತಿಕಥಾ ಸಲ್ಲಾಪದಿಂದ ಕಾಲಕ್ಷೇಪ ಮಾಡುವುದು ಹರಿವಾಸವ್ರತದ ಪೂರ್ಣ ಫಲವನ್ನು ಕೊಡಬಲ್ಲುದು. ಆಯಾಸ ಬಹಳವಾಗಿದ್ದರೂ, ಅದರಿಂದ ಉಪವಾಸಿಗೆ ಅಲ್ಲೆ ನಿದ್ದೆ ಹಿಡಿಯುವಂತಿದ್ದರೂ, ಜಂಪುಹಿಡಿದರೂ ವ್ರತಭಂಗ. ಏನು ಮಾಡೋಣ? ಭಕ್ತಾಧೀನ ದೇವರ ಕರುಣೆಗೆ ಎಣೆಯುಂಟೆ? ತಿಪಟೂರಿಂದ ಸರೋಜಿನಿ ಎಂಬ ಏಳೇ ವರ್ಷ ವಯಸ್ಸಿನ ಬಾಲಿಕೆಯ ಹರಿಕಥಾ ಕಾಲಕ್ಷೇಪವು ರಾತ್ರಿ ಭೋಜನಾನಂತರ (ಎಂದರೆ, ಅಂದಿನ ದಲ್ಲದಿದ್ದರೂ ಎಂದಿನ ರೀತಿಯಂತೆ ೯ ಘಂಟೆಗೆ) ಪ್ರಾರಂಭ. ಮೊದಲನೆ ಹರಿಕಥೆ, ದೇವರ ಸೇವೆಗಾಗಿ, ದೇವಸ್ಥಾನದಲ್ಲಿ, ಧರ್ಮಕ್ಕೆ; ಮೊದಲು ಟಿಕೇಟೂ ಇಲ್ಲ, ನಂತರ ವಂತಿಗೆಯೂ ಇಲ್ಲ. ಹೊರಟೆನು.

ದೇವಸ್ಥಾನದ ನಾಲ್ಕು ಹೊರಸುತ್ತು, ನಾಲ್ಕು ಒಳಸುತ್ತು, ಹೆಬ್ಬಾಗಿಲಿಂದ ತೀರ್ಥಮಂಟಪದ ವರೆಗೆ ಜನಸ್ತೋಮ. ಕುತೂಹಲದ ಗಂಡಸರು, ಲವಲವಿಕೆಯ ಹೆಂಗಸರು, ಅಳುಪಿಕೆಯ ಮಕ್ಕಳು, ಊರಿನ ಊರೇ, ನೆರೆಹಳ್ಳಿಯ ಹಳ್ಳಿಯೇ ಕೂಡಿವೆ. ಎಂತೆಂತಹ ಕೀರ್ತನಾ ದಿಗ್ಗಜ ಪಂಚಾನನರನ್ನು ಟೀಕಿಸಿದ ಗಂಡುತನವೂ, ಪುರುಷ ಸಮಾನತೆಗಾಗಿ ಹಾತೊರೆದ ದೇವೀಗಣವೂ, ಪ್ರಪಂಚಕ್ಕೆಲ್ಲ ತಮ್ಮ ಇರವನ್ನು ಸಾರಬೇಕೆಂಬ ಉದ್ದೇಶವನ್ನುಳ್ಳ ಭಾವೀಜನಾಂಗವಾಗಿರುವ ಬಾಯಿತೆರೆದೇ ಕೂಗುವ ದೇಶಸಂತಾನವೂ ಈ ಬಾಲಿಕಾ ಹರಿದಾಸಿಯ ಪ್ರದರ್ಶನ ನೋಡಲು ಬಂದಿದ್ದು, ತಮ್ಮ ನಡವಳಿಕೆಯಿಂದ ಬಾಲಿಕೆಯ ಹರಿಕಥೆಯೊಂದನ್ನಲ್ಲದೆ ಭೂಗೋಳದ ವೃತ್ತಾಂತವನ್ನೆಲ್ಲ ಒಮ್ಮೆಲೇ ಎಲ್ಲರೂ ಆಗುವಷ್ಟು ಗದ್ದಲದಿಂದ ಸಾರುತ್ತಿದ್ದಂತೆ ತೋರಿತು. ಅವಳ ಗಾಯನ, ಮಾತಿನ ಒಕ್ಕಣೆ, ನಿರೂಪಣೆಯ ಕ್ರಮ, ಅಭಿನಯ, ಇತ್ಯಾದಿಗಳ ಕಡೆಗೆ ಮನಸ್ಸು ಹೋಗದಂತೆ ಈ ಗದ್ದಲವೇ ಸಾಕಷ್ಟಿದ್ದರೂ, ಅವಳಲ್ಲಿನ ಕುಂದುಗಳೊಂದೂ ಕಾಣದಂತೆ, ಅವಳಿಗೆ ಕಟ್ಟಿದ್ದ ರಾಧಾ

ಕೃಷ್ಣ ವೇಷವೂ, ಹೆಸರುಗೊಂಡ ಕೆಮ್ಮಣ್ಣಾಚಾರ್‍ರ ಮೃದಂಗವೂ, ಕುಪ್ಪಣ್ಣಾಚಾರ್‍ರ ಹಾರ್ಮೋನಿಯಮೂ ಬಹಳ ವಿಚಕ್ಷಣತೆಯಿಂದ ಸಾಧಿಸುತಿದ್ದುವು.

ಹಸಿದು ನಿದ್ದೆಕೆಡಿಸಿಕೊಂಡುದಕ್ಕೆ ಸಂಬಳವಾಗಿ, ನಾನು ಬಾಲಿಕೆಯಾಡುತ್ತಿದ್ದ ರಂಗಸ್ಥಳದ ಬಳಿಯಲ್ಲೇ ಇದ್ದೆನು. ನಡೆಯುತ್ತಿದ್ದ ಗದ್ದಲದಲ್ಲಿ ಮನಸೋತಿದ್ದೆನು. ನಾನಿಲ್ಲದೆ ಅಲ್ಲಿ ಇನ್ನಾರೂ ಇಲ್ಲವೆಂಬಷ್ಟು ನಂಬಿಕೊಂಡಿದ್ದೆನು. ಆದರೆ,—

'ನಿಮ್ಮ ಅಭಿಪ್ರಾಯವೇನು?' ಎಂದು ನುಸಿಯೊಂದು ಉಚ್ಚಸ್ವರದಲ್ಲಿ ನನ್ನ ಕಿವಿಯೊಳಕ್ಕೇ ಕೇಳಿತು.

ತಲೆ ತಿರುಗಿದಂತಾಗಿ, ನನ್ನ ಮೈಮರವೆಯಿಂದ ಎಚ್ಚರ ಹೊಂದಿದೆನು. ಹಿಂದೆ ನೋಡುವಾಗ, ತಂಬೂರಿಯ ಬುರುಡೆ ತಲೆಯ, ಮುಖವೆಲ್ಲ ಸಿಡುಬು ಕಲೆಯ, ಉದಾಸೀನ ದೃಷ್ಟಿಯವನೊಬ್ಬನು ನನ್ನ ಬೆನ್ನ ಬಳಿಯಲ್ಲಿದ್ದು, ನನ್ನ ಭುಜದ ಮೇಲೆ ತನ್ನ ತಲೆಯಿಟ್ಟು ಕಥೆ ಕೇಳುತಿದ್ದು, ಈ ಪ್ರಶ್ನೆ ಕೇಳಿದವನೆಂದು ತಿಳಿದೆನು. ಅದುವರೆಗೆ ಆಗಾಗ ನನ್ನ ಕಿವಿಯಲ್ಲಿ, ಛೀ, ಥೂ, ಇತ್ಯಾದಿ ಒಂದಕ್ಷರದ ಟೀಕೆಗಳನ್ನು ಮಾಡುತ್ತಿದ್ದವನು ಇವನೇ ಎಂದು ಈಗ ತಿಳಿದೆನು.

'ಅಭಿಪ್ರಾಯವೆ? ಆಶ್ಚರ್ಯ, ವಿಚಿತ್ರ, ಕೌತುಕ, ನಭೂತೋ ನಭವಿಷ್ಯತಿ' ಎಂದೆನು ನಾನು.

'ಇಸ್ಸಿ, ಇಂತಹ ನಾಲ್ವರನ್ನು ನಾನು ಮನೆಯಲ್ಲಿ ಸಾಕುತಿದ್ದೆನು; ಇಂತಹ ಎಂದೇನು, ಇನ್ನೆಷ್ಟೋ ಮೇಲ್ತರಗತಿಯವರಿದ್ದರು!' ಎಂದನವನು.

ನಾನು ಬರೇ—ಹಾಂ...ಎಂದೆನು.

'ಅಲ್ಲ, ಸುಳ್ಳಲ್ಲ, ಉಡಾಫೆ ಮಾತಲ್ಲ, ನಿಜವಾಗಿಯೂ. ನೀವು ನಂಬಲಾರಿರಾದರೆ . . .' ಎನ್ನುವುದರೊಳಗೆ ಒಂದು ಕೊಡೆಯ ಹಿಡಿಯು ಆತನ ಕೊರಳ ಸುತ್ತು ಹಾವಿನ ಬಳಿಯಂತಾಗಿ ನುಸುಳಿ ಹಿಂದಕ್ಕೆಳೆದು ಆತನನ್ನು ಮಲಗಿಸಿದಂತಾಯಿತು. ಅವನ ಪೂರ್ಣಾಭಿಪ್ರಾಯ ವಿವರಣೆಗೆ ಅವಕಾಶ ಸಿಗಲಿಲ್ಲ. ನಾನೂ ಅವನನ್ನು ಮರೆತೆನು; ಮರೆತುದರಿಂದ ನಾನು ನೊಂದುದಿಲ್ಲ, ಕಳವಳಿಸಿಲ್ಲ.

ಹರಿಕಥಾಸೇವೆ ಮುಗಿದು ಮನೆಗೆ ಹೊರಟು, ಜನಸಾಗರದಲ್ಲಿ ತೇಲುತ್ತ ಮುಳುಗುತ್ತ ನಾನು ಹೇಗೂ ದಾರಿ ಮಾಡಿಕೊಂಡು ಮುಂದರಿವಾಗ, ಅವನನ್ನು ನನ್ನ ಮಗ್ಗುಲಲ್ಲೆ ಕಂಡೆನು. ನಾನೇನು ಪರಿಚಯಕ್ಕಾರಂಭಿಸಿರಲಿಲ್ಲವಾದರೂ, ಅವನೇ ಬೆನ್ನುತಟ್ಟಿ,–"ಒಂದು ಸಲ ನಾಲ್ವರು ಇಂತಹರನ್ನು ಸಾಕುತಿದ್ದೆನು, ನೀವೇನೆನ್ನುತ್ತೀರಿ?" ಎಂದನು.

'ಏನೆನ್ನಬಹುದು? ಹೇಳಲೇನು ಉಳಿದಿದೆ?' ಎಂದೆನು ನಾನು.

'ಹಾಗೆನ್ನಿ, ಸಂಗೀತಗಾರರ ಮಾತು ಬಿಡಿ; ನಾಟಕ ಕಂಪೆನಿಯವರ, ಅಭಿನಯಕಾರರ ಹಿಂಡುಗಳಿಗೆ ಈಗ ಕಡಿಮೆ ಇದೆಯೇ?' ಎಂದನವನು.

'ಹಂ–ಬದುಕಿದ್ದರೆ ಯಥೇಷ್ಟವಾಯಿತೆನ್ನುವವರೆಷ್ಟೋ ಇದ್ದಾರಲ್ಲ!' ಎಂದೆನು ನಾನು.

'ನೀವೋ?' ಎಂದೇ ಅವನ ಪ್ರಶ್ನೆ; ಪ್ರಶ್ನೆ ಕೇಳಿದುದು ಅವನ ನಾಲಗೆಯಲ್ಲ, ಕಣ್ಣು.

'ನಾನು ಬೇಂಕಿನಲ್ಲಿ ಗುಮಾಸ್ತ' ಎಂದೊಡನೆ ಅವನ ಅದೇ ಕಣ್ಣು ಅರಳಿ ಹೊಳೆಯಿತು.

'ಹಾಗಿದ್ದರೆ, ಒಳ್ಳೇ ಶ್ರೀಮಂತ ರಾದರೂ ಉದಾರಸ್ವಭಾವದ ದಾನ ಶೂರರೆಲ್ಲರ ಪರಿಚಯ ನಿಮಗಿರಬೇಕಷ್ಟೆ?' ಎಂದೇ ಅವನ ವಿಚಾರ.

'ಹೂಂ—ಒಬ್ಬರಿಬ್ಬರನ್ನು ಬಲ್ಲೆ' ಎಂದು ಗೌರವಕ್ಕಾಗಿ ಹೇಳಿದೆನು.

ಆಗಲೆ, ಅವನ ಸ್ವರವು ಗಂಟೆಯ ಸ್ವರದಷ್ಟು ಗಂಭೀರವೂ, ಅವನ ಮೈಯು ಒಂಟೆಯ ಬೆನ್ನಂತೆ ವಿಕಾರವೂ ಹೊಂದಿತು. "ಧನ್ಯರೆಂದರೆ ನೀವೇ ಸರಿ. ಈ ಜನ್ಮಕ್ಕೊಮ್ಮೆ ದೊರೆಯ ಬಹುದಾದ ಅಪೂರ್ವ ಸಂದರ್ಭವೊಂದು ನಿಮಗೊದ ಗಿದೆ; ಕೇಳಿರಿ, ಒಂದಿಷ್ಟು ಅವಕಾಶ ಕೊಡಿರಿ. ನಿಮಗೆ ಕುಬೇರನ ಭಂಡಾರ ವನ್ನೂ, ಅಶ್ವತ್ಥಾಮನ ಅಮರತ್ವವನ್ನೂ ಸಂಪಾದಿಸಿಕೊಡತಕ್ಕ ಒಂದು ವಿಚಾರ ಸೂಕ್ಷ್ಮವನ್ನು ನಾನು ಬಲ್ಲೆನು" ಎಂದ ನವನು.

ನಾನು ಮರುಮಾತಾಡಲಿಲ್ಲ. ಅವನ ಮಾತು ನಾಟಿತು ಎಂದು ಭಾವಿಸಿದ ನವನು.

"ಇಷ್ಟೆ ಚುಟುಕಿನಲ್ಲಿ ಹೇಳುವೆನು. ಒಂದು ಕಾಲದಲ್ಲಿ ಇಂತಹ ಅಪ್ರತಿಮ ಪ್ರತಿಭಾವಂತರನ್ನು ಕೋಳಿತತ್ತಿಗಳಂತೆ ಬೇಕಾದವರಿಗೆ ಸಾವಿರಗಟ್ಟಲೆಯಾಗಿ ನಾನೇ ಒದಗಿಸುವ ಹಂಚಿಕೆಮಾಡು ವುದರಲ್ಲಿದ್ದೆನು. ಈಗ ಮಾಡುವುದೇನು? ಇದೇ ಹೊಳೆಯಾಚೆಗೆ ನನ್ನ ಬಿಡಾರ. ಅಲ್ಲಿಗೆ ಬನ್ನಿರಿ, ಹೋಗೋಣ" ಎಂದ ನವನು.

ಮೂರೇ ನಿಮಿಷದ ಹಾದಿಯೆಂದ ವನು, ನನ್ನನ್ನು ಮೂರು ಮೈಲು ದೂರ ಹೊಳೆದಂಡೆಯಾಚೆಗೆ ನಡೆಯಿಸಿಕೊಂಡು ನಡೆದನು. ದಾರಿಯಲ್ಲಿ ಪತ್ರಿಕೆಮಾರುವ ಹುಡುಗರು ಹಂಚುತ್ತಿದ್ದ ಚಿಕ್ಕ ನೋಟೀಸನ್ನು ಅವನು ಕಾಲಬಳಿಯಿಂದ ಎತ್ತಿ ಕೊಂಡು, ಅದರಲ್ಲಿ ಮೂರು ಕಾಸಿನ ನೆಲಗಡಲೆಯನ್ನು ಕ್ರಯಕ್ಕೆ ಪಡೆದು ಮಡಗಿ ಸುತ್ತಿಕೊಂಡು,—"ದಿವ್ಯ ಫಲಾ ಹಾರ. ಮಹಾತ್ಮಾಜೀಯವರ ಜೀವನ ಕ್ರಮದಂತೆ ನಡೆದರೆ ಎಷ್ಟು ಸುಖ!" ಎಂದನು.

ಅವನ ಮನೆಯಲ್ಲಿ ಚಾಪೆಯೊಂದು, ಕಾಲುಮಣೆಯೊಂದು. ಅವನೂರಿದ್ದ ಕಾಲುಮಣೆಯಲ್ಲಿ ನನಗಂತೂ ಸ್ಥಳವಿ ದ್ದಿಲ್ಲ; ಕೈಕಾಲು ಸಡಿಲು ಬಿಟ್ಟು ಕೂತಿ ರಲು ಚಾಪೆಯುತ್ತಮವೆಂದು ನನಗೆ ಸೂ ಚನೆಯಾಯಿತು. ಕಥಾರಂಭ. "ಏನೆನ್ನು ವಿರಿ? ನಮ್ಮ ತಂದೆ ಮಹಾಮೇಧಾವಿ ಗಳು, ಛಲವಂತರು. ನೂತನ ಧೋರಣೆ, ನೂತನ ಶೋಧಗಳಿಗೆ ಕೇವಲ ಬ್ರಹ್ಮ ರೆಂದರೇ ಅವರು. ಅವರು ತಮ್ಮಂತಹ ಪ್ರತಿಭಾಶಾಲಿಗಳನ್ನೆ ಸುತ್ತಲೂ ಸೃಷ್ಟಿಸಿ ರೂಪಿಸಿ ಬೆಳಸಿ ತಂದರು. ಅವರ ನಂತರ ಆ ಪಾಳೆಯವೆಲ್ಲ ಪಿತ್ರಾರ್ಜಿತವಾಗಿ ನನ್ನ ಕೈಸೇರಿತು" ಎಂದನವನು. ಚಕಿತನಾ ಗಿಯೋ, ಆಯಾಸದಿಂದಲೋ, ಬೇಸರ

ವಾಗಿಯೋ, 'ಭಗವಂತಾ!' ಎಂದೆನು ನಾನು. "ಬೇರೆ ಬೇರೆ ಜನಾಂಗಗಳಿಗೆ ಬೇರೆ ಬೇರೆ ವಿಷಯಗಳಲ್ಲಿ ನೈಪುಣ್ಯವಿದೆ. ಅಂತಹವರೊಳಗೆ ವಿವಾಹ ಮಾಡಿಸಿ, ಅವರ ಸಂತಾನವನ್ನು ತಿದ್ದಿ ತಂದರೆ, ವ್ಹ, ಜಗದೇಕ ಶಿರೋಮಣಿಗಳನ್ನೇ ಪ್ರದರ್ಶಿಸಬರುತ್ತಿದೆ!" ಎಂದು ಅವರು ತಿಳಿದಿದ್ದರು. ಆದಕ್ಕಾಗಿ, ಎಲ್ಲೆಲ್ಲಿಂದ ನಮ್ಮ ಊರಿಗೆ ಭಿಕ್ಷಾಟನೆಗಾಗಿ ಬರುತ್ತಿದ್ದ ನಾನಾ ಬಗೆಯ ಜನಗಳಿಂದ ಗಂಡು ಹೆಣ್ಣುಗಳನ್ನು ಆರಿಸಿಕೊಂಡು, ಅವರನ್ನು ಈ ಆಸ್ತಿಯ ಹುಟ್ಟುವಳಿಯಿಂದ ಅವರ ಕುಟುಂಬಗಳಿಗೆ ಧರ್ಮಾರ್ಥ ಮನೆ, ಅನ್ನ, ವಸ್ತ್ರ, ಎಲ್ಲ ಸಲಕರಣೆಗಳನ್ನು ಕೊಟ್ಟು, ಪ್ರತಿಯಾಗಿ ಅವರಿಂದ ವಿಧೇಯತೆಯನ್ನೇ ಮಾತ್ರ ಅಪೇಕ್ಷಿಸಿ, ಅವರಲ್ಲಿ ಹುಟ್ಟಿದ ಮಕ್ಕಳಿಗೆ ತನಗೆ ಬೇಕಾದ ರೀತಿಯಲ್ಲಿ ಶಿಕ್ಷಣ ಕೊಟ್ಟು, ಈ 'ಪ್ರತಿಭಾಶ್ರಮ'ವನ್ನು ಪ್ರಪಂಚದಲ್ಲೆಲ್ಲ ಹೆಸರುಗೊಳ್ಳುವಂತೆ ಮಾಡಿದರವರು!" ಎಂದು ಉತ್ಸಾಹದಿಂದ ನುಡಿದನವನು.

"ಅಂತೂ ಅವರ ಸಾಧನೆಗಳೆಲ್ಲ ಕೈಗೂಡಿದುವು?" ಎಂದೆನು ನಾನು.

"ಖಂಡಿತವಾಗಿಯೂ! ಆದರೆ, ಅದೊಂದು ಬಗೆಯ ಸೋಡ್ತಿಯಂತಾಯಿತು. ಅವರು ತರಬೇತು ಮಾಡಿದ ಮಕ್ಕಳೆಲ್ಲ ಅತಿ ವಿದ್ಯಾವಂತರಾಗಲೂ ಬಹುದು, ಅತಿ ತುಚ್ಛರೂ ಆಗಬಹುದು ಎಂಬಷ್ಟು ಫಲಪರಿಣಾಮಗಳಿದ್ದುವು. ಆದರೆ, ಅವರು ಕಾಳಿದಾಸನಂತೆ ಪ್ರತಿಯೊಬ್ಬರೂ ಸಾವಿರಾರು ಉತ್ಕೃಷ್ಟ 'ಮೇಘದೂತ'ಗಳನ್ನೆ ದಿನದಿನಕ್ಕೆ ರಚಿಸು

ತಿದ್ದರು; ಆಗದಿದ್ದರೆ, ಆಕಾಶವನ್ನು ನೋ
ಡುತ್ತಲೆ ಗಾಳಿ ಬೀಸಿದ ಕಡೆಗೆ ಸಿಳ
ಹಾಕುತ್ತ ಹಸಿವು ನಿದ್ದೆಗಳಿಲ್ಲದೆ ಓಡಾಡು
ತಿದ್ದರು. ಸಾಧ್ಯವಿದ್ದಲ್ಲಿ, ಶಿವಾಜಿಯಂ
ಮಹಾ ಪರಾಕ್ರಮಿಗಳಾಗಿ ಸೇನಾ
ನಾಯಕರಾಗುತಿದ್ದರು; ಇಲ್ಲದಿದ್ದಲ್ಲಿ
ಸಾವಿರ ನುಸಿಗಳನ್ನು ಒಂದೇಟಿಗೆ ಕೊ
ದು ಹಾಕುತಿದ್ದರು. ಸುಫಲವಾದಲ್ಲಿ
ರಿಕಾರ್ಡು ಸಂಗೀತವನ್ನೆ ಹಾಡುತಿದ್ದರು
ಅಲ್ಲದಿದ್ದಲ್ಲಿ, ಊರಿನ ನಾಯಿಗಳ
ಕೊಂಚ ಕೂಗುವ ಹಾಗೆ ಬಗುಳ
ತಿದ್ದರು. ಅದೇಂತಿದ್ದರೂ, ಅವರ ಆಶ್ರಮ
ಶಿಕ್ಷಣದ ತತ್ವವು ಅತಿ ಮಹತ್ವದ
ಅದ್ವಿತೀಯ ಎಂಬುದರಲ್ಲಿ ಸಂದೇಹವಿ
ಲ್ಲ. ಇರಲಿ. ಈಗ ಈ ಸಾಟಿಗೇನೆನ
ವಿರಿ?" ಎಂದನವನು.

"ಏನದು ಕೇಳೋಣ!" ಎಂದೆನ
ನಾನು.

ಅವನು ಅದೇ ನೆಲಗಡಲೆ ಸುತ್ತಿ
ಕಾಗದದ ಮೇಲೆ ಪೆನ್ಸಿಲಿನಿಂದ ಲೆಕ
ಹಾಕ ತೊಡಗಿದನು. ಒಂದು ವರ್ಷ
ದಲ್ಲಿ ಈ ಆಶ್ರಮದಲ್ಲಿ ತರಬೇತಾಗಬಹು
ದಾದ ನಾಲ್ವರು ಕಾಳಿದಾಸರು, ಐವರ
ತಾನಸೇನರು, ಇಬ್ಬರು ತೆನ್ನಾಲಿ ರಾಮ
ಕೃಷ್ಣರು, ಹತ್ತು ಮಂದಿ ಪುರಂದ
ದಾಸರು, ಇವರುಗಳ ಕಾವ್ಯ, ಸಂಗೀತ
ಹಾಸ್ಯ, ಹರಿಕಥಾದಿ ಪ್ರದರ್ಶನ ಪ್ರ
ಟನಗಳಿಂದ 63000 ರೂಪಾಯಿ ಸಂಪಾ
ದನೆ ಮಾಡಬಹುದು."

"ಇದು ಸ್ವಲ್ಪ ಹೆಚ್ಚಿನ ಅಂದಾಜು

"ಬಲ್ಲೆ, ಬಲ್ಲೆ. ಈ ಪ್ರತಿಭಾವ
ರಿಗೆ ಕೆಲವು ಅಭ್ಯಾಸಗಳೂ ಮನಸ್ಸಿ

ಡೊಂಕೂ ಇವೆ. ಇವುಗಳ ಸಮಾಧಾನಕ್ಕಾಗಿ ಸೇಕಡಾ 25ನ್ನು ಕಳೆಯಬೇಕು. ಅವರ ಶಿಕ್ಷಣ, ತಬೇತು, ಜಾಹೀರಾತು, ಆಹಾರ, ಇತ್ಯಾದಿಗಳಿಗೆ ಸೇಕಡಾ 25ನ್ನು ಕಳೆಯಬೇಕು. ಹೋಗಲಿ; ಹೇಗೂ ವರ್ಷಕ್ಕೆ 30000, ತಿಂಗಳಿಗೆ 2500, ದಿನಕ್ಕೆ 80, ತಾಸಿಗೆ 3½ ರೂಪಾಯಿ ನಿವ್ವಳ ಆದಾಯವಿದ್ದೇ ಇದೆ. ಆದರೂ, ಇನ್ನಷ್ಟು ವಿವರವನ್ನು ತಿಳಿಸುವೆನು. ನಮ್ಮ ನಾಲ್ವರು ಕಾಳಿದಾಸರಲ್ಲಿ ಒಬ್ಬನು ಈಗ ಕಾವ್ಯ ಬರೆವನಾದರೂ, ಕ್ಷಣದಲ್ಲಿ ಎರಡನೆ ಕಾಳಿದಾಸನನ್ನು ಬೈದು ಪದ್ಯಕಟ್ಟುವನು; ಮೂರನೆಯವನು ಹಾಲಿನ ಪಾಯಸವಿಲ್ಲದೆ ಒಂದಕ್ಷರವನ್ನೂ ಬರೆವುದಿಲ್ಲ; ನಾಲ್ಕನೆಯವನಿಗೆ ಸೈಕಲ್ ಸವಾರಿಯಲ್ಲಿದ್ದಾಗ ಮಾತ್ರ ಕಾವ್ಯವು ಒಸರುತ್ತಿದೆ. ತಾನಸೇನರಲ್ಲಿ ಒಬ್ಬನು ಚಾ ಕುಡಿದೇ ಹಾಡುವನು; ಮತ್ತೊಬ್ಬನು ಮೆಣಸು ನುಂಗಿದಷ್ಟಕ್ಕೆ ಮಾತ್ರ ಹಾಡುವನು; ಇವರಿಬ್ಬರು ಹಾಡುವರೆಂದು ತಿಳಿದಾಗ, ಉಳಿದಿಬ್ಬರು ಕೂಗುವರು; ಕೊನೆಯವನು ತಾನೊಬ್ಬನೇ ಇದ್ದರೆ ಮಾತ್ರ ಹಾಡುವನು, ಅಥವಾ ಸಾಯುವ ಮುಹೂರ್ತಕ್ಕೆ ಸರಿಯಾಗಿ ಹಾಡುವವನಂತೆ. ಇಬ್ಬರು ತೆನ್ನಾಲಿಗಳಲ್ಲಿ ಒಬ್ಬನ ಹಾಸ್ಯವು ಅವನನ್ನೇ ಮಾತ್ರ ನಗಿಸುತ್ತದೆ; ಮತ್ತೊಬ್ಬನು ತಾನೂ ನಗಲಾರದೆ, ಇತರರು ನಗುತ್ತಿದ್ದರೂ ಗೋಳಾಡಲೇ ಬೇಕಾಗಿ ಬರುವ ನಮೂನೆಯ ಹಾಸ್ಯಮಾಡುವನು. ನಮ್ಮಿಬ್ಬರು ಪುರಂದರ ದಾಸರಲ್ಲಿ ಒಬ್ಬನು ಪದ್ಯಕಟ್ಟಲಾರ, ಹಾಡುವನು ಅಷ್ಟೆ; ಮತ್ತೊಬ್ಬನು ಹಾಡಲಾರ, ಪದ್ಯಕಟ್ಟುವನು. ಆದರೆ, ಇವನ ಪದ್ಯವನ್ನು ಅವನು ಹಾಡನು; ಅವನಿಗಾಗಿ ಇವನು ಪದ್ಯ ಕಟ್ಟಿಕೊಡನು. ಈ ರೀತಿಯ ರಗಳೆಗಳಿದ್ದುವು. ಆ ಕಾರಣದಿಂದ, ಅವರ ಶಿಕ್ಷಣಕ್ರಮವನ್ನು ಸರಿಯಾಗಿ ವಿಮರ್ಶಿಸಿ ಶೋಧಿಸಿ ಗೊತ್ತುಮಾಡಿದ ನವೀನ ಸೂತ್ರಗಳನ್ನು ನಮ್ಮ ತಂದೆಯವರು ಬರೆದಿಟ್ಟರು. ಅದನ್ನು ಪ್ರಯೋಗಮಾಡಿ ನೋಡುವ ಮೊದಲೇ ಅವರು ಈ ಆಶ್ರಮ ಬಿಟ್ಟು ತೆರಳಿದರು. ಆ ಸೂತ್ರಗಳೇ ನನ್ನ ಅಮೂಲ್ಯ ಸೊತ್ತು. ಇದನ್ನು ಪ್ರಯೋಗಿಸಿ ನೋಡಲು, ಭಾಂಡವಲ ಬೇಕು. ಒಂದು ವರ್ಷದ ಲಾಭವಾದ 30000 ರೂಪಾಯಿಗಳನ್ನು ನನಗೆ ಯಾರೂ ಕೊಡುವವರಿದ್ದರೆ, ಈ ಸೊತ್ತಿನ ಸಂಪೂರ್ಣ ಹಕ್ಕನ್ನೇ ಅವರಿಗೆ ಯುಗಾಂತ್ಯಕ್ಕೂ ಮಾರಿಬಿಡುವೆನು. ನಿಮಗೆ ಯಾರೂ ಪರಿಚಿತ . . ."

"ನನ್ನಿಂದಾದೀತೋ ಎಂದು ನನಗೇ ಸಂದೇಹ".

"ಹಣದ ತುಟ್ಟಿ, ಲೋಭಿಗಳ ಸ್ವಾರ್ಥ, ಬೇಂಕುಗಳ ಶರ್ತ ತಿಳಿದೇ ಇದೆ. ರೂಪಾಯಿಗಳ ಮಾತಿರಲಿ, ಆಣೆಗಳಾದರೂ ಸಾಕು. ಒಂದು ಮೊಬಲಗಾಗಿ, 2000 ರೂಪಾಯಿ ಕೊಟ್ಟರೂ ಒಪ್ಪಿಗೆ."

"ಹಣವಿದ್ದವರಿಗೆ ಇದೆಲ್ಲ ಆಶ್ರಮ ವಿಚಾರ ತಿಳಿಯಲಾರದಲ್ಲ! ಪ್ರತಿಭೆ ಎಂಬ ಶಬ್ದವೇ ಅವರಿಗೆ ಹೊಸದು".

"ನೀವು ಈ ಆಶ್ರಮಕ್ರಮದ ತತ್ವವನ್ನೆಲ್ಲ ಕೇಳಿಯೇ ಬಿಟ್ಟಿರಲ್ಲ. ನಿಮ್ಮ ಮನಸ್ಸು ಆದರೂ ಈಚೆಗೆ ಒಲಿಯದೇ? 20 ರೂಪಾಯಿ ಕೊಟ್ಟು ಬಿಡಿ. ಎಲ್ಲವನ್ನು ನಿಮ್ಮ ಹೆಸರಲ್ಲಿ ವರ್ಗಾಯಿಸಿ ಕೊಡುತ್ತೇನೆ."

"ರೂಪಾಯಿಯ ನಾಣ್ಯವನ್ನು ನೋಡದೆ ಹಲವು ದಿನಗಳಾಗಿವೆ; ಒಂದಾಣೆ ಇದೆ. ಇದು ಸದ್ಯ ನಿಮ್ಮಲ್ಲಿರಲಿ."

"ಧರ್ಮಕ್ಕೆ ಕೊಡಬೇಡಿರಿ—ನನ್ನ ಈ ಇತಿಹಾಸವನ್ನೂ ಆಶ್ರಮದ ಕಾರ್ಯಕ್ರಮಾದಿಗಳನ್ನೂ ಇಡೀ ಪ್ರಪಂಚಕ್ಕೆ ಪ್ರಕಟಿಸುವ ಎಲ್ಲ ಹಕ್ಕುಗಳನ್ನೂ ನಿಮಗೇ ಕೊಟ್ಟೆನು."

"ಹಾಗಿದ್ದರೆ, ನಾನು ಹೋಗಲೆ?"

"ಇಲ್ಲಿನ ಚಿಮಿಣಿದೀಪಕ್ಕೆ ಎಣ್ಣೆ ಯಿಲ್ಲ. ಹೋಗುತ್ತಾ, ಆ ಅಂಗಡಿಯ... ನಿಂದ ಮೂರು ಕಾಸಿನ ಚಿಮಿಣಿಯೆಣ್ಣೆ ಯನ್ನಿಷ್ಟು ಕಳುಹಿಸಿಕೊಡಿರಿ. ನೋಡಿ... ಸುಲಭದಲ್ಲಿ ಲಕ್ಷಾಧೀಶನಾಗಲು ಸುಸಂ... ದರ್ಭವೊಂದನ್ನು ನಿಮಗೆ ತಿಳಿಸಿದ್ದೇನೆ... ಕೈನೀಡಿ ಲಕ್ಷ್ಮಿಯನ್ನು ವರಿಸು... ಪುರುಷಸಿಂಹರಾಗಿರಿ. ಎಂದಾದರೂ ಶ್ರೀಮಂತರು ಒಳ್ಳೇ ಭರವಸೆಯ ಲಾ... ಕರವಾದ ವೃತ್ತಿಗೆ ಕೈಹಚ್ಚುವರಾದರೆ ಇಲ್ಲಿದೆ ಈ ಅಪೂರ್ವಾಲೋಚನೆ..." ಎಂದನವನು.

ಏಕಾದಶಿಯಂತಹ ಪುಣ್ಯಮಯ... ದಿನಗಳಲ್ಲೂ, ಜಾಗರಣೀ ನಿಶೆಯಲ್ಲಿ ಅಲೆದಾಡುವ ಇಂತಹ ಪ್ರೇತಗಳು ಮತ್ತೆ... ಲ್ಲಿಯೂ ನೋಡಸಿಗುವುದುಂಟೆ? ಎನ್ನುತ್ತ ನಾನು ಮರಳಿದೆನು.

೨. ಗುಣ ನುಂಗಿದ ಹಣ

ಇನ್ನು ಪಡುವಲಿಗೆ ಇಳಿಯಲಾರಂಭಿಸೆಂದು ಸೂರ್ಯನಿಗೆ ದಿನಂಪ್ರತಿ ಸೂಚನೆ ಕೊಡುವ ನಮ್ಮ ವೈದಾಸಿನ ತೋಫಿಗೂ, ನಾನು ಕೈಹಿಡಿದಾಕೆಯೊಡನೆ ನನ್ನ ಕೈಗೆ ಕಟ್ಟಿಕೊಂಡೇ ಇರುವ ವೋಚಿಗೂ ಎಂದಿನಿಂದಲೂ ತಕರಾರೇ. ವೋಚು ಚಿನ್ನದ್ದೇ ನಿಜ; ಆದರೆ, ವೋಚಿನಲ್ಲಿ ಇರಬಾರದ ಅಸಹ್ಯ ದುರ್ಗುಣವೊಂದು ಇದರಲ್ಲಿ ಚೆನ್ನಾಗಿ ಬೆಳೆದಿದ್ದಿತು; ಯಾವಾಗಲು ಅದು ಸುಳ್ಳೇ ಹೇಳಿ ಕಾ... ಹರಣಮಾಡಿ ಪ್ರಸನ್ನವದನವಾಗಿದ್ದಿತು... ಅದನ್ನು ಮಾರಿ, ವರದಕ್ಷಿಣೆಗೆ ಅದರಿಂ... ಸಂದಾಯವಾದ ಮೊಬಲಗು ಸರಿಯೆ... ಎಂದು ತಿಳಿದುಕೊಳ್ಳುವ ಕುತೂಹ... ದಿಂದಲೂ, ನಾಲ್ಕಾರು ರೂಪಾಯಿಗಳಿ... ಈಗ ದೊರೆವ ಗ್ಯಾರಂಟಿ ವೋಚುಗಳನ್ನು... ಕೊಂಡುಕೊಂಡು, ಉಳಿದ ಸುಮಾ... ರೂಪಾಯಿ ನೂರನ್ನು ಬೇಂಕಿನಲ್ಲಿ ಠೇವಣಿ...

ತಿಯಾಗಿಟ್ಟು ಕ್ಷೌರದಿಂದ ಮೊದಲ್ಗೊಂಡು ಶಾಲಾಮಕ್ಕಳ ಸಂಬಳದ ವರೆಗೂ ಚೆಕ್ಕುಗಳನ್ನು ಕೆಲ ದಿನಗಳಾದರೂ ಬರೆಯಬಹುದೆಂದು ಆಸೆಮಾಡಿದೆನು.

ಆದರೆ, ಅದರ ನಿಜವಾದ ಬೆಲೆ ಎಷ್ಟೆಂದು ತಿಳಿಯೋಣ? ಆದಕ್ಕೆ ನಮ್ಮ ಆತ್ಮಾರಾಮನೇ ಒದಗಿದನು. ಆತ್ಮಾರಾಮನು ಹುಟ್ಟಿದಂದಿನಿಂದಲೂ ಆತ್ಮಾರಾಮನೆ; ಅವನ ಆತ್ಮಕ್ಕೆ ಯಾವಾಗಲೂ ಆರಾಮವೆ; ಯಾರಿಗೇ ಆದರೂ ಉಪಾಯ ಹೇಳಿಕೊಡುವನು; ಪರಂತು, ತಾನೆ ನಿರ್ಭಾಗ್ಯನು. "ಸರಾಫಕಟ್ಟೆಗೆ ಇದನ್ನೊಯ್ದು ಅವರು ಇಡುವೆಯಾಗಿ ಹೇಳಿದರೆ, ಅದರ ಬೆಲೆಯನ್ನು ಅವರು ನಿರ್ಧಾರ ಮಾಡಿ, ರೂಪಾಯಿಗೆ ನಾಲ್ಕಾಣೆಯಂತೆ ಸಾಲವಾಗಿ ಅದನ್ನು ಈಡಿಟ್ಟು ತೆರುವರು. ನಾಲ್ಕರ ಮಗ್ಗಿ ಬಾಯಿಪಾಠ ಮಾಡಿಕೊಂಡರಾಯಿತು. ಹ್ಹೆ, ಹ್ಹೆ!" ಎಂದನವನು.

ಎಷ್ಟು ಸುಲಭ ಉಪಾಯವಿದು! ಚಿನ್ನದ ಬೆಲೆ ಏರಿದೆ; ಪವನಿಗೆ 23 ರೂಪಾಯಿ ಬರುತ್ತಿದೆ. ಆದರೆ, ನನ್ನಂಥವನು ಮೋಚನ್ನು ಈಡಿಡಲು ಹೋಗುವುದನ್ನು ಪರಿಚಿತರು ಕಂಡರೆ ಏನೆಂದಾರು? ಪರಿಚಿತರೇ ಕಾಣಸಿಗದಂತಹ ಅದೊಂದು ದೂರದ ಓಣಿಯಲ್ಲಿ ಸುತ್ತಾಡಿ, ಸರಾಫರನ್ನು ಕಾಣಬೇಕು. ಸಿಕ್ಕುವರೇ? ನುಸಿ ಹಾರುವಲ್ಲಿ ಜೇಡನು ಬಲೆ ಬೀಸಿರದೆ ಇದ್ದೀತೇ? ಅಡಚಣಿಗಾರರು ಇರುವಲ್ಲಿ ಸರಾಫನಿರಲೇ ಬೇಕು.

ಹೀಗೆಯೆ ಭಾವಿಸಿ, ಊರ ಹೊರ ಸುತ್ತಿನಲ್ಲಿನ ಒಂದು ಓಣಿಯೊಳಗೆ, ಅಂಗಡಿ ಅಂಗಡಿ ಇಣುಕುತ್ತ ನಡೆದೆನು. ಎರಡು ತಾಸು ಬಿಸಿಲಿನ ತಾಪವನ್ನು ಸಹಿಸಿದೆನು. ಅಲ್ಲೇ ಒಂದು ಕಟ್ಟೆಯ ಮೇಲೆ ಬ್ರಹ್ಮರಾಕ್ಷಸನ ಬದಲು ಸ್ವಯಂ ಸರಾಫನೆ ಕೂತಿದ್ದನು. ಒಳ ನುಗ್ಗಿದೆ. ಅವನನ್ನು ಕಂಡೇ ಏನೇನೋ ಎನಿಸಿತು. ಆದರೂ,—

"ನಮಸ್ಕಾರ. ನನಗೆ ಸ್ವಲ್ಪ ಹಣ, ಈಡಿನ ಮೇಲೆ, ಬೇಕಾಗಿತ್ತು! ಇದೇ ಚಿನ್ನದ ಮೋಚು ಇದೆ" ಎಂದೆನು.

"ಎಷ್ಟು ಬೇಕೋ ಮೊದಲು ಹೇಳಿ" ಎಂದನವನು.

"ನೀವೇ ಹೇಳಿ".

"ಛೆ— ಬೇಕೆಷ್ಟು?"

"ಐವತ್ತು ರೂಪಾಯಿ ಕೊಡಿ."

"ನಲ್ವತ್ತು" ಎಂದನವನು.

ನಾನು ಒಪ್ಪಿಕೊಂಡೆನು. ಕೂಡಲೇ ಒಂದು ಛಾಪಾಪತ್ರಕ್ಕೆ ನನ್ನಿಂದ ದಸ್ಕತು ಹಾಕಿಸಿಕೊಂಡು, ಎರಡಾಣೆ ಕಡಿಮೆ ನಲ್ವತ್ತು ರೂಪಾಯಿಗಳನ್ನು ನನಗೆ ಕೊಟ್ಟು, ಒಂದು ಚೀಟನ್ನು ನನ್ನ ಮೋಚಿಗೆ ಅಂಟಿಸಿ ತನ್ನ ಸಿಂದೂಕದಲ್ಲಿ ಅದನ್ನು ಭದ್ರವಾಗಿ ಮಡಗಿದನು. ನಾನು ಹೊರಬಿದ್ದೆನು. ವ್ಯಾಪಾರ ಮುಗಿಸಿದವನಂತೆ, ಗಂಭೀರವಾಗಿ ಮನೆಯ ಕಡೆಗೆ ನಡೆದೆನು.

ನನಗೆ ಬೇಕಾದುದು ಮೋಚಿನ ಬೆಲೆ ಎಷ್ಟೆಂದಲ್ಲದೆ, ಈಡಿನ ಮೇಲೆ ಹಣವಲ್ಲ. ನಲ್ವತ್ತನ್ನು ನಾಲ್ಕರಿಂದ ಗುಣಿಸಿ, ಮೋಚಿನ ಬೆಲೆ 160 ರೂಪಾಯಿ ಆಯಿತೆಂದು

ಲೆಕ್ಕಮಾಡಿಕೊಂಡೆನು. ಇನ್ನು ಅಷ್ಟಕ್ಕೆ ಅದನ್ನು ಮಾರಿದರೆ, ನನ್ನಲ್ಲಿದ್ದ ಮೊದಲಿನ ಆಸೆ ಕೈಗೂಡುವುದು. ಅದಕ್ಕಾಗಿ, ಅವನ ಕಟ್ಟೆಗೆ ಪುನಃ ಹಿಂತಿರುಗುವುದೆಂದು ನಿಶ್ಚಯಿಸಿದೆನು. ಅಷ್ಟರಲ್ಲಿ ಇಳಿಹೊತ್ತು; ನಸುಕಿನಲ್ಲೇ ನಡೆದೆನು. ಎಷ್ಟೋ ಅಂಗಡಿಗಳನ್ನು ದಾಟಿ ಬರಬೇಕಾಗಿದ್ದಿತು. ಹೊಟೇಲುಗಳೂ, ಗಡಂಗುಗಳೂ ತುಂಬ ಇವೆ; ನಾನಾ ಬಗೆಯ ಜನಗಳೂ ಅಲ್ಲಿ ಈಗಲೆ ತಾನೆ ಅತ್ತಿತ್ತ ತಿರುಗುತ್ತಿರುವ ವೇಳೆ. ನನ್ನನ್ನು ನಾಲ್ಕಾರು ಜನರು, ತಾವು ಮಾಲುತ್ತ ನಡೆಯುತ್ತ, ಅತ್ತಿತ್ತ ನೂಕುತ್ತ, ನಾನೂ ಅವರಂತೆ ಮಾಲುತ್ತ ನಡೆವಂತೆ ಮಾಡಿದರು. ಒಬ್ಬನಂತೂ, ತಟಕ್ಕನೆ, ಗಡಂಗಿನೊಳಕ್ಕೆ ನುಗ್ಗಲು ಕಾಲಿಟ್ಟು, ನನ್ನ ಕಾಲನ್ನು ಮೆಟ್ಟಿ, "ಓಹೋ, ಇದು ಪಿತ್ರಾರ್ಜಿತವೋ? ಅಥವಾ ಈ ಇಡೀ ಮಾರ್ಗವೇ ನಿಮ್ಮದೇನಯ್ಯ? ನಸುಕು ಬೇರೆ, ಸೊಕ್ಕು ಬೇರೆ,—ಕಣ್ಣು ಹೇಗೆ ನೋಡಬೇಕು?" ಎಂದು ನನ್ನ ಮೈತಟ್ಟಿ ಹೋದನು. ಏನು ಚಮತ್ಕಾರ!

ಹಿಂತಿರುಗಿ ಸರಾಫರಲ್ಲಿಗೆ ಬಂದು, ನನ್ನ ವೋಚನ್ನು ಕೊಡಿ, ನಿಮ್ಮ ಹಣ ಇಕ್ಕೊಳ್ಳಿ" ಎಂದೆನು. "ಎರಡಾಣೆ ಕೊಡಿಸಿ ತಿಂಗಳ ಬಡ್ಡಿ ಸಮೇತ ಕೊಟ್ಟುಬಿಡಿ" ಎಂದನವನು. ನಾನು, ನನ್ನ ಚೀಲದಿಂದ ಅಷ್ಟು ಹಣವನ್ನೆಲ್ಲ ಕೊಟ್ಟೇಬಿಡುವೆನೆಂದು ಕಿಸೆಯೊಳಗೆ ಕೈತುರುಕಿಸಿದೆನು; ಅಂಗಿ (ಹೊರ ಮತ್ತು ಒಳ) ಕಿಸೆಗಳೆಲ್ಲವನ್ನೂ ಹುಡುಕಿದ್ದಾಯಿತು. ಚಿಕ್ಕಾಸೂ ಇಲ್ಲ! ಹಣದ ಗಂಟೇ ಕಾಣೆ! ನನ್ನ ಮೈತಟ್ಟಿದ ಆ ಕೂಲಿಯವನು ಈ ರೀತಿ ಆಶೀರ್ವಾದ ಮಾಡಿದನೆಂದು ಆಗ ತಿಳಿದೆನು. ಆದರೆ, ಆಡಿದ ಮಾತನ್ನು ಹಿಂತೆಗೆವುದೇ? ನನಗೆ ಕೊರಳುಕಟ್ಟಿದಂತಾಯಿತು. ಕೈಯು ಆ ಪ್ರದೇಶದಲ್ಲಿ ಆಡಿತು. ಆಗ ಕೈಗೆ ಒಂದು ಸರಪಣಿಯು ತಗುಲಿತು. ನೆನಪಾಯಿತು. ದೇವಸ್ಥಾನದಲ್ಲಿ ಸಮಾರಾಧನೆಗಳಾಗುವಾಗ ಸುತ್ತಲೂ ಬಡಿಸಹೋಗುವವರೊಳಗೆ ನಾನೂ ಕೂಡ ಸೇರಬೇಕೆಂದು, ನಾನೂ ಒಂದು ಸರಪಣಿಯನ್ನು (ನನ್ನಾಕೆಯ ಕೈಬಳೆಗಳನ್ನು ಮಾರಿ) ಮಾಡಿಸಿಕೊಂಡಿದ್ದೆನು. ಅದೂ ನಾಲ್ಕು ಪವನಿನದು. ಈಗ ಅದನ್ನು ಮಾರಿ, ಇದನ್ನು ಈಡಿನಿಂದ ಬಿಡಿಸಿಕೊಳ್ಳುವುದಾಗಿ ನಿಶ್ಚಯಮಾಡಿದೆನು.

ಅದಕ್ಕಾಗಿ ಅದನ್ನು ಮೆಲ್ಲನೆ ಕೊರಳಿನಿಂದ ಸಡಿಲಿಸಿ ತೆಗೆದುಕೊಂಡು, "ಇದರ ಕ್ರಯವೇನಾದೀತು? ಎಂದೆನು. ಅವನು ಅದನ್ನು ಕೈಯಲ್ಲೆತ್ತಿಕೊಂಡು. "ಮೂವತ್ತು ರೂಪಾಯಿ" ಎಂದನು. "ನಾಲ್ಕು ಪವನಿನದು ಇದು" ಎಂದೆನು. "ಮಾಡಿಸಿದಾಗ!" ಎಂದನವನು. ಇನ್ನೇನು ಮಾಡೋಣ? ತೀರ ಹಳೆಯದೊಂದು ಅಜ್ಜನ ಕಾಲದ ಉಂಗುರವೂ ನನ್ನ ಎಡಗೈಯಲ್ಲಿ ಮಿನುಗುತಿದ್ದಿತು. ಅದನ್ನೆತ್ತಿ ಕೊಟ್ಟೆನು. ಹೇಗೂ ಮಾಡಿ, ಆ ಸರಪಣಿಯನ್ನೂ ಈ ಉಂಗುರವನ್ನೂ ಕೊಟ್ಟು, ಅವನ ಸಾಲ, ಬಡ್ಡಿ ಮತ್ತು ಆ ಛಾಪಾ ರಶೀದಿಯ ಬೆಲೆಗೆ ವಜಾ ಮಾಡಿ, ನನ್ನ ವೋಚನ್ನು ಪಡೆದೆನು.

ವೋಜು ಪುನಃ ಹಸ್ತಗತವಾಯಿತು; ಸರಪಣಿ ಉಂಗುರಗಳಿರಡೂ, ಅಸ್ತಂಗತವಾದುವು. ಹೋಗಲಿ,—ವೋಜನ್ನು ಖಂಡಿತ ಕ್ರಯಕ್ಕೆ ಮಾರಿದರೆ,—ವೋಜಿನ ಬದಲು ಮತ್ತೊಂದು ಗ್ಯಾರಂಟೀ ವೋಜನ್ನೂ, ಹೊಸದೊಂದು ಇಮಿಟೇಶನ್ ವಜ್ರದುಂಗುರವನ್ನೂ, ಅತ್ಯುತ್ತಮ ಕೆಮಿಕಲ್ ಗೋಲ್ಡಿನ ಈ ದಿನದ ಫೆಶನಿನ ಸರಪಳಿಯನ್ನೂ ಕ್ರಯಕ್ಕೆ ಕೊಂಡುಕೊಳ್ಳುವೆನೆಂದೂ, ನಮ್ಮಾಕೆಗೆ, ಈ ಹುಚ್ಚು ಬುದ್ಧಿಯಿಂದಾದ ನಷ್ಟ ಭರ್ತಿಮಾಡಿತೋರಿಸಲು ಒಂದು ಜೋಡು ಅದೇ ಗೋಲ್ಡಿನ ಬಳೆಗಳನ್ನು ಕೊಂಡುಕೊಳ್ಳುವುದಾಗಿಯೂ ನಿಶ್ಚಯಿಸಿದೆನು.

ಅವನೇ ಸರಾಫನು, ನನ್ನ ಸರಪಣಿಯುಂಗುರಗಳನ್ನು ಒಳಗೆ ಮಡಗಿ ಬರುತ್ತಲೇ, ನಾನು ನೋಡಿ, "ಈ ವೋಜನ್ನೆ ಮಾರಬೇಕೆಂದಿದ್ದೇನೆ. ಖಂಡಿತ ಕ್ರಯ ಎಷ್ಟು ಕೊಡುವಿರಿ?" ಎಂದೆನು.

—"ಅರ್ವತ್ತು ರೂಪಾಯಿ"—ಎಂದನವನು.

—"ಏನೆನ್ನುವಿರಿ? ನನಗೆ ಗೊತ್ತೇ ಇಲ್ಲವೆ? ಬೆಲೆಯ ಕಾಲಂಶವನ್ನು ನೀವು ಈಡಿನ ಮೇಲೆ ಕೊಡತಕ್ಕವರು. ಆಗ ಕಾಸೆನಲ್ವತ್ತು ರೂಪಾಯಿ ಹಾಗೆ ಕೊಟ್ಟಿದ್ದಿರಲ್ಲ; ಅದರಿಂದಾಗಿ ವೋಜಿನ ಬೆಲೆ ೧೬೦ ಆಯಿತಲ್ಲವೆ?" ಎಂದು, ಅವನ ಅಂತರಂಗವನ್ನು ಸೂಕ್ಷ್ಮವಾಗಿ ಆಳವಾಗಿ ನೋಡಿ ಬಾಹ್ಯ ಪ್ರಪಂಚಕ್ಕೆ ಪ್ರದರ್ಶನ ಮಾಡಿ,—(ಹೆಣದ ಕರುಳುಗಳನ್ನು ಹೊರಕ್ಕೆತ್ತಿ ಪರೀಕ್ಷಿಸುವ ಸರ್ಜನರಂತೆ)—ನಾನು ಹೆಮ್ಮೆಯಿಂದ ಆಡಿ, ಮೆಲ್ಲನೆ ಮೀಸೆಯ ಮೇಲೆ ಕೈಯಾಡಿಸಿದೆನು.

ಸರಾಫನು ಆ ವೋಜನ್ನು ಮತ್ತೊಮ್ಮೆ ನಿರೀಕ್ಷಿಸಿದನು. "ಅರ್ವತ್ತೈದರ ಮೇಲೆ ಒಂದು ಕಾಸನ್ನು ಕೊಡಲಾರೆ" ಎಂದನು.

—"ಅಯ್ಯಾ, ಇದು ನಮ್ಮ ಮಾವನು ನನಗೆ ವರದಕ್ಷಿಣೆಗಾಗಿ ಕೊಟ್ಟ ವೋಜು. ಎಷ್ಟೆಂದರೂ ಚಿನ್ನದ್ದು. ಒಟ್ಟಾರೆ, ಏನನ್ನಾದರೂ ಹೇಳುವುದೇ? ಅವರು ಈಗ ಜೀವದಿಂದಿದ್ದರೆ, ನಾನು ಇದನ್ನು ೬೫ಕ್ಕೆ ಮಾರುವೆನೆಂದು ತಿಳಿದಿದ್ದಲ್ಲಿ, ..."

—"ಸ್ವಾಮಿ, ಅವರೊಡನೆಯೆ ಇದನ್ನೂ ಸ್ಮಶಾನದಲ್ಲಿ ಸುಡಬೇಕೆನ್ನುತ್ತಿದ್ದರು. 'ನೋಡಿ, ಇಷ್ಟನ್ನೇನೋ ಕೊಡುವೆನು! ಆದರೆ, ಇದನ್ನು ರಿಪೇರಿ ಮಾಡುವ ಖರ್ಚು ಎಷ್ಟಿದೆ ತಿಳಿಯಿತೆ? ನಂತರ, ಇದನ್ನು ಯಾವನೊಬ್ಬ ಗಿರಾಕಿಗಾಗಿ ಕಾದು, ಎಷ್ಟು ಬಡ್ಡಿ ಕಳೆದುಕೊಳ್ಳಬೇಕಾಗುವುದೋ ಬಲ್ಲಿರಾ? ಬಹುಶಃ ನಿಮಗೆ ಈಡಿನ ಮೇಲೆ ಕೊಟ್ಟಷ್ಟು ನನಗೆ ಅಸಲು ಉಳಿಯಬಹುದು. ಬೇಷ, ನೀವು ಬೇರೆ ಕಡೆಗೆ ಅದನ್ನು ಹೆಚ್ಚಿಗೆ ದೊರೆತರೆ, ಮಾರಿಬಿಡಿ"— ಎಂದು ಹೇಳಿ, ಅದೃಶ್ಯನಾಗುವುದರಲ್ಲಿದ್ದನು.

—"ಈಡಿನ ಮೇಲೆ ಕೊಡುವುದರ ನಾಲ್ಕು ಪಾಲು ಬೆಲೆ ಬಾರದಿದ್ದೀತೆ? ನನಗೊಂದೂ ಗೊತ್ತೇ ಇಲ್ಲವೆ?"

—“ನಾನು ಮೋಜುಗಳನ್ನು ಪ್ರದರ್ಶನಾಲಯಗಳಲ್ಲಿಇಡಲು ಕೊಂಡು ಕೊಳ್ಳುವುದೇ ಇಲ್ಲ. ಹಾಗಿದ್ದರೆ ಇದರ ಬೆಲೆ ಸಹಸ್ರರೂಪಾಯಿಗಳಾದರೂ ಕೊಂಡುಕೊಳ್ಳುತ್ತಿದ್ದೆನು. ಈಗ ಇದರ ಬೆಲೆ, ಆ ಹಾಳು ಚಿನ್ನದ್ದು. ಅಷ್ಟೆ, ತಿಳಿಯಿತೇ?” ಎಂದನವನು.

ಅವನಿಗೆ ಸ್ವಲ್ಪ ಪೀಡಿಸೋಣ ವೆಂದು “ಬೇರೆ ಸರಾಫರೆಷ್ಟು ಕೊಟ್ಟಾರೋ ಬಲ್ಲಿರಾ?” ಎಂದುದಕ್ಕೆ, ಅವನು, “ತಾವೇ ದಯಮಾಡಿ ಸ್ವತಃ ಅದೃಷ್ಟ ಪರೀಕ್ಷೆ ಮಾಡಿಕೊಳ್ಳಲಾರದೇಕೆ?” ಎಂದು ಹೇಳುತಿದ್ದಂತೆ, ಅವನು ಒಳ ಕಡೆಗೆ ಕಾಲಿಟ್ಟನು. ನಾನೂ ಇದನ್ನು ನೋಡಿ, ಹೊರಗಡೆಗೇ ಕಾಲಿಟ್ಟೆನು.

ಅರೆತಾಸಿನ ತರುವಾಯ, ಚಿನಿವಾರರಂಗೈಯನ ಅಂಗಡಿಯ ಗೋಡೆಯ ಮೇಲೆ ಬರೆದಿಟ್ಟ ಜಾಹೀರಾತನ್ನು ನೋಡಿ, ಒಳಹೊಕ್ಕು, —“ನಮಸ್ಕಾರ” ಎಂದೆನು.

“ಸಲಾಂ!” ಎಂದನವನು. ನನ್ನ ಡ್ರೆಸ್ಸು ಸಲಾಮುಗಳನ್ನು ಸಂಪಾದಿಸಲು ಯೋಗ್ಯವಾಗಿದ್ದಿತಲ್ಲದೆ, ನಮಸ್ಕಾರ ಹೊಂದಲು ಅರ್ಹತೆಯುಳ್ಳದಾಗಿರಲಿಲ್ಲ ಎಂದು ಅವನೇ ನನ್ನ ನಡತೆಯನ್ನು ತಿದ್ದಿದನು.

ನಗುತ್ತ, ನಾನು ಮೋಜನ್ನು ಪ್ರದರ್ಶಿಸಿದೆ; ಗಾರಡಿಗನು ಹಾವನ್ನು ಮೆಲ್ಲನೆ ಬುಟ್ಟಿಯಿಂದ ಹೊರಕ್ಕೆ ತರುವ ಹಾಗೆ. “ಇದನ್ನು ಮಾರಬೇಕೆಂದಿರುವೆನು” ಎಂದೆನು. “ಸಂತೋಷ” ಎನ್ನುತ್ತ ಅದನ್ನು ತನ್ನ ಕೈಯ್ಯಲ್ಲಿಟ್ಟುಕೊಂಡು, “ಏನು ಬೆಲೆ ಬರಬೇಕು?” ಎಂದು ಕೇಳಿದನು.

—“೧೬೦”

—“ನನಗೆ ಬೇಡವಲ್ಲ!” ಎನ್ನುತ್ತ ಅವನು ತಲೆಯಲ್ಲಾಡಿಸಿದನು.

—“ಇದರ ಬೆಲೆಯೇ ೧೬೦ ರೂಪಾಯಿ!”

—“ಯಾರಿಗೆ ಹೇಳುತ್ತೀರಿ? ನಿಮಗೆ ೧೬೦ ಬೆಲೆ ಬಂದೀತೆಂದು ನೀವು ಭಾವಿಸಿರುವಿರಾದರೆ, ನೀವೇ ಇಟ್ಟು ಕೊಳ್ಳಿರಿ. ಅಷ್ಟನ್ನು ನಿಮಗೆ ಅದಕ್ಕಾಗಿ ಕೊಡತಕ್ಕವರು ಯಾರಿರುವರಂತೆ?” ಎಂದನವನು.

—“ನೀವೇನು ಕೊಟ್ಟೀರಿ?”

—“ಮೂವತ್ತು ರೂಪಾಯಿ, ನಗದು ರೊಕ್ಕ.”

—“ಆದರೆ ಅರ್ವತ್ತೈದಕ್ಕೆ ಕೇಳಿದರಲ್ಲ!” ಅವನಿಗೆ ನನ್ನ ಮೇಲೆ ಕನಿಕರವುಂಟಾಯಿತು. ಮರುಕಗೊಂಡು, “ಕೂಡಲೆ ಅಷ್ಟಕ್ಕೆ ಮಾರಲಿಲ್ಲವೇಕೆ? ಇಷ್ಟರಲ್ಲಿ ಆತನನ್ನು ಹುಚ್ಚರ ಆಸ್ಪತ್ರೆಗೆ ಒಯ್ದಿರಬಹುದು. ಅಥವಾ ಅವನು ಉಯಿಲು ಬರೆದಿಟ್ಟು ಆತ್ಮಘಾತ ಮಾಡಿಕೊಂಡಿರಲೂ ಬಹುದು!”

—“ಅದನ್ನು ಈಡಿಟ್ಟು ನಲ್ವತ್ತು ರೂಪಾಯಿ ಸಾಲ ತಂದಿದ್ದೆನಷ್ಟೆ. ಆ ಸರಾಫ ಕಟ್ಟೆಯನ್ನು ನಿಮಗೆ ತೋರಿಸಿ ಕೊಡಬೇಕೆ?”

—"ನಾನಾದರೆ, ನಲ್ವತ್ತು ರೂಪಾಯಿ ಸಾಲ ಪಡೆದ ಬಳಿಕ, ಇನ್ನತ್ತ ಸುಳಿಯದೆ ಕಾಣೆಯಾಗುತ್ತಿದ್ದೆ." ಎಂದು ನಾಲ್ಕು ಸಲ, ಉಸಿರು ತಡೆಯಲು ಪ್ರಯತ್ನ ಮಾಡಿಯೂ ಸೋತು, ನಾಲ್ಕು ಸೀನುಗಳನ್ನು ಹೊರಡಿಸಿ, ತನ್ನ ಬುದ್ಧಿವಂತಿಕೆಯನ್ನು ಮೆರೆಯಿಸಿದನು. ನಾನು ಆಗಲೇ ಕಂಗಾಲಾದೆನು.

ಅರೆತಾಸಿನ ತರುವಾಯ ನಾನು ಪುನಃ ಮೊದಲನೆ ಕಟ್ಟೆಗೆ ಬಂದೆನು. ನನ್ನನ್ನು ನೋಡುತ್ತಲೇ,—ಒಂದು ತಾಸು ಸುತ್ತು ಮುತ್ತಲಿನ ಕಟ್ಟೆಗಳನ್ನೆಲ್ಲ ತಿರುಗಿ ಬಂದಿರಷ್ಟೆ. ಏನು ವಿಶೇಷ ವರ್ತಮಾನ?" ಎಂದನವನು.

—"೭೫ ರೂಪಾಯಿಗೇ ನಿಮಗೆ ಇದನ್ನು ಮಾರುವೆನೆಂದು ಬಂದೆನು. ಮೊದಲು ಸಾಲಕೊಟ್ಟವರು ನೀವು; ನಿಮ್ಮನ್ನು ಬಿಟ್ಟು ಇತರರಲ್ಲಿಗೆ ಹೋಗುವುದು ಧರ್ಮವಲ್ಲ" ಎಂದು ವೋಚನ್ನು ಆವನ ಕೈಯಲ್ಲಿ ಇಟ್ಟೆನು.

—"ಬಲ್ಲೆ, ಚೆನ್ನಾಗಿ ಬಲ್ಲೆ, ಇಂತಹದೊಂದು ವೋಚಿಗಾಗಿ ನನ್ನ ಗಿರಾಕಿಯೊಬ್ಬನು ಕಾದಿರುವನೆಂಬ ಅದೊಂದೇ ಕಾರಣದಿಂದ ಮಾತ್ರ ನಾನಾದರೂ ೭೫ ಕೊಡಲು ಒಪ್ಪಿದೆನು. ಇಲ್ಲದಿದ್ದರೆ, ಇದರ ಬೆಲೆ ೧೫೦ ಇದ್ದರೂ ಇದು ೭೫ಕ್ಕೂ ಪ್ರಿಯವೇ." ಎನ್ನುತ್ತ ಆವನು ೭೫ ರೂಪಾಯಿಗಳನ್ನು ನನಗೆ ಕೊಟ್ಟನು. "ಕಳ್ಳಗತ್ತರಿಯ ಜನರಿದ್ದಾರೆ. ಹೇಗೂ ಜೋಕೆಯಿರಲಿ!" ಎಂದು ನನ್ನನ್ನು ಅವನೇ ತುಂಬಾ ಎಚ್ಚರಿಸಿ ಕಳುಹಿ ಕೊಟ್ಟನು.

ಮನೆಗೆ ಬಂದು, ಆ ನಡುರಾತ್ರಿಯಲ್ಲಿ ನಿದ್ದೆ ಹತ್ತಲಾರದಿರಲು, ಆ ದಿನದ ವಹಿವಾಟುಗಳ ಲೆಕ್ಕ ಹಾಕಿದೆನು. ಸುಮಾರು ಎಂಟು ಪವನು ಅಂದಾಜಿನ ಚಿನ್ನ ಮಾತ್ರ ಮಾರಿರುವುದಕ್ಕೆ ಮೂರು ಪವನಿನ ಬೆಲೆ ದೊರೆತು, ಮೂರು ತಾಸು ಸುತ್ತಾಡಿದ್ದು, ಮನೋವ್ಯಥೆ, ದೇಹದಂಡನೆ, ಸಾಲಂಕೃತ ದೇಹವು ಈಗ ಸಾಲಂ-ಕೃತವಾಗಿದ್ದುದು ಮಾತ್ರವಲ್ಲದೆ ಬೇರೇನೂ ಲಾಭವಾದಂತೆ ತೋರಲಿಲ್ಲ. ಹೊಸ ಗ್ಯಾರಂಟಿ ವೋಚನ್ನು ನಾನು ಇನ್ನೂ ಕೊಂಡುದಿಲ್ಲ; ಗಿಲ್ಟಿನ ಸರಪಣಿ ಇಮಿಟೇಶನ್ ವಜ್ರದುಂಗುರಗಳನ್ನು ನನಗಾಗಿಯಾಗಲಿ, ಕೆಮಿಕಲ್ ಗೋಲ್ಡಿನ ಬಳೆ ಜೋಡನ್ನು ನಮ್ಮಾಕೆಗಾಗಲಿ ತಂದುದಿಲ್ಲ; ಚೆಕ್ಕುಗಳನ್ನು ಬರೆದು ಸಹಿ ಹಾಕುವ ಆಸೆಯೂ ಹಾಗೆಯೆ ಉಳಿದಿದೆ. ಆದರೆ,—

ಆತ್ಮಾರಾಮನನ್ನು ನಾನು ತಿರುಗೊಮ್ಮೆ ನೋಡಬೇಕೆನ್ನುವ ಆಸೆಯನ್ನು ಮಾತ್ರ ತ್ಯಜಿಸಿರುವೆನು.

೩. ಸಿಡಿಲಮರಿ

ಮರಿ, ಮರಿ, ಸಿಡಿಲಮರಿ ।
ಕರಿ, ಕರಿ, ಚಿಮಿಣಿಕರಿ ॥
ಕಡಲಲೊಂದು ಸಿಡಿಲು ಬಿತ್ತು ।
ಸಿಡಿಲು ಸತ್ತು, ಆಯ್ತು ಮುತ್ತು ।
ಕಡಲರಾಣಿಗದುವೆ ನತ್ತು ।
ಮಡಿಲಲಿದೇ ನಮ್ಮನಂತು ॥

'ನಮ್ಮನಂತು' ಎಂದರೆ ಯಾವ ಮಗುವನ್ನು ಮಡಿಲಲ್ಲಿಟ್ಟುಕೊಂಡು ಈ ಮನೋಹರ ಜೋಗುಳಹಾಡು ಕೇಳಬರುತಿದ್ದಿತೋ ಆ ಮಗು ಅನಂತು! ಹಾಡುತಿದ್ದವನು ಊರ ಹೆಗ್ಗಡೆ. ಸಾಮ್ರಾಜ್ಯದ ಪ್ರಧಾನ ಮಂತ್ರಿಗಳಾದ ಗ್ಲೆಡ್‌ಸ್ಟನ್‌ರವರು ವೃದ್ಧಪಿತಾಮಹರಾಗಿಯೂ, ಅವಕಾಶ ದೊರೆತಾಗ ಮೊಮ್ಮಕ್ಕಳನ್ನು ತನ್ನ ಬೆನ್ನ ಮೇಲೇರಿಸಿಕೊಂಡು, ತಾನೇ ಕುದುರೆಯಂತೆ ಅಂಬೆಗಾಲಿಕ್ಕುತಿದ್ದುದನ್ನು ಬಲ್ಲವರಿಗೆ ಊರ ಹೆಗ್ಗಡೆ ಹೀಗೆ ಹಾಡುವುದರಿಂದ ಅಪಹಾಸ್ಯವೆನಿಸದು. ಈಗಣ ಶಿಕ್ಷಣದ ನವವಿಧಾನದಲ್ಲಿ ಮಕ್ಕಳಿಗೆ ಬೇಕಾದುದೂ ಇದೇ; ಹಳೆ ಅಜ್ಜಿಗಳ ಹಾಡು ಈಗ ಕೇಳಿಸದು, ಹೊಸ ಅಣ್ಣಂದಿರ ಕವನವೇ ಬೇಕು. ಹೆಗ್ಗಡೆ ಇಷ್ಟರಲ್ಲಿ ಸಣ್ಣಯ್ಯನಾಯ್ಕನನ್ನೂ, ದೊಡ್ಡಣ್ಣಪ್ಪನನ್ನೂ ಮನೆಗೆ ಕಳಿಸಿಕೊಟ್ಟಿದ್ದನು. ಹೀಗಾಗಿ, ಏಲಂ ಹಾಕುವ ರಾಗದಲ್ಲೇ ಹೆಗ್ಗಡೆ ಅರಚಿಕೊಂಡರೂ, ಅವನ ಏಕಾಂತಾನಂದಕ್ಕೆ ಭಂಗಬರುತಿದ್ದಿಲ್ಲ. ಆದರೆ, ಅಲ್ಲೇ, ಸಾದಾ ಉಡುಪಿನಲ್ಲಿ ತಾಜಾ ಪತ್ತೇದಾರನೊಬ್ಬನು ಈ ಜಾದಾ ಕೆ ಸದ ಮೇಲೆ ಹಾಜರಿದ್ದನು. ಬಂಕಿ ಚಂದ್ರನಂತಹ ನ್ಯಾಯಮೂರ್ತಿಯ ವಿಚಕ್ಷಣತೆಯಿಂದ ನ್ಯಾಯತೀರ್ಮಾನ ಮಾಡಿದ ಆದೊಂದು ಕತೆಯನ್ನು ನಮ್ಮ ಹೆಗ್ಗಡೆಯವರು ಓದಿದ್ದರು. ಇಂದು ತಾವೂ ಬಂಕಿಂಚಂದ್ರರಾಗುವ ಆಸೆಯಿಂದ, ಪತ್ತೇದಾರನ ಮುಖನೋಡಿದರು. "ಸಿದ್ಧವಾಗಿದೆ" ಎಂದನವನು.

ಕೂಡಲೆ, ಹೆಗ್ಗಡೆ ಒಳಕೋಣೆಯ ಮಂಚದ ಮೇಲೆ ಬಿದ್ದುಕೊಂಡು, ತಲೆಯ ವರೆಗೂ ದಪ್ಪನೆ ಕಂಬಳಿಗಳನ್ನು ಹೊದ್ದುಕೊಂಡನು. ತೊಟ್ಟಿಲಲ್ಲಿದ್ದ ಎ ಗೂಸೂ ಹಾಗೆಯೇ ಬಿದ್ದುಕೊಂಡಿದ್ದಿತು ಪತ್ತೇದಾರನು ಬಳಿಯಲ್ಲೇ ಚಿಂತಾಪರನಾಗಿ ಕೂತನು. ಬಾಗಿಲ್ತೆರೆದು, ಒಬ್ಬ ಟೊಣಪನು ಒಳಕ್ಕೆ ಬಂದನು. ಅತ್ಯುತ್ತಮ ಹಕೀಮರ ಉಡುಪು, ಔಷಧಗಳುಳ್ಳ ಒಂದೇ ಚೀಲ, ಮಾಯಾ ಲೋಕವನ್ನೇ ನೋಡುತ್ತಿರುವ ದೃಷ್ಟಿ ಇಷ್ಟು ಟೊಣಪನ ಸಂಗಡಲೇ ತೋರಿ ಲಕ್ಷಣಗಳು.

ಹೆಗ್ಗಡೆ, ತುಂಡುಮಾತುಗಳಲ್ಲಿ ವ್ಯಥಾ ಸೂಚಕ ಸ್ವರದಲ್ಲಿ—'ನನಗೆ ನೋ ಹೇಗೋ ಆಗಿದೆ. ಚಿಕಿತ್ಸೆಯಾ ಬೇಕು!" ಎಂದನು.

ಹೆಗ್ಗಡೆ, ತುಂಡುಮಾತುಗಳಲ್ಲಿ, ವ್ಯಥಾಸೂಚಕ ಸ್ವರದಲ್ಲಿ,— 'ನನಗೇ ನೋ ಹೇಗೋ ಆಗಿದೆ. ಚಿಕಿತ್ಸೆಯಾಗ ಬೇಕು!" ಎಂದನು.

ಹಕೀಮ— ನಿಮ್ಮೂರ ಡಾಕ್ಟರ ರನ್ನು ಕರೆಸಿರಿ. ಅವರಿಂದಾಗದಿದ್ದರೆ, ನಾನು ಬಂದೇನು.

ಹೆಗ್ಗಡೆ—ಅವರು ಇನ್ನು ಮೂರು ದಿನಕ್ಕೆ ಬರುವ ಹಾಗಿಲ್ಲ. ಅದಕ್ಕಾಗಿ, ಇವರು ನಮ್ಮ ಭಾವ–ಇವರಿಂದ ನಿಮಗೆ ಕರೆಕಳುಹಿಸಿದ್ದೆ. (ಹು!) ಮೂರುದಿನ(!) ನಾನು(?) ಹೇಗೆ(!?) ಈ ಬೇನೆಯನ್ನು ಸಹಿಸಬಹುದು(?!?)

ಹಕೀಮನು ಗಂಭೀರವಾಗಿ ಕಣ್ಣು ಅರಳಿಸಿ, ಹೆಗ್ಗಡೆಯರ ಕಣ್ಣುಗಳನ್ನೆ ನೋಡಿದನು. 'ಸಿಡಿಲಮರಿ!' ಎಂದು ಹೆಗ್ಗಡೆಯವರು ಮನಸ್ಸಿನಲ್ಲೇ ಎಂದರು. ನಾಲಗೆ, ನಾಡಿ, ಎದೆ, ಹೊಟ್ಟೆಗಳೆಲ್ಲ ವನ್ನು ನೋಡಿ, ಮುಟ್ಟಿ, ಹೊಸವೈದ್ಯರು ಹಳೆರೋಗಿಯನ್ನು ಪರೀಕ್ಷಿಸುವಂತೆ ಎಲ್ಲವನ್ನೂ ಚೆನ್ನಾಗಿ ಗ್ರಹಿಸಿ,—'ನಿಮ್ಮ ಹೃತ್ಕುಕ್ಷಿಯು ಆಮಾಶಯದಲ್ಲಿ ಪ್ರಕೋಪವನ್ನುಂಟುಮಾಡಿ, ಮಜ್ಜಾತಂತುಗಳ ವ್ಯತಿಕ್ರಮಕ್ಕಾರಂಭವಾಗಿದೆ. ಶಾಸ್ತ್ರದಲ್ಲಿ 'ಗತಾನುಗತಿಕೋ ಲೋಕಃ' ಎಂದಿರುವ ಹಾಗೆ, ಎಂದರೆ ಎಲ್ಲರ ಹಾಗೆಯೇ ನಿಮ್ಮ ಗತಿಯಾಗುವ ಕಾರಣ, ಈಗಲೆ 'ಅರ್ಧಂ ತ್ಯಜತಿ ಪಂಡಿತಃ' ಎಂದರೆ, ಪಂಡಿತರಾಗಿದ್ದೀರಾದರೆ, ಅರ್ಧವನ್ನು (ಸಾವಿರ ರೂಪಾಯಿ ನೋಟಿನ) ತ್ಯಾಗ ಬುದ್ಧಿಯಿಂದ ಇತ್ತುಕೊಡಿ. ನೀವು ಊರ ಹೆಗ್ಗಡೆ. ಸಾಮಾನ್ಯರ ರೋಗವೂ ನಿಮಗಾಗದು; ಸಾಮಾನ್ಯ ಔಷಧಿಯೂ ನಿಮಗೊಲ್ಲದು ಅಮೃತಬಳ್ಳಿ ಕಷಾಯದಿಂದ ಇದು ಅಣಗದು; ಭಿಕ್ಷಚರು ಗಳಿಂದ ಇದು ಒಣಗದು. ಮಂತ್ರ ಬಲವೇ ನಿಮ್ಮ ರೋಗವನ್ನು ಗುಣ ಮಾಡೀತು. ಮಂತ್ರಜಪಿಸಿ, ನೀರು ಪ್ರೋಕ್ಷಿಸಿ, ಗಾಳಿಊದಿದರೆ ಎಲ್ಲವೂ ಎರಡೇ ದಿನದಲ್ಲಿ ಮಾಯವಾದೀತು. ಚಿಲ್ಲರೆ ಜನರಿಗೆ, ಇಲ್ಲಿವೆ, ನೂರು ರೋಗಗಳನ್ನು ಗುಣಪಡಿಸುವ ಮೂರು ಮಾತ್ರೆಗಳು; ಕೂಲಿಜನರಿಗೆ,—ಸಾವಿರ ಬೇನೆಗಳಿಗೆ ಪಾವಿನ ಕಷಾಯ; ತಮ್ಮಂತಹರಿಗೆ,— ಕೇವಲ ಆತ್ಮಶಕ್ತಿಯ ಬಲ ಪ್ರಯೋಗ. ನನಗೆ ಇದಕ್ಕಾಗಿ, ಇಂತಹ ಆತ್ಮಶಕ್ತಿಯ ಆಕರ್ಷಣೆಯಿಂದಲೇ ರೋಗ ಗುಣಪಡಿಸಬರುವುದೆಂದು ಉತ್ತಮ ಸರ್ಟಿಫಿಕೇಟನ್ನೂ, ಇಡೀ ರಾಜ್ಯದಲ್ಲಿ ಪ್ರತಿಯೊಬ್ಬ ಗ್ರಾಮದ ಹೆಗ್ಗಡೆಯೂ ನನಗೆ ಬೆಂಬಲವಾಗಿರಬೇಕೆಂದು ಶಿಫಾರಸನ್ನೂ, ಅಲ್ಲದೆ, ಇಡೀ ರಾಜ್ಯದ ಗ್ರಾಮಗಳ ಹೆಗ್ಗಡೆಯರಲ್ಲಿಗೆ ತೆರಳಿ ಅವರಿಗೆ ತಮ್ಮ ಸರ್ಟಿಫಿಕೇಟು ತೋರಿಸಿ ನಾನು ಅವರ ಬೆಂಬಲ ಪಡೆಯುವ ಹಾಗೆ ರೂ. 500ರ ರೊಕ್ಕವನ್ನೂ (ನೋಟು ಅಗತ್ಯವೇ ಇಲ್ಲ) ಕೊಡುವುದಾಗಿ ವಾಗ್ದಾನ ಮಾಡತಕ್ಕದ್ದು. ಆಗ ತಾನೆ ಆತ್ಮಶಕ್ತಿಯ ತೇಜಸ್ಸಿನ ಪ್ರಯೋಗದಿಂದ ನಿಮ್ಮನ್ನು ಗುಣಪಡಿಸುವೆನು' ಎಂದನು.

'ಎಂದರೆ, ನನ್ನ ಜೀವಕ್ಕೆ 500 ರೂಪಾಯಿ ಮಾತ್ರವೇ ಬೆಲೆ ಹಿಡಿದಿರಾ? 500ನ್ನು ಕೊಡುವೆನು. ಉಹುಃ!

ಸಾಕಾಯ್ತು. ಚಡಪಡಿಸಿ. ಈಗಲೇ ನಮ್ಮ ಭಾವನ ಸಾಕ್ಷಿ. ಕೊಟ್ಟೇ ಎಂದೆಣಿಸಿ; (ಉಹುಃ!) ಆತ್ಮಶಕ್ತಿಯ ಪ್ರಯೋಗಮಾಡಿರಿ.'

ಸರಿ, ಹಕೀಮನು ಪ್ರಯೋಗಕ್ಕಾರಂಭಮಾಡಿದನು. 'ನನ್ನ ಕಣ್ಣ ಮೇಲೆಯೇ ನಿಮ್ಮ ಕಣ್ಣಿಡಿ. ಏಕ್-ದೋ-ತೀನ್'! ಕಾಶೀ-ಅಲ್ಲಾಹಾಬಾದ್-ಢಿಲ್ಲಿ-ಲಂಡನ್'! ನಿಮಗೆ ಇನ್ನು ಯಾವ ರೋಗವೂ ಇಲ್ಲ. ನನ್ನ ಆರೋಗ್ಯಶಕ್ತಿ ನಿಮ್ಮ ದೃಷ್ಟಿಯಿಂದ ನಿಮ್ಮ ದೇಹದೊಳಗೆ ಸೇರಿ ಹರಡಿತು. ಈಗ ಹೇಗೆ ಕಾಣುತ್ತಿದೆ?'

ಹೆಗ್ಗಡೆಯು ಮೆಲ್ಲನೆ ಎದ್ದು ಕೂತು, 'ಅರ್ಧಕ್ಕರ್ಧ ಗುಣವಾಗಿದೆ ಎನ್ನುವಂತಿದೆ' ಎಂದನು.

ಈಗ ನಿದ್ದೆಹೋಗಬೇಕೆಂದು ಅಪ್ಪಣೆಯಾದ ಕೂಡಲೆ, ಹೆಗ್ಗಡೆ ಅಲ್ಲೇ ಒರಗಿಕೊಂಡನು. ನಿಧಾನ, ಹೆಗ್ಗಡೆ ಗೊರಕೆ ಹೊಡೆದನು. ನಿದ್ದೆಯಿಲ್ಲದಿದ್ದಾಗ, 'ಸಿಡಿಲಮರಿ' ಎಂದು ರಾಗ ಎಳೆದ ಈ ಹೆಗ್ಗಡೆ, ನಿದ್ದೆಹೋದಾಗ, 'ಸಿಡಿಲಮರಿ'ಯನ್ನು ಮೂಗಿನ ಗವಿಗಳಲ್ಲಿ ಅಡಗಿಸಿಟ್ಟಿರಬೇಕು!

ಹಕೀಮನು ಎದ್ದು ಹೊರಡುತ್ತ, 'ಹೆಗ್ಗಡೆ ಎದ್ದರೆ ಎರಡು ಚಮಚೆ ಅಡಿಕೆ ಮಡಿಕೆಯ ನೀರು ಕುಡಿಸಿ, ನಾಲ್ಕು ತುಪ್ಪದ ದೋಸೆ ತಿನ್ನಕೊಡಿರಿ' ಎಂದು ಸೂಚನೆಕೊಟ್ಟನು.

ಮರುದಿನ ಅಭಿಜಿನ್ಮುಹೂರ್ತಕ್ಕೆ ಸರಿಯಾಗಿ ಹಕೀಮನು ತಿರುಗಿ ಬಂದನು. ಬರುತ್ತಲೇ, ಭಾವನು ಅಲ್ಲೇ ಇದ್ದನಷ್ಟೆ; 'ಇವತ್ತೆಲ್ಲ ಹೆಗ್ಗಡೆ ಹುಶಾರಾಗಿದ್ದಾನೆ' ಎಂದನು. ಹಕೀಮನು ಹೆಗ್ಗಡೆಯ ಮಂಚದ ಬಳಿ ನಡೆದು—'ಹೆಗ್ಗಡೇರೇ, ಎರಡು ದಿನ ಹೀಗೆಯೆ ಹಾಸಿಗೆಯಲ್ಲೇ ಬಿದ್ದುಕೊಳ್ಳಿರಿ. ನಾನು ಇತ್ತ ಬಂದುದೇ ನಿಮ್ಮ ಪುಣ್ಯ. ಇನ್ನು ನಾನು ನಿಮ್ಮ ಮೈ ಮುಟ್ಟಿ ನೋಡಿದರೆ ಸಾಕು. ಏಕ್-ದೋ-ತೀನ್'! ಸರಿ, ಎಲ್ಲವೂ ಸೆಟ್ಟಗಾಯ್ತು. ಧನ್ವಂತರಿಯೇ ಬಂದರೂ ಇಷ್ಟು ಸಾಧ್ಯವಾಗುತ್ತಿರಲಿಲ್ಲ. ಇನ್ನು,- ಈ ಕೈಗೆ ದುಡ್ಡು, ಆ ಕೈಗೆ ದೋಸೆ— ಬರಲಿ ನೋಡುವ 500 ರೂಪ್ಯಾ ರೊಕ್ಕ!' ಎಂದು ನಸುನಕ್ಕನು.

500 ರೂಪ್ಯಾಗಳ ಥೈಲಿಯೊಂದನ್ನು ಹೆಗ್ಗಡೆ ಹಕೀಮನಿಗೆ ಒಪ್ಪಿಸಿ, 'ರಸೀದಿ ಕೊಡಬೇಕು' ಎಂದನು. ಭಾವನು ಆಗಲೆ ರಸೀದಿ ಬರೆದಿಟ್ಟಿದ್ದನು. ಹಕೀಮನು ಸಹಿ ಹಾಕಿದನು. 'ಇನ್ನು ಆ ಶಿಫಾರಸುಪತ್ರ ಬರೆದುಕೊಡಿರಿ' ಎಂದು ಹಕೀಮನು ಹೇಳಿ, ಥೈಲಿಯನ್ನು ತನ್ನ ಅಂಗಿಯೊಳಗೆ ಮಡಗಿದನು.

ಹೆಗ್ಗಡೆ ಜಗ್ಗನೆದ್ದು ನಿಂತನು. 'ಜವಾನ್', ಇವನನ್ನು ಕೈದುಮಾಡು!' ಎಂದನು.

ಭಾವನು, ಜಗ್ಗನೆದ್ದು ನಿಂತು ನಿನ್ನನ್ನು ಕೈದುಮಾಡಿದ್ದೇನೆ, ಎಹೇ!' ಎಂದು ಹಕೀಮನ ಕೈಗೆ ಹಿಡಿದುಕೊಂಡನು.

ಹಕೀಮನು—'ಯಾರಯ್ಯಾ ನೀನು—ಭಾವನೋ, ಜವಾನನೋ? ಭಾವನೇ ಸರಿ; ಆದರೂ ಇಷ್ಟೂ ಸಲುಗೆಯೇ?'

ಹೆಗ್ಗಡೆ— ಈತನು ಐದು ಜಿಲ್ಲೆಗಳಿಂದ ನಿನ್ನನ್ನು ಹಿಂಬಾಲಿಸಿ ವಾರಂಟುಸಮೇತ ಇಲ್ಲಿಗೆ ಬಂದಿರುವ ಜವಾನನು. ನಿನ್ನೆ ಇಲ್ಲಿಗೆ ಬಂದು, ನಿನ್ನಂತಹ ಭಯಂಕರ ಲೂಟಿಗಾರನನ್ನು ಕೈದು ಮಾಡಲು ಈ ಹಂಚಿಕೆ ಮಾಡಿದನು. ಇನ್ನು ನಿನ್ನ ಹಕೀಮಿಯೆಲ್ಲ ಖದೀಮಿಯಾಯಿತು. ಇವನು ನನಗೆ ಹಂಗಾಮಿ ಭಾವನಾಗಿದ್ದ. ನಿನ್ನ ಆತ್ಮಶಕ್ತಿಯ ಬಲಪ್ರಯೋಗವನ್ನು ಸದ್ಯಕ್ಕೆ ಎಲ್ಲಿಯೂ ಇನ್ನು ಮಾಡಲಾರೆ,-ಸಿಡಿಲಮರಿ!' ಎಂದು ಸಿಳ್ಳು ಹಾಕುವ ವಿನೋದದಲ್ಲಿದ್ದನು.

ಹಕೀಮನು— 'ಇವನೆ ಪತ್ತೆದಾರನೊ?'

ಭಾವ—'ಅಹುದು' ಎನ್ನುತ್ತ, ಅವನ ಎರಡೂ ಕೈಗಳನ್ನೂ ಸೆಳೆವ ಅವಸರದಲ್ಲಿ ಚಿಕ್ಕದೊಂದು ತುಫಾನು ಆಯಿತು. ಆದರೂ ಹಕೀಮನು, 'ಕೋಳ ಸಿಕ್ಕಿಸಿದರೇನಾಯ್ತು? ನನ್ನ ಆತ್ಮಶಕ್ತಿಯಿಂದ ಏನಾಗುವುದೋ ನೋಡುವೆ! ಸಿಡಿಲಮರಿ ಎಂದಿರಲ್ಲ, ಹೇಗೆ ಇದರ ಪ್ರಭಾವ, ನೋಡಬಹುದು' ಎಂದನು.

'ಹೆಗ್ಗಡೇರೇ, ಬರುವ ವರ್ಷಾದಿಯಲ್ಲಿ ಬಿರುದಿನ ಪಟ್ಟಿಯಲ್ಲಿ ತಮ್ಮ ಹೆಸರನ್ನು ಕಾಣುವಿರಿ. ಕೇಡಿ ಲಥಮನನೆಂದರೆ ಈತನೆ. ಆ ಹಣದ ಥೈಲಿಯ ವಿಷಯ ಬೆದರಬೇಡಿರಿ. ನಿಮ್ಮೊಡನೆ ರಸೀದಿ ಇದೆ. ನಾನು ಈತನನ್ನು ಮೆಜಿಸ್ಟ್ರೇಟರ ಮುಂದೆ ಹಾಜರು ಪಡಿಸಿ, ಈ ಹಣವನ್ನು ಬಹುಮಾನ ಸಮೇತವಾಗಿ ನಿಮಗೆ ಮುಟ್ಟಿಸುವೆನು. ಸದ್ಯಕ್ಕೆ ಇದೆಲ್ಲ ರುಜುವಾತಿಗೆ ಬೇಕಾಗಿದೆ—' ಎನ್ನುತ್ತ ಹಕೀಮನನ್ನು ನೂಕುತ್ತ, ಹಿಂದಣಿಂದ ಖದಮು ಇಡುತ್ತ ಭಾವನು ನಡೆದನು.

ಹಾಗೆ ಹೆಬ್ಬಾಗಿಲು ದಾಟುತ್ತ, 'ಹೆದ್ದಾರಿಗೆ ಕಾಲಿಟ್ಟೆವು. ಇನ್ನು ಇತ್ತ ಯಾರೂ ಸುಳಿಯಬಹುದಲ್ಲ. ರೈಲು ಬಿಡುವುದಕ್ಕೆ ಬರೇ 20 ನಿಮಿಷವಿದೆ. ಟಿಕೇಟನ್ನು ಇಟ್ಟುಕೊಂಡಿದ್ದಿಯಷ್ಟೆ. ಇನ್ನು ಈ ಕೋಳವೇಕೆ?' ಎಂದು ಹಕೀಮನೆಂದನು.

ನಿಮಗೆ ತಿಳಿಯದೆ?—'ಭಾವ'ನು ಪತ್ತೇದಾರನೂ ಅಲ್ಲ, ಜವಾನನೂ ಅಲ್ಲ. ಹಕೀಮನ ಭಾವನೆಂಬುದು ನಿಜ. ಅವನೂ ಇವನೂ ಸೇರಿ ಮಾಡಿದ್ದ ಹಂಚಿಕೆಯಿಂದ, ಪತ್ತೇದಾರಿಯನ್ನು ಬಂಕಿಮಚಂದ್ರರಂತೆ ಮಾಡಿ ತಾನೂ ರಾವ್ ಬಹದ್ದೂರನಾಗಬೇಕೆಂದು ಆಸೆಕಟ್ಟಿಕೊಂಡಿದ್ದ ಹೆಗ್ಗಡೆಗೆ, 500 ರೂಪಾಯಿಯನ್ನು ಹಕೀಮನಾಗಿ ಒಬ್ಬನು ಪಡೆದು, ಇವರಿಬ್ಬರೂ ತಮ್ಮೂರಲ್ಲಿ ಮಳೆಗಾಲವನ್ನು ಸುಖವಾಗಿ ಕಳೆವುದಕ್ಕೆ ಅನುಕೂಲವಾಯಿತು. ಇವರು ರೈಲಿನ ಕಡೆಗೆ ಹೋಗುವಾಗ,— ಗೌಡರ ಮನೆಯಿಂದ ಕೇಳಬರುತಿತ್ತು—

ಮರಿ, ಮರಿ, ಸಿಡಿಲಮರಿ!
ಕರಿ, ಕರಿ, ಚಿಮಣಿಕರಿ—

ಸರಿ ಸರಿ; ಹಕೀಮನೇ ಸಿಡಿಲಮರಿಯಾದನು. ಗೌಡರ ಪೋರಿಗೆ ಮಾತ್ರ ಎರಡನೆ ಚರಣದ ಪ್ರಾಸವೇ ಅಂಟಿತೆಂದು ಅವರಿಗೆ ಇಷ್ಟರಲ್ಲಿ ತಾನೆ ಹೇಗೆ ಗೊತ್ತು?

೪. ಯೇಸುವಿನ 'ತಫರಾಕು'

'ಮಹಾತ್ಮನಾದ ಯೇಸುಕ್ರಿಸ್ತನು ಅಹಿಂಸಾತತ್ತ್ವವನ್ನು ಪಾಶ್ಚಾತ್ಯರಿಗೆ ಬೋಧಿಸಿದವರಲ್ಲಿ ಮೊದಲನೆಯವನು. "ಕೇಡನ್ನು ಇದಿರಾಡದಿರಿ. ನಿಮ್ಮ ಹಗೆಯವನು ನಿಮ್ಮನ್ನು ಈ ಕೆನ್ನೆಯ ಮೇಲೆ ಬಡಿದರೆ, ಅವನಿಗೆ ನಿಮ್ಮ ಮತ್ತೊಂದು ಕೆನ್ನೆಯನ್ನೂ ಒಡ್ಡಿ ಕೊಡಿರಿ" ಎಂದವನು. ಅವನ ಕಾಲಕ್ಕೆ ಹಿಂದೆ,—'ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ತಲೆಗೆ ತಲೆ, ಜನಕ್ಕೆ ಜನ, ಬೆಂಕಿಗೆ ಬೆಂಕಿ, ಕತ್ತಿಗೆ ಕತ್ತಿ' ಎಂಬ ಈ ನ್ಯಾಯವೇ ಪ್ರಚಾರದಲ್ಲಿದ್ದು, ಜನಗಳಲ್ಲಿ ಕ್ಷಮೆ, ಸಮಾಧಾನ, ಪ್ರೇಮ, ಶಾಂತಿ, ನೈತಿಕ ಬಲ ಮೊದಲಾದ ಯಾವುದಕ್ಕೂ ಆಸ್ಪದವಿರಲಿಲ್ಲ. ಪ್ರಪಂಚವು ಸೈತಾನನ ಶಾಸನಕ್ಕೆ ತಲೆಯೊಡ್ಡಿ ಈ ರೀತಿಯಾಗಿ ಆತ್ಮವನ್ನೇ ಕಳೆದುಕೊಂಡಿದ್ದಿತು. ಆಗ ತಾನೆ, ಯೇಸುಮಹಾತ್ಮನು ತನ್ನೀ ಹೊಸತತ್ತ್ವವನ್ನು ಬೋಧಿಸಿ, ತನ್ನ ಪವಿತ್ರಜೀವನದಲ್ಲಿಯೂ ಅದನ್ನೆ ಆಚರಿಸಿ, ತನ್ನ ಪ್ರಾಣತ್ಯಾಗದಿಂದ ತಾನೆ, ಸೈತಾನನನ್ನು ಅವನ ಸಿಂಹಾಸನಭ್ರಷ್ಟನನ್ನಾಗಿ ಮಾಡಿದನು. "ಯೇಸು ಸ್ವಾಮಿಗೆ ಸ್ತೋತ್ರವಾಗಲಿ!" ಎಂದು ವಾಚನಮುಗಿಸಿ, ದೀಪವನ್ನಾರಿಸಿ, ಹಾಸುಗೆಯ ಮೇಲೆ ಒರಗಿ, ಮನೋಬಲಪ್ರದರ್ಶಕನಾದ ಪ್ರೊಫೆಸರ್ ಮಾಯಾವಿ ಎಂಬಾ ವಿಚಿತ್ರಪುರುಷನು, ತನ್ನನ್ನು ಕಂಬಳಿಯಿಂದ ಹೊದೆದುಕೊಂಡನು. ಈ ಮಾತುಗಳನ್ನು ಪರಿಭಾವಿಸಿಯೆ ಅವನ ಮೆದುಳು ನಿದ್ದೆ ಹೋಗಲು ಉಪಕ್ರಮಗೊಳ್ಳುತಿದ್ದಿತು.

ಅಷ್ಟರಲ್ಲಿ,—ಆ ಕೋಣೆಯ ಬಾಗಿಲಿನ ಬೀಗದಲ್ಲಿ ಬೀಗದ ಕೈ ನುಸುಳಿದ ಸದ್ದಾಯಿತು. ಬಾಗಿಲೂ ಅರ್ಧಕ್ಕರ್ಧ ತೆರೆಯಿತು. ಯಾರೋ ಒಳಕ್ಕೆ ಬಂದರು. ಮೆಲ್ಲನೆ ಮುಂದರಿದರು. ಪ್ರೊಫೆಸರರಿಗೆ ಅಲ್ಲಲ್ಲಿ ಮನೋಬಲ ಪ್ರದರ್ಶನ ಮಾಡಿ ದೊರೆತ ಟಿಕೇಟುಹಣವು ಕರಗಿ, ಬಹುಮಾನದ ಚಿನ್ನಬೆಳ್ಳಿಯ ಮೆಡಲುಗಳಾಗಿ ಅವನ ಎದೆಯ ಮೇಲೆಲ್ಲ ಅಲಂಕಾರವಾಗಿ ನಿಲ್ಲುವ ಹಾಗೆ, ಅಂಗಿಗೆ ಹೊಲಿದೇ ಸರವಾಗಿದ್ದಿತಷ್ಟೆ. ಆ ಅಂಗಿಯನ್ನೆ ಯಾರೋ ಕಿತ್ತುಕೊಂಡಂತಾಯಿತು. ಹಾಸುಗೆಯ ಬಳಿಯ ಚೌಕಿಯ ಮೇಲೆ ಮಡಗಿದ್ದ ಮಣಿಕಟ್ಟಿನ ಚಿನ್ನದ ಗಡಿಯಾರವೂ ನಾಲ್ಕಾರು ರೂಪಾಯಿ ಚಿಲ್ಲರೆಯೂ, ಅಲ್ಲಿಂದ ಫಕ್ಕನೆ ಎದ್ದು, ಕಿಣಿಕಿಣಿಲೆಂದು ಕುಣಿದು ಯಾರ ಕೈಯನ್ನೋ ಸೇರಿದಂತಾಯಿತು. ಇನ್ನು ಕಾಲಹೆಜ್ಜೆಗಳು ಹಿಂದೆಗೆವುತ್ತಿವೆ, ಎನ್ನುವಾಗ, ಪ್ರೊಫೆಸರರು ಚಟ್ಟನೆ ಎದ್ದು ದೀಪ ಬೆಳಗಿಸಿ, ರಿವಾಲ್ವರನ್ನೆತ್ತಿಕೊಂಡು, ಅತ್ತ ಬಂದ ವ್ಯಕ್ತಿಗೆ 'ಗೋಡೆಗೆ ಮುಖಮಾಡಿ ನಿಲ್ಲು, ಕೈಯೆತ್ತು, ಹಿಂದಕ್ಕೆ ಚಾಚು' ಎಂದು ನಿಧಾನವಾಗಿ ಡ್ರಿಲ್ ಅಪ್ಪಣೆಮಾಡುತ್ತ, ವ್ಯಕ್ತಿಯ

ಎರಡು ಕೈಗಳನ್ನೂ ಅವನ ಬೆನ್ನಹಿಂದೆ ಕಟ್ಟಿಕ್ಕಿದರು. ನಂತರ ಪ್ರೊಫೆಸರರು ಹಾಸುಗೆಯ ಮೇಲೆ ಒಡ್ಡೋಲಗಂಗೊಟ್ಟು,—"ಯಾರಯ್ಯ ನೀನು? ಇಲ್ಲಿ ಏಕೆ ಬಂದೆ? ಅದರಲ್ಲೂ ಇಲ್ಲಿಗೆ ಹೇಗೆ ಬಂದೆ?" ಎಂದು ಕೇಳಿದರು.

ವ್ಯಕ್ತಿ— ನಾನು ಗಾಡಿಯವ. ಗಾಡಿಯನ್ನೂ ಕುದುರೆಯನ್ನೂ ಮನೆಗೆ ಮುಟ್ಟಿಸಿ, ಶ್ರಮಪರಿಹಾರಾರ್ಥವಾಗಿ ಗಡಂಗಿಗೆ ಹೋಗಿ, ಅಲ್ಲಿಂದ ಮನೆಗೆ ಹಿಂತಿರುಗುವಾಗ, ದಾರಿಯಲ್ಲಿ ಈ ಜೇಗದ ಕೈಗಳ ಗೊಂಚಲು ದೊರೆಯಿತು. ಅವುಗಳಿಗೆ ತೂಗುತಿದ್ದ ತಗಡಿನ ಮೇಲೆ ಒಂದು ಹೆಸರು ವಿಳಾಸ ಎಲ್ಲ ಇತ್ತು. ಅದನ್ನು ಆ ಧನಿಗೆ ಹಿಂದೆ ಒಪ್ಪಿಸಿದರೆ, ಕಳಕೊಂಡ ಕುದುರೆಯನ್ನು ಕಂಡುಕೊಂಡಷ್ಟು ಸಂತೋಷವುಂಟಾಗಿ ನನಗೆ ಬಹುಮಾನ ಸಿಗುವುದಾಗಿ ನಂಬಿದೆ. ಇಲ್ಲಿಗೆ ಬಂದು ಒಂದು ತಾಸು ಹೆಬ್ಬಾಗಿಲಲ್ಲಿ ಕೂಗಿದರೂ, ಉತ್ತರವಿಲ್ಲ. ಬೀಗದ ಕೈಗಳಿಂದಲೇ ಹೊರ ಬಾಗಿಲನ್ನೂ, ಹಾಗೆಯೇ ಈ ಬಾಗಿಲನ್ನೂ ತೆರೆದು ಒಳನುಗ್ಗಿದೆ. ಸದ್ದಿಲ್ಲ, ಬೆಳಕಿಲ್ಲ; ಬೀಗದ ಕೈಗಳನ್ನು ಇಲ್ಲಿಟ್ಟು ಹೋಗಬೇಕೆಂದಿದ್ದೆ. ಆದರೆ ಬಹುಮಾನ ಎಲ್ಲಿ? ಅದಕ್ಕಾಗಿ ಇಲ್ಲಿಯೆ ಕೈಗೆ ಸಿಕ್ಕಿದ ಒಂದಂಗಿ, ಇದೇ ಮೋಜು, ಕೆಲವು ಚಿಲ್ಲರೆ ಹಣಕಾಸು ಎಲ್ಲವನ್ನು ಎತ್ತಿಕೊಂಡು ನಡೆಪೆನೆಂದಿದ್ದೆ. ಆದರೆ, ಬಹುಮಾನದ ಬದಲಾಗಿ ಈ ರೀತಿಯ ಅಪಮಾನವಾಯಿತು. ಹೋಗಲಿ, ಕಲಿಕಾಲ; ಉಪಕಾರಕ್ಕೆ ಕಾಲವುಂಟೆ? ಇವನ್ನೆಲ್ಲ ಇಲ್ಲೇ ಬಿಡುತ್ತೇನೆ. ನನ್ನಷ್ಟಕ್ಕೆ ಹೋಗುವೆನೆಂದು ನಂಬಲಾರೆ. ಉಪಕಾರಕ್ಕೆ ತಕ್ಕ ಅಪಕಾರವನ್ನಾದರೂ ಅನುಭವಿಸಬೇಕಲ್ಲವೆ? ಇನ್ನು ನೀವೂ ಬೇಕಾದಷ್ಟು ಬಡೆಯಿರಿ; ಅಥವಾ ಪೊಲೀಸರನ್ನು ಕರೆದು ಅವರ ವಶಕ್ಕಾದರೂ ನನ್ನನ್ನು ಒಪ್ಪಿಸಿಕೊಡಿರಿ. ಅಂತೂ ಮನೆಗೆ ಹೋಗಗೊಡದಿರಿ. ಹಾಗೆ ಕ್ಷಮಿಸಿದಿರಾದರೆ, ಯುಗವೇ ಬೇರೆಯಾದೀತು. ಪ್ರತಿಯೊಬ್ಬರೂ ಇತರರಲ್ಲಿ ತಪ್ಪನ್ನು ಕಾಣುವರು; ತಪ್ಪು ಕಂಡ ಮೇಲೆ, ತಘರಾಕಿನಿಂದ ದಂಡನೆಯೂ ಆಗಬೇಡವೆ? ಅಪ್ಪಣೆಯಾಗಲಿ ಮಹಾಸ್ವಾಮಿ!" ಎಂದು ಗಾಡಿಯವನೆಂದನು. ಅವನ ಮಾತಿಗೆ ಅನುಸಾರವಾಗಿ, ಅವನು ಎತ್ತಿಕೊಂಡುದನ್ನೆಲ್ಲ, ಅಲ್ಲೇ ಹಾಸುಗೆಯ ಮೇಲೆ ಮಡಗುವಂತೆ, ಗಾಡಿಯವನೊಳಗೇ ಇದ್ದು ಇಷ್ಟನ್ನೆಲ್ಲ ಉತ್ಸಾಹದಿಂದಲೂ ಉಲ್ಲಾಸದಿಂದಲೂ ಆಡಿಸಿದ, ಗಡಂಗಿನ ದೆವ್ವವೇ ಅವನನ್ನು ಪ್ರೇರೇಪಿಸಿತು.

ಮನೋಬಲ ಪ್ರದರ್ಶಕನಾದ ಪ್ರೊಫೆಸರ್ ಮಾಯಾವಿಯ ಮೆದುಳಲ್ಲಿ, ಆಗ ತಾನೆ, ಯೇಸುಕ್ರಿಸ್ತನು ತಘರಾಕನ್ನು ಕುರಿತು ಬೋಧಿಸಿದುದೆಲ್ಲ, ಹರಡಿಕೊಂಡು ಚಡಪಡಿಸುತಿದ್ದಿತು. ಪ್ರೊಫೆಸರನಿಗೆ ಆ ತತ್ವವನ್ನು ಪ್ರಯೋಗಿಸಲು ಇದೊಂದು ಅಪೂರ್ವಸಂದರ್ಭವೆಂಬಂತೆ ತೋರಿತು. ಅವನು, "ಎಲಾ ಇತ್ತ ಬಾ; ಕೂತುಕೊಂಡು ನನ್ನ ಮುಖವನ್ನೆ ನೋಡಿ ಮಾತನಾಡು!" ಎಂದನು. ಗಾಡಿ

ಯುವನು ಹಾಗೆ ಕೂತಿದ್ದು, ಅವನ ಕಣ್ಣುಗಳನ್ನೆ ಎವೆಯಿಕ್ಕದೆ ನೋಡಿದನು. ಅವನ ಕೈಗಳ ಕಟ್ಟನ್ನು ಬಿಚ್ಚಲಾಯಿತು.

"ನೀನು ದರೋಡೆಯವನು. ಮಹಾಕಾಳೀ ರಸ್ತೆಯಲ್ಲಿರುವ ಪ್ರೊಫೆಸರ್ ಮಾಯಾವಿಯೆನಿಸಿರುವ ನನ್ನ ಮನೆಯೊಳಗೆ ನುಗ್ಗಿ, ನನ್ನ ಯಾವತ್ತು ಸೊತ್ತನ್ನು ಲುಟಾಯಿಸಬೇಕೆಂದೇ ಇಲ್ಲಿಗೆ ಬಂದವನು. ಸಾಧ್ಯವಿದ್ದರೆ, ನನ್ನನ್ನೆ ಕೊಲ್ಲಬೇಕಾಗಿ ಇದ್ದಿ. ಇಷ್ಟನ್ನು ನಂಬು. ಇದನ್ನೆ ಐದು ಸಲ ಬಾಯಿಪಾಠ ಮಾಡಿ ಹೇಳು, ನೋಡುವ." ಎಂದು ಮಾಯಾವಿಯು ಒಂದೊಂದೇ ವಾಕ್ಯವನ್ನು ಗಂಭೀರವಾಗಿ, ಅವನ ಕಣ್ಣುಗಳ ಮೇಲೆ ಏಕಾಗ್ರತೆಯಿಂದ ನೋಡುತ್ತ ಹೇಳಿಸಿದನು. ಗಾಡಿಯವನು ಬಾಯಿಪಾಠವಾಗಿ ಇದನ್ನು ಹೇಳುತ್ತಿರುವಾಗ, ಪ್ರೊಫೆಸರನು ತನ್ನ ಅಂಗೈಗಳನ್ನು ಅವನ ಮುಖದ ಇದಿರಲ್ಲಿ ಅತ್ತಿತ್ತ ನಿಧಾನವಾಗಿ ಬೀಸುತ್ತ, ಅವನ ಮುಖದ ಮೇಲೆ ಮಂತ್ರಶ್ವಾಸವನ್ನು ಊದಿದನು.

ಗಾಡಿಯವನಿಗೆ, ಕಲಿಸಿಕೊಟ್ಟ ಹೇಳಿಕೆಯು ಸಾಧಾರಣ ಪಾಠವಾಗುತ್ತ ಬಂತು. ಆಗ, ಪ್ರೊಫೆಸರನು, ಒಂದು ಹಾಳೆ ಕಾಗದದಲ್ಲಿ, ಹೀಗೆ ಬರೆದನು:—

"ಖಾವಂದರೆ,

ಈ ಕಾಗದ ತರುವವನು ನನ್ನ ಕೋಣೆಯೊಳಕ್ಕೆ ನುಗ್ಗಿ ಈಗಲೆ ದರೋಡೆ ಮಾಡುತಿದ್ದನು. ಇವನನ್ನು ನಾನು ಮನೋಬಲದಿಂದ ನನ್ನ ಅಪ್ಪಣೆಪ್ರಕಾರ ನಡೆವಂತೆ ಮಾಡಿರುವೆನು. ಇವನು ತಾನಾಗಿ ಕೈದುಮಾಡಿಕೊಳ್ಳಲು ನಿಮ್ಮ ಸ್ಟೇಶನಿಗೆ ಒಪ್ಪಿಸಿಕೊಳ್ಳುವನು. ಇವನನ್ನು ಕೈದು ಮಾಡಿರಿ. ನಾನು ಬೆಳಗ್ಗೆ ಅತ್ತ ಬರುವೆನು.

ಇಂತು ವಿಧೇಯ

ಮನೋಬಲ ಪ್ರದರ್ಶಕ

ಪ್ರೊಫೆಸರ್ ಮಾಯಾವಿ."

ಈ ಪತ್ರವನ್ನು ಒಂದು ಲಕ್ಕೋಟೆಯಲ್ಲಿಟ್ಟು, ಮೊಹರೊತ್ತಿ, ಅದನ್ನು ಠಾಣ್ಯದ ಪೋಲೀಸ್ ಇನ್ಸಪೆಕ್ಟರರಿಗೆಂದು ವಿಳಾಸ ಬರೆದನು. ಗಾಡಿಯವನನ್ನು ಕರೆದು,—"ಈ ಪತ್ರವನ್ನು ಪೋಲೀಸ್ ಸ್ಟೇಶನಿನಲ್ಲಿರುವ ಇನ್ಸಪೆಕ್ಟರರಿಗೆ ಕೊಡು. ನಾನು ಕಲಿಸಿಕೊಟ್ಟಿರುವ ಮಾತುಗಳನ್ನು ಅಲ್ಲಿ ಬಾಯಿಪಾಠವಾಗಿ ಹೇಳಿ ಬಿಡು" ಎಂದು ಪತ್ರವನ್ನು ಅವನಿಗೆ ಕೊಟ್ಟನು. ಗಾಡಿಯವನು ಒಪ್ಪಿ ಅಲ್ಲಿಂದ ಹೊರಟನು.

ಪ್ರೊಫೆಸರನು ನಕ್ಕನು; 'ತಫರಾಕಿ'ನ ತತ್ವವು ಪುನಃ ಅವನ ಮೆದುಳಲ್ಲಿ ಕುಣಿಯಿತು. ಬಾಗಿಲ ಬಳಿ ಸಾರುತ್ತಿದ್ದ ಗಾಡಿಯವನನ್ನು ಕರೆದು, "ಅಲ್ಲಿಂದೆತ್ತಿಕೊಂಡ ಆ ಒಡವೆ ವಸ್ತುಗಳನ್ನು ಇಲ್ಲೇ ಬಿಟ್ಟು ಹೋಗುವೆಯೇಕೆ? ಇವನ್ನು ಎತ್ತಿಕೊಂಡು ನಡೆ." ಎಂದನು. ಗಾಡಿಯವನಿಗೆ ಆಶ್ಚರ್ಯವಾಯಿತು. ಆದರೆ ಮನೋಬಲದ ಪರಾಕ್ರಮುವಲ್ಲವೆ? ಅವನು ಆ ಮೆಡಲು ಸಾಲುಳ್ಳ ಅಂಗಿ, ಪೋಚು, ಚಿಲ್ಲರೆ ರೊಕ್ಕ ಎಲ್ಲವನ್ನೂ ತನ್ನ ಕಿಸೆಯಲ್ಲೂ ಕಂಕುಳಲ್ಲೂ ತುರುಕಿಕೊಂಡು ನಡೆದನು. ಮಾಯಾವಿಯು

ಕೋಣೆಗೆ ಬಾಗಿಲಿಕ್ಕಿ, ಅದನ್ನು ಭದ್ರ ಮಾಡಿದನು. ನಡುರಾತ್ರಿ ಮೀರಿಯೆ ಹೋಗಿದ್ದಿತು! ಪುನಃ ಹಾಸುಗೆ! ನಾಳೆ ಸ ಪತ್ರಿಕೆಗಳಲ್ಲಿ ಮಾಯಾವಿಯ ಮನೋಬಲದ ಪರಾಕ್ರಮವೆಲ್ಲವೂ ಪ್ರಕಟವಾಗುವುದು. ಇಂತಹ ಮನೋಬಲವನ್ನು ಪ್ರದರ್ಶನ ಮಾಡಬಲ್ಲವರು ಇನ್ನಾರಿದ್ದಾರೆ? ನೂರರಂತೆ ಮಾರುವ ಟಿಕೇಟುಗಳು ಇನ್ನು ಸಾವಿರದಂತೆ ಮಾರಿ ಹೋಗುವುವು. ಗಾಡಿಯವನಿಗೆ ಸೆರೆಮನೆ, ನನಗಿನ್ನು ಅರಮನೆ. ನಿಜವಾಗಿಯೂ, "ಈ ಕೆನ್ನೆಗೆ ಬಡೆದರೆ, ಆ ಕೆನ್ನೆಯನ್ನೂ ಒಡ್ಡು" ಎಂಬಾ ತಫರಾಕಿನ ತತ್ವವು ಚೆನ್ನಾಗಿದೆ ಎಂದೇ ಮೊದಲಾಗಿ ಭಾವಿಸಿ, ಭಾವನೆಯಿಂದಾದ ಕನಸುಗಳ ಸುಖವನ್ನೂ ಅನುಭವಿಸುತ್ತ ಪ್ರೊಫೆಸರನು ನಿದ್ದೆ ಹೋದನು.

ಮನೆಯಿಂದ ಹೊರಬಿದ್ದ ಗಾಡಿಯವನು, ತನ್ನೊಳಗೆ ತಾನೆ ಭಾವಿಸತೊಡಗಿದನು: ಕಲಿಕಾಲ ನಿಜ. ತನ್ನೊಳಗೇ ಭಾವಿಸುವಾಗ, ತನ್ನೊಳಗಿದ್ದುದೂ ಭಾವಿಸತೊಡಗಿತು. "ನಾನು ದರೋಡೆ ಮಾಡಲು ಹೋಗಿದ್ದೆನು. ಈಗ ಅವನ ಮನೋಬಲದ ಪ್ರಭಾವದಿಂದ ನಾನು ಪೋಲೀಸರ ಕೈಗೆ ನನ್ನನ್ನೆ ಒಪ್ಪಿಸಿಕೊಳ್ಳಲು ಹೊರಟಿರುವೆನು. ಹಾಗೆ ಮಾಡದಿದ್ದರೆ, ಪ್ರೊಫೆಸರನ ಮನಸ್ಸು ನೋಯುವುದು. ಹಾಗೆ ಮಾಡಬೇಕಾದರೆ ಇನ್ನಷ್ಟು ಗಡಂಗುದೈವದ ಆರಾಧನೆಯಿಲ್ಲದೆ ಶಕ್ತಿ ಸಾಲದು" ಎನ್ನುತ್ತ, ಅವನು ಗಡಂಗಿನ ಕಡೆಗೆ ನಡೆದನು. ಕಿಸೆ ತುಂಬ ಚಿಲ್ಲರೆ ರೊಕ್ಕವಿತ್ತು. ಇನ್ನು ಆನಂದವು ಅಪಾರವಾಗಿದ್ದಿತು. ನಕ್ಕನು, ಕುಣಿದನು, ಹಾಡಿದನು. ಬೀಟಿನ ಪೋಲೀಸನೊಬ್ಬನು "ಏನಯ್ಯಾ, ಈ ಕೇರಿಯಲ್ಲಿ ಇನ್ನಾರೂ ನಿದ್ದೆಹೋಗಬಾರದೆಂದೇ ನಿನ್ನ ಸಾಧನೆಯೆ?" ಎಂದನು. ಕೂಡಲೇ ಗಾಡಿಯವನು ಶಾಂತನಾಗಿ, "ನೀವೂ ನನ್ನ ಜತೆಗೆ ಬರುವಿರಾದರೆ ಬರಬಹುದು, ಹ್ಞೆ, ಹ್ಞೆ" ಎನ್ನುತ್ತಲೆ, ಮೆಲ್ಲನೆ ಗಡಂಗಿನ ಕಡೆಗೇ ನಡೆದನು. ಸ್ವಲ್ಪ ದೂರದಲ್ಲೆ, ಬೆಳಗ್ಗಿನ ಜಾಮದಲ್ಲಿ ತೀರ್ಥಸ್ನಾನ ಮಾಡಿ ಪುಣ್ಯ ಸಂಪಾದನೆ ಮಾಡಲು ಹೋಗುವ ಯಾರೋ ಒಬ್ಬ ಸಾಧು ಮನುಷ್ಯನನ್ನು ಕಂಡು,— "ಸ್ವಾಮಿ, ಪೋಲಿಸ್ ಸ್ಟೇಶನ್ ಎಲ್ಲಿ?" ಎಂದು ಗಾಡಿಯವನು ಕೇಳಲು,—'ಇಲ್ಲೇ, ಎರಡು ಫರ್ಲಾಂಗಿನೊಳಗೆ, ಬಲಕ್ಕೆ ತಿರುಗಿ. ತಿರುಗಿ, ನಾಲ್ಕು ಅಡ್ಡ ಹಾದಿಗಳನ್ನು ದಾಟಿದರಾಯಿತು, ಅಲ್ಲೇ ಇದೆ," ಎಂದು ಅವನಿಂದ ತಿಳಿದುಕೊಂಡನು.

"ಅಯ್ಯೋ ಸ್ವಾಮಿ, ಅಷ್ಟು ದೂರ ನಾನು ಹೋಗುವುದರೊಳಗೆ ಏನಾಗುವುದೋ! ಕೆಲವರು ನಿಮ್ಮಂತೆ ತೀರ್ಥಸ್ನಾನಕ್ಕಾಗಿ ಹೋಗುತಿದ್ದವರನ್ನು (ಹೆಂಗಸರೂ ಇದ್ದಾರೆ) ಬಡೆದು ಸುಲಿಗೆ ಮಾಡುತಿದ್ದಾರಲ್ಲ! ಅವರಲ್ಲಿ ಕೆಲವರಿಗೆ ಗಾಯಗಳೂ ಆಗಿವೆ. ಬೀಟಿನ ಪೋಲೀಸರು ಈ ಪತ್ರ ಬರೆದು ಕೊಟ್ಟಿದ್ದಾರೆ. ನೀವು ಇದನ್ನು ಸ್ಟೇಶನಿಗೆ ಕೊಡಿ. ನಾನು ಡಾಕ್ಟರರನ್ನು ಕರೆತರುತ್ತೇನೆ. ಪುಣ್ಯವಿದೆ ಹೋಗಿ, ತಡಮಾಡದಿರಿ, ದಯೆಯಿರಲಿ!" ಎನ್ನುತ್ತ, ಆ ಪುಣ್ಯಾತ್ಮನ ಕೈಗೆ ಪತ್ರ ಒಪ್ಪಿಸಿ, ಆತನು ಸ್ಟೇಶನು ದಾರಿ ಹಿಡಿ

ದೊಡನೆ, ತಾನು ಗಂಡಗಿಸೊಳಕ್ಕೆ ಕಾಲಿಟ್ಟನು. ಅಲ್ಲಿಂದ ಸ್ವಲ್ಪ ಉಲ್ಲಾಸವನ್ನು ತುಂಬಿಸಿಕೊಂಡು, ಗಾಡಿಯವನು ಹೆದ್ದಾರಿಯನ್ನು ಬಿಟ್ಟು ಒಳದಾರಿಯಿಂದ ತನ್ನ ಮನೆ ಸೇರಿದನು. ಅವನಿಗೆ ಸುಖ ನಿದ್ದೆ ಹಿಡಿಯಿತು.

ಅತ್ತ, ಪ್ರೊಫೆಸರನು ಮಾರಣೆಯ ದಿನ ಹಾಸುಗೆಯಿಂದೇಳುವಾಗ, ಕರೆಯುತ್ತಲಿದೆ ಟೆಲಿಫೋನು! "ಸರಿ, ಹಾ, ಹಾ, ಅವನೇ! ನನ್ನ ಪತ್ರ ತಲಪಿಸಿದನೆ? ಈಗಲಾದರೂ ಒಪ್ಪುವಿರೇ ಮನೋಬಲದ ಪರಾಕ್ರಮ! ಹೌದು, ಅವನು ದರೋಡೆ ಮತ್ತು ಗಾಯಪಡಿಸುವ, ಕೊಲೆಯ, ಇತ್ಯಾದಿ ಮಾತು ಹೇಳುತ್ತಾನೆಯೆ? ಸರಿ. ಮೆಜಿಸ್ಟ್ರೇಟರ ಮುಂದೆ ಹಾಜರು ಮಾಡಿರಿ!" ಎಂದು ಸ್ಟೇಶನಿನ ಜವಾನನೊಡನೆ ಸಂಭಾಷಣೆ ಮುಗಿಸಿ, ತಾನು ಇನ್ನಿಷ್ಟರಲ್ಲೇ ಸಿದ್ಧನಾಗಿ, ಮುಖ್ಯ ಪತ್ರಿಕಾಕರ್ತರನ್ನು ಕಾಣ ಹೋದನು.

ಮಧ್ಯಾಹ್ನದೊಳಗೆ—"ಮನೋಬಲದ ದಿಗ್ವಿಜಯ! ಪ್ರೊಫೆಸರ ಮಾಯಾವಿಯ ಅದ್ಭುತಕಾರ್ಯ! ದರೋಡೆಗಾರನು ತಾನಾಗಿ ಸೆರೆಬಿದ್ದನು!" ಇತ್ಯಾದಿ ಪತ್ರಿಕೆ ಮಾರುವ ಹುಡುಗರ ಕೂಗು. ಎಲ್ಲೆಲ್ಲಿಯೂ ಪ್ರೊಫೆಸರರ ಮಹಾತ್ಮೆ ಹರಡಿತು. ಪ್ರೊಫೆಸರರು, ನಿನ್ನೆ ಓದಿದ್ದ ಯೇಸುಸ್ವಾಮಿಯು ಬೋಧಿಸಿದ 'ತಫರಾಕಿನ' ತತ್ವದ ಮಹತ್ವವನ್ನು ತಿಳಿದು ಮೈಮರೆತರು. ಪ್ರೊಫೆಸರರು ಕಚೇರಿಗೆ ಬರುವುದರೊಳಗೆ, ಊರಲ್ಲಿ ಅಕ್ಷರಸ್ಥರಾಗಿ ಪತ್ರಿಕೆ ಓದುತಿದ್ದ ಜನರೆಲ್ಲರು

ಕಚೇರಿಯ ಹಿತ್ತಿಲಲ್ಲೇ ಶಿಬಿರ ಸ್ಥಾಪ
ಮಾಡಿಕೊಂಡಿದ್ದರು. ಕಚೇರಿಯಲ್ಲಿ, ಆ
ಸಾಮಿಯನ್ನು ವಿಚಾರಣೆಗೆ ನಿಲ್ಲಿಸಿದರು.
ಅವನು—"ಸುಳ್ಳೇ ಸುಳ್ಳು. ನಾನು ಯಾ
ವ ಮನೆ ನುಗ್ಗಿದ್ದೂ ಇಲ್ಲ, ದರೋಡ
ಮಾತೇ ನನಗೆ ಬಾರದು. ನಾನು ಮಾಘ
ಸ್ನಾನಕ್ಕಾಗಿ ಬೆಳಗ್ಗೆ ಹೊರಟು ತೀರ್ಥ
ಕ್ಕೆ ಹೋಗುವುದು ಎಲ್ಲರಿಗೂ ಇದೆ
ಹದಿನೈದು ದಿನಗಳಿಂದ ಗೊತ್ತು. ನಾನ
ದರೋಡೆಯವನಂತೆ; ಬೇರೆ ಯಾರೂ
ಸಿಕ್ಕಿಲ್ಲವೆಂದು ನನ್ನ ಮೇಲೆ ಹೀಗೆ . . .
ಎನ್ನುತಿದ್ದನು. ನ್ಯಾಯಾಧೀಶನು–ಸು
ಮ್ಮನೆ ಒದರಬೇಡ. ನಿನಗೇಕೆ ತಂಟೆ
ಪ್ರಶ್ನೆಗೆ ಉತ್ತರ ಹೇಳು, ಸುಮ್ಮನಿದ
ಲಾರೆಯಾದರೆ, ಎಂಟು ದಿನ ರಿಮಾಂ
ಡು ಕೊಟ್ಟು ಪೊಲೀಸರ ವಶ ಕಳಿಸು
ವೆನು" ಎಂದನು. ಆಸಾಮಿ ಮೌನವಾ
ದನು.

ಇಷ್ಟರಲ್ಲಿ ಪ್ರೊಫೆಸರ್ ಮಾಯಾ
ವಿಯವರು ಬಂದರು. ಅವನನ್ನು ಕಾಣು
ತ್ತಲೆ, ಆಸಾಮಿಯು, 'ಏನಯ್ಯಾ, ನಾ
ನು ದರೋಡೆಯವನೇ?' ಎಂದನು.
"ಅ—ಅ—ಅಲ್ಲ" ಎಂದನು ಪ್ರೊಫೆಸ
ರನು.

"ಈ ಆಸಾಮಿಯು ನಿಮ್ಮ ಕೋಣೆ
ಯೊಳಗೆ ದರೋಡೆ ಮಾಡಲೂ ನಿಮ್ಮ
ನ್ನು ಸಾಧ್ಯವಾದರೆ ಕೊಲ್ಲಲೂ ನಿನ್ನೆ ನು
ಗ್ಗಿದ್ದವನಲ್ಲವೆ?" ಎಂದರು ಮೆಜಿಸ್ಟ್ರೇ
ಟರು.

"ಮಹಾಸ್ವಾಮಿ, ಇವನನ್ನ
ಖಾವಂದರೆ, ಇವನ್ಯಾರು?" ಎಂದನು
ಪ್ರೊಫೆಸರನು. ಕೂಡಲೆ, ಆಸಾಮಿಯು

—ತಾನು ಮಾಘಸ್ನಾನಕ್ಕೆ ಹೋಗುವಾಗ, ಒಂದು ಪತ್ರವನ್ನು ಪೋಲೀಸರಿಗೆ ಕೊಡಲು ತನಗೊಪ್ಪಿಸಿ, ಸ್ನಾನಾರ್ಥಿಗಳನ್ನು ಅತ್ತ ಸರಿಯುತ್ತಿದ್ದಾರಾಗಿಯೂ ಗಾಯವಾದವರಿಗೆ ಡಾಕ್ಟರರನ್ನು ಕರೆ ತರಲು ತಾನೇ ಹೋಗುವುದಾಗಿಯೂ ಪೋಲೀಸರೇ ಈ ಪತ್ರವನ್ನು ಕೊಟ್ಟುದಾಗಿಯೂ, ತಿಳಿಸಿ, ಒಬ್ಬರು ಅತ್ತ ಹೋದುದನ್ನು ವಿವರಿಸಿದನು.

ಕಚೇರಿಯಿಂದ ಇಬ್ಬರೂ ಹೊರಬಿದ್ದರು. ಸಂಜೆ ಹೊತ್ತಿಗೆ ಪ್ರೊಫೆಸರನು ಮನೆಯಲ್ಲಿ ಕೂತಿದ್ದು, ಸುಮಾರು 50 ಪವನಿನ ಚಿನ್ನ ಬೆಳ್ಳಿಯ ಮೆಡಲು, ವೋಚು, ನಗದು ಎಲ್ಲವನ್ನೂ ಕಳೆದುಕೊಂಡುದೇ ಮಾತ್ರವಲ್ಲದೆ, ಇನ್ನು ಪತ್ರಿಕೆಗಳಲ್ಲಿ ಕಂಡಾಬಟ್ಟೆಯಾಗಿ ಬರೆಯಲಾರಂಭವಾಗದಿರದೆಂದೂ, ಇನ್ನೊಂದೂರಿಗೆ ಸರ್ಕೀಟು ಬೆಳಸಿ ಪ್ರದರ್ಶನ ಮಾಡುವುದೆಂದೂ ನಿಶ್ಚಯ ಮಾಡಿಕೊಂಡರು.

ಅಷ್ಟರಲ್ಲೆ,— ಪೋಸ್ಟ್‌ಪೇದೆಯು ಒಂದು ಪಾರ್ಸೆಲನ್ನು ತಂದುಕೊಟ್ಟನು.

ಅದರಲ್ಲಿ ಮೆಡಲು ಸರಹೊಲಿದ ಅಂಗಿಯೂ, ವೋಚೂ, ರೊಕ್ಕವೂ ಇತ್ತು! ಮತ್ತೂ ಒಂದು ಪತ್ರ. "ನಾನು ಅತೀ ಕೀಳು ತರಗತಿಯ ದರೋಡೆಯವನು. ಇಷ್ಟೆಲ್ಲ ನನಗೆ ಅಗತ್ಯವಾಗಿಲ್ಲ. ನಿಮ್ಮ ಮನೋಬಲವೂ ಇದೆಲ್ಲವೂ ನಿಮಗೇ ಇರಲಿ. ನನ್ನ ಮನೋಬಲ ನನಗೆ ಸಾಕು." ಎಂದು ಅದರಲ್ಲಿ ಒಕ್ಕಣೆ.

ಪ್ರೊಫೆಸರನು ಇದನ್ನೆಲ್ಲ ಕಣ್ಣ ಮುಂದೆ ಹರಡಿಟ್ಟುಕೊಂಡು,—"ನಿನ್ನೆ ಓದಿದ್ದ ಆ ಮಹಾತ್ಮಾ ಯೇಸುವಿನ 'ತಫರಾಕಿ'ನ ತತ್ವವು, ಕೊನೆಯಲ್ಲಿ ಸತ್ಯವೇ ಸರಿ!" ಎಂದು ತಲೆದೂಗಿದನು.

೫. ತಾಳದ ಕಿಟ್ಟಣ್ಣ

ತಾಳದ ಕಿಟ್ಟಣ್ಣನ ಭಾಗ್ಯವೆಂದರೆ, ಹಳ್ಳೀ ಸಾಲೆಯಲ್ಲಿ ಮೂರನೆ ದರ್ಜೆಯ ವರೆಗೆ ವಿದ್ಯೆ ಕಲಿತುದು. ಕಲಿತುದು ಕಡಿಮೆ, ಅದರಲ್ಲಿ ಉಳಿದುದೆಂದರೆ 'ನಳರಾಯನ ಕಥೆ' ಪದ್ಯ, ಸರ್ವಜ್ಞ ಪದ್ಯ, ದಾಸರ ಪದ್ಯವಷ್ಟೆ. ಅವನ ಸೌಭಾಗ್ಯವೆಂದರೆ, ಅವನ ಮಾವ ಮೇಳದ ಕುಪ್ಪಣ್ಣ. ಮೂವತ್ತು ವರ್ಷಗಳ ಹಿಂದೆ, ಈ ಮಾವನು ಗಟ್ಟದಾಚೆಗೆ ಬಯಲಾಟದ ಭಾಗವತನಾಗಿ ಊರು ಬಿಟ್ಟು ತೆರಳಿದನು. ನಳರಾಯನ ಕಥೆಯನ್ನು ಊರಿನ ಕಾಗೆಗಳ ವರೆಗೂ ಎಲ್ಲರೂ ಬಾಯಿಪಾಠ ಹೇಳುವಷ್ಟು ಸಲ, ಕಿಟ್ಟಣ್ಣನು ಮಾವನಂತೆ ತಾಳಹಾಕು

ತ್ತ ಹಾಡುತ್ತಿದ್ದುದು, ಮಾವನಲ್ಲಿ ಕಿಟ್ಟ
ಣ್ಣನ ಕಡೆಗೆ ಕೋಪವನ್ನುಂಟುಮಾ
ಡಿತು. ಬಯಲಾಟದಲ್ಲಿ, ಪೂರ್ವರಂಗಕ್ಕೆ
ಸರಿಯಾಗಿ, ಪ್ರಸಂಗ ಪೀಠಿಕೆಯ ವರೆಗೆ
ಕಿಟ್ಟಣ್ಣನು ಸುದಾರಿಸಿದರೆ ಆಗಬಹು
ದಾಗಿ, ಕಿಟ್ಟಣ್ಣನನ್ನು ಎಷ್ಟು ತರಬೇತು
ಮಾಡಿದರೂ, ಧಾಟಿ, ರಾಗ, ತಾಳ
ಅದೊಂದೇಯಾಗಿ, ಯಾವಪದಗಳನ್ನೂ,
"ಯಾತರಾಯಾಸವಿದು ಜಗದ್ವಿ । ಖ್ಯಾತ
ನಲ್ಲಾ ರಾಯರಲಿ ನಳ । ನಾತಗಾದವಿ
ಪತ್ತ ಬಲ್ಲೈ ಕೇಳಿ ಪೂರ್ವದಲಿ?" ಎಂದಿ
ಷ್ಟೆ ಹಾಡುವ ರೀತಿಯಲ್ಲಿ ಹಾಡುತ್ತಿದ್ದ
ನು. ಕೋಡಂಗಿಯಾದರೂ ಆಗೆಂದರೆ
ತಾಳ ತಪ್ಪು! ಡೌಲು ಮಾವನದು,
ತಾಜಾ ಠೀವಿ, ಜೋಕು;—ಆದರೆ, ಬೇ
ರೇನೂ ಬಾರದು. ಹೀಗಾಗಿ, ಅನಾಥ
ನಾಗಿ ತನ್ನಲ್ಲಿದ್ದು ಬೆಳೆದಿದ್ದ ಕಿಟ್ಟಣ್ಣ
ನನ್ನು ಹಿಂದೆಬಿಟ್ಟು, ಕುಪ್ಪಣ್ಣ ಭಾಗವ
ತರು ಗಟ್ಟಹತ್ತಿದರು,—ತಮ್ಮ ಗುಣ
ದಿಂದಲ್ಲ, ಕಿಟ್ಟಣ್ಣನ ಹುಟ್ಟುಗುಣದಿಂದ.

"ಸುಭದ್ರಾ ಕಲ್ಯಾಣ"ದ ಪ್ರಸಂಗ
ಹಾಡುವುದರಲ್ಲಿ ಕುಪ್ಪಣ್ಣ ಭಾಗವತರ
ಹೆಸರು ಎಲ್ಲರ ನಾಲಗೆಯಲ್ಲೂ ನಲಿ
ದಾಡುತ್ತಿತ್ತು. ಭಾಗವತರಿಗೆ ಒಂದೇ
ಮಗು, ಸುಭದ್ರೆ. ಇವಳಿಗೆ ಮುಂದೆ
ಕಿಟ್ಟಣ್ಣನೇ ಅರ್ಜುನನಾಗಿ ಒದಗಬೇ
ಕಲ್ಲದೆ ಬೇರೆ ಪತಿದೇವನು ದೊರೆವಂತಿ
ರಲಿಲ್ಲ; ಅಷ್ಟು ಸುಂದರಿ. ಆದರೆ ಲಗ್ನದ
ಮಾತೆತ್ತಿದರೆ, ಕಿಟ್ಟಣ್ಣನು ಸನ್ಯಾಸಿ
ಯಾಗಿ ಹೋಗುವೆನೆಂದು ಬೆದರಿಸಿ,
"ನುಸುಳಿದನು ಬಳಿಕೊಬ್ಬನೇ" ಎಂದು
ನಳರಾಯನ ಕಥೆಯ ಭಾಗವನ್ನು ಹಾ
ಡಿ ಮುಗಿಸುತ್ತಿದ್ದನು. ಆದರೆ, ತಾ
ಹಿಡಿದು ಹಣಸಂಪಾದನೆ ಮಾಡುವುದ
ಬಹಳ ಕಷ್ಟವಾಗಲು,—ಕಿಟ್ಟಣ್ಣನು ಸ
ಭದ್ರಾ ಕಲ್ಯಾಣಕ್ಕೊಪ್ಪಿದರೆ, ತನ್ನ ಸ
ಪಾದನೆಯನ್ನೆಲ್ಲ, ಅವಳಿಗೆ ಆಭರಣರೂ
ವಾಗಿ ಕೊಡುವುದಾಗಿ ಕುಪ್ಪಣ್ಣನು
ಪ್ರೇರೇಪಿಸಲು, ಕಿಟ್ಟಣ್ಣನು "ಅಳಿಯ
ಸೆಯಲಿ" ಅಳಿಯನಾದನು. ಸಾವಿ
ರೂಪಾಯಿಯಷ್ಟು ಮೌಲ್ಯದ ಚಿನ್ನವು
ಸುಭದ್ರೆಗೆ ದೊರೆಯಿತು.

ಸುಭದ್ರೆ ಇದನ್ನು ಸ್ತ್ರೀಧನವೆಂದ
ತಿಳಿದಿದ್ದಳು. ಊಟಕ್ಕೆ ಉಪ್ಪಿನಕಾಯಿ
ಯೂ ಇಲ್ಲದ ವೇಳೆ, ಗಂಡನೆಷ್ಟು ಪೀಡ
ಸಿದರೂ, ಮೈಮೇಲಿದ್ದ ಚಿನ್ನವನ್ನು
ಗುಡಿಸಲಲ್ಲಿ ಅಡಗಿಸಿಡುವಳು ಹೊರತು
ಪವನಿನ ಬೆಲೆ 23 ರೂಪಾಯಿಯೆಂದ
ಇದ್ದುದನ್ನೆಲ್ಲ ಮಾರಿ, ಸಾವಿರಕ್ಕೆ ಎರಡ
ಸಾವಿರ ಮಾಡಿ ಬೇಂಕಿನಲ್ಲಿಡಲು ಅ
ಳೊಪ್ಪಲಿಲ್ಲ. ಅವರಿದ್ದ ಊರೂ ಚಿಕ್ಕ
ದು; ಒಬ್ಬರ ಮುಖ ಮತ್ತೊಬ್ಬರಿಗೆ
ದಿನಂಪ್ರತಿ ಕಾಣಸಿಗುವಂತಿದೆ. ಕಳ್ಳ
ತನವಿಲ್ಲ. ಪರಊರಿನವರನ್ನು ಸುಲಿಗೆ
ಮಾಡುವ ಧೈರ್ಯವುಳ್ಳವರು ಅಲ್ಲಿದ್ದಿರ
ಬಹುದು, ಹೊರತು ಊರ ಪಟೇಲರಿಗೆ
ಊರವರಲ್ಲಿ ಕಳವಾದ ವಾರ್ತೆ ಬಾರದ
ಇದ್ದುದರಿಂದ, ಉಗ್ರಾಣಿಯು ತಾನು
ಗ್ರಾಮದ ಪೋಲೀಸನೆಂಬುದನ್ನು ಮರೆತೇ
ಇದ್ದನು.

ಹೀಗಿರುತ್ತಿರಲೊಂದು ದಿನ,—

ಒಂದು ದಿನ, ಸುಭದ್ರೆ ಪಟೇ
ಚಾವಡಿಗೆ ಓಡುತ್ತ ಬಂದು, ಒಂದ

ಕೈಯಿಂದ ಬೆವರನ್ನು ಮತ್ತೊಂದರಿಂದ ಕಣ್ಣೀರನ್ನೂ ಒರಸುತ್ತ, "ನಮ್ಮ ಮನೆಗೆ ನುಗ್ಗಿದರಯ್ಯೊ ಕಳ್ಳರು" ಎಂದು ಕೂಗಿಡಲು, ಉಗ್ರಾಣಿಗೆ ಮೂರ್ಛೆಯಾಯಿತು! ಪಟೇಲರು ಕಂಗೆಟ್ಟರು! ಚಾವಡಿಯಲ್ಲಿ ಭೂಕಂಪವಾದಷ್ಟು ಗಲಿಬಿಲಿ.

ಆ ಊರಲ್ಲಿ ಕಳ್ಳರ ಸುಳಿವೆಂದರೆ ನಂಬುವರೆ? ಐದು ವರ್ಷಗಳ ಹಿಂದೆ ಇನಾಸ ಸೋಜನ ಹಿತ್ತಲಿಂದ ಒಂದು ಹಂದಿಯೆ ಮಾತ್ರ ಕಾಣೆಯಾಗಿತ್ತು; ಪಟೇಲರಿಗೆ ಅದು ಕಳವೆಂದೇ ರಿಪೋರ್ಟು ಬಂದಿತ್ತು. ಆದರೆ, ಕೊನೆಗೆ ದೂಮ ಮೂಲ್ಯನ ಬಚ್ಚಲಲ್ಲಿ ಮಲಗಿದ್ದಾಗ ಅವನು ಬಾಗಿಲಿಕ್ಕಿದ ಕಾರಣ. ಅದು ಹೊರಕ್ಕೆ ಬರಲಾರದೆ ಅಲ್ಲೇ ಬಿದ್ದುಕೊಂಡಿತ್ತು; ಮರುದಿನ ಅದನ್ನು ಇನಾಸನು ಬಿದುರಿಗೆ ತೂಗಿಸಿ ತಂದು, ಅದು ಮುಂದೆ ಎಂದೂ ಮಾಯವಾಗಲಾರದ ಹಾಗೆ ಅಂದೇ ಉತ್ತಮ ವ್ಯವಸ್ಥೆ ಮಾಡಿ ಅದರ ಉತ್ತರಕ್ರಿಯೆ ಮುಗಿಸಿದ್ದನು. ಆ ದಿನದಿಂದ ಅಂದಿನ ವರೆಗೆ, ಊರಲ್ಲಿ ಕಳವಾದುದೇ ಇಲ್ಲವಲ್ಲ!

ಆದರೂ, ಸುಭದ್ರೆ ಕಳವಾದ ಸೊತ್ತಿನ ತಪಶೀಲನ್ನು ಬರೆಯಿಸಿದಳು; ನಾಲ್ಕಾರು ಸೀರೆಗಳನ್ನೂ ಪತಿದೇವನು ಎಂದೂ ದುಡಿಯಲಾರದಿದ್ದ ನಗದು ಇನ್ನೂರು ರೂಪಾಯಿ ನಾಣ್ಯವನ್ನೂ ಅದಕ್ಕೆ ಸೇರಿಸಿದಳು. ಮನೆಯ ಕಿಟಕಿಯ ಬಾಗಿಲು ನಿನ್ನೆ ರಾತ್ರೆ ಮುಚ್ಚಿಟ್ಟದ್ದುದು ಬೆಳಗ್ಗೆ ತೆರೆದೇ ಇದ್ದಿತೆಂದೂ ಬರೆಯಿಸಿದಳು. ಪಟೇಲರು ವಾಜ್ಮೂಲವನ್ನು ವಿಜೃಂಭಣೆಯಿಂದ ಬರೆದುಕೊಂಡು, ಉಗ್ರಾಣಿದೇವನನ್ನು ಅವನ ಗಂಜಿಯೂಟ ಮುಗಿದ ಕೂಡಲೆ ತನಿಖೆಗೆ ಕಳುಹಿಸುವುದಾಗಿಯೂ, ಹತ್ತಿರದ ಪೋಲೀಸ್ ಸ್ಟೇಶನಿಗೂ ದೂರು ಮುಟ್ಟಿಸುವುದಾಗಿಯೂ ಭರವಸೆ ಹೇಳಿದರು. ಮನೆಯ ವಠಾರದಲ್ಲಿ ಕಾಣಸಿಗಬಹುದಾದ ಕಾಲಹೆಜ್ಜೆಗಳ ಗುರುತುಗಳು ಮಾಸಿಹೋಗದಂತೆ ಎಚ್ಚರವಿಡಬೇಕೆಂದೂ ತಿಳಿಸಿದರು. ಸುಭದ್ರೆ ಮನೆಗೆ ಮರಳಿದಳು.

ಅರ್ಧ ತಾಸು ಕಳೆದ ಬಳಿಕ, ತಾಳದ ಕಿಟ್ಟಣ್ಣನೆ ಅತ್ತ ಬಂದನು. ವಂದನಾದಿಗಳು ಮುಗಿದ ಬಳಿಕ, ಪಟೇಲರು, "ಕಿಟ್ಟಣ್ಣ! ನಿಮ್ಮಲ್ಲಿ ಕಳವಾಯಿತಂತೆ, ನಿನ್ನ ಹೆಂಡತಿ ಬಂದಿತ್ತ ದೂರು ಕೊಟ್ಟಿದ್ದಾಳಷ್ಟೆ. ವಿವರವೆಲ್ಲ ಇಲ್ಲಿದೆ" ಎಂದು ಕಳವಾದ ಸೊತ್ತಿನ ಪಟ್ಟಿಯನ್ನು ಓದಿಹೇಳಿ, "ಇನ್ನೇನಾದರೂ ಕಳವಾಗಿದೆಯೋ, ಇದ್ದರೆ ಕೂಡಿಸಬಹುದು. ಇದರ ನಕಲನ್ನು ಪೋಲೀಸ್ ಸ್ಟೇಶನಿಗೆ ಕಳುಹಿಸುತ್ತೇವೆ" ಎಂದರು.

ಇದನ್ನು ಕೇಳುತ್ತಲೆ ಕಿಟ್ಟಣ್ಣನು, ನಳದಮಯಂತಿಯರು ಪುನಃ ಒಬ್ಬರನ್ನೊಬ್ಬರು ಸೇರಿಕೊಂಡಾಗ ನಳನು ನಕ್ಕಂತೆ, ಚಾವಡಿಯೆಲ್ಲ ಕಂಪಿಸುವಷ್ಟು ಬಲವಾಗಿ ನಕ್ಕನು. ನಗುವನ್ನಂತೂ ತಡೆಯುತ್ತ ತಡೆಯುತ್ತ—'ಹಃ ಹಃ, ಕಳವಾಗಿದೆ, ಹಃ ಹಃ, ನಾನೇ, ಹಃ ಹಃ, ಕಳ್ಳ ಹಃ ಹಃ ಹಃ' ಎಂದನು. ಬಾಯಿಯಲ್ಲಿ ಅರೆಜಗಿದ ತಾಂಬೂಲವೆಲ್ಲ ಚಾವಡಿಯಲ್ಲಿ ಮಳೆಗರೆಯಿತು.

ಪಠೇಲರು ಸೋಜಿಗಗೊಂಡು ಸಿಟ್ಟಾಗಿ,–'ನೀನು?' ಎಂದು ಪ್ರಶ್ನಿಸಿದರು.

ಕಿಟ್ಟಣ್ಣನು ಇನ್ನಷ್ಟು ಬಾಯಗಲಕ್ಕೂ ನಕ್ಕು, "ನಾನು! ಕಳ್ಳನು! ಎಷ್ಟೇ ಹೇಳಿದರೂ ಪೆಟ್ಟಿಗೆಯೊಳಗಿದ್ದ ಚಿನ್ನವನ್ನು ಮಾರಿ ಹಣಮಾಡಿ ಬೇಂಕಿನಲ್ಲಿಡೋಣ ಎಂದರೂ ಕೇಳಳು; ಈಗ ಧರ್ಮಕ್ಕೆ ಬರಗಾಲ ಬಂದಾಗ ನನಗೊಂದು ಚೂರು ಕೊಡು ಎಂದರೂ ಕೊಡಳು; ಕಿಟಕಿಯೆಲ್ಲ ತೆರೆದೇ ಇಡುವಳು. ಅವಳ ಪ್ರಕೃತಿ ಸ್ವಲ್ಪ ಜೋರಿನದು. ಕೊಂಚ ಬುದ್ಧಿಗಲಿಸಬೇಕೆಂದು, ನಾನು ಆಲೋಚನೆ ಮಾಡಿದೆನು. ನನ್ನ ಮಾತು ಕೇಳುವುದಿಲ್ಲವೆಂದು ಸರ್ವಜ್ಞನ ಮಾತುಗಳನ್ನೂ ಹೇಳುತ್ತ, ಅದೆಲ್ಲ—ಕಳ್ಳಗೆ ನೃಪಗೆ,—ಬಾಯೊಳಗೆ ಮಣ್ಣು ಕಾಣಯ್ಯ—ಇತ್ಯಾದಿ ಎಷ್ಟೋ ನೀತಿ ಬೋಧಿಸಿ ನೋಡಿದೆನು. ಅದೂ ವ್ಯರ್ಥವಾಯಿತು. ಬೇಕೆಂದೇ, ಕಿಟಕಿ ತೆರೆದೇ ಬಿಟ್ಟಳು. ಅದಕ್ಕಾಗಿ, ನಾನೇ, ಅವಳ ಆಭರಣದ ಕರಡಿಗೆಯನ್ನೆ ಮೆಲ್ಲನೆ ಎತ್ತಿಕೊಂಡು, ಬಚ್ಚಲನೀರ ಗುಳಿಯಲ್ಲಿ ಹೂಳಿಟ್ಟಿರುವೆನು. ಸೀರೆ ಮತ್ತು ನನ್ನ ಹಣ ಎಂಬುದೆಲ್ಲ ಸುಳ್ಳು; ಅದೆಲ್ಲ ನಮ್ಮಲ್ಲಿ ಇರಲೇ ಇಲ್ಲವಾದ ಒಡವೆಗಳು. ಇದನ್ನೆಲ್ಲ ತಲಾಸಿಮಾಡುವ ಹವ್ಯಾಸಕ್ಕೆ ಹೋಗಬೇಡಿರಿ. ಸ್ವಲ್ಪವಾದರೂ ಬುದ್ಧಿ ಬಂದು, ಕರ್ಚಿನ ಮಟ್ಟಿಗೆ ಏನಾದರೂ ಮಾರಬಿಡುವಳೋ, ತಲಾಸಿಮಾಡಿ ಕೊಟ್ಟರೆ ಎಷ್ಟು ಇನಾಮು ಕೊಟ್ಟಾಳು, ಕಿಟಕಿಗಳನ್ನು ಮುಚ್ಚಿಡುವಳೋ ಇತ್ಯಾದಿ ಪ್ರಶ್ನೆ ಕೇಳಿ ನೋಡುವೆನು. ಬುದ್ಧಿ ಬಂದು ಒಪ್ಪುವಳು. ಆ ಮೇಲೆ ಈ ಜೋಡು ತಾಳಗಳನ್ನು ಆ ಹೊಂಡದಲ್ಲಿ ಹೂಳಿಟ್ಟು, ಆ ಕರಡಿಗೆಯನ್ನು ಎತ್ತಿಕೊಂಡು ಅವಳಿಗೇ ಕೊಡುವೆನು. ಚಿನ್ನ ಮಾರಿ, ಹಣದ ಬಡ್ಡಿಯಿಂದ ಜೀವಿಸುವೆವು. ನಮ್ಮೂರಲ್ಲಿ ಕಳ್ಳರೆಲ್ಲಿಂದ ಸ್ವಾಮಿ?" ಎಂದು ನಗುನಗುತ್ತ ಎಲ್ಲವನ್ನು ವಿವರಿಸಿ ಹೇಳಿದನು.

ಅವನ ನಗುವಿನೊಡನೆ, ಚಾವಡಿಯೂ ನಕ್ಕು ಬಿಟ್ಟಿತು. ಉಗ್ರಾಣಿಯು ತನಗೆ ಒಂದು ರಗಳೆ ತಪ್ಪಿತೆಂದು ಎರಡು ಸಲ ನಕ್ಕನು. ತನ್ನ ರಿಕಾರ್ಡು ಕಲಂಕವಿಲ್ಲದೆ ಉಳಿಯಿತೆಂದು, ಕಿಟ್ಟಣ್ಣನ ಬಾಯ ತಾಂಬೂಲದಿಂದ ಹೊಲಸಾದ ಚಾವಡಿಯ ಅಸಹ್ಯತೆಯನ್ನೂ ಮರೆತು, ಪಠೇಲರು ಚೆನ್ನಾಗಿ ನಕ್ಕರು.

ನಂತರ, 'ಇದೇ ಕೊನೆಯ ಸಲ' ಎಂದು 'ನಳರಾಯನ ಕಥೆ'ಯನ್ನು ಬಲು ಚೆನ್ನಾಗಿ ತಲೆದೂಗುತ್ತ, ಬಲವಾಗಿ ತಾಳ ಹಾಕುತ್ತ, ಕಿಟ್ಟಣ್ಣನೂ ಹಾಡಿದನು. ಉಗುಳಿ ಹೋದ ತಾಂಬೂಲದ ಬದಲಾಗಿ ಹೊಸ ವೀಳಯವನ್ನು ಪಠೇಲರ ಹರಿವಾಣದಿಂದೆತ್ತಿಕೊಂಡು ಬಾಯ್ತುಂಬ ಜಗಿಯುತ್ತ, ಕಿಟ್ಟಣ್ಣನು ಅನುನಿತ್ಯದ ನಗರ ಸಂಚಾರಕ್ಕೆ ಎದ್ದು ಹೋದನು.

ತಮ್ಮ ಚಾವಡಿಯಲ್ಲಿ ಇಂತಹ ಕಥೆ ಬಹುಕಾಲದವರೆಗೂ ವಿನೋದವಾಗಿ ಹೇಳುತ್ತ ಇರಬಹುದಾಗಿ, ಇನಾಸನ ಹಂದಿಯೊಡನೆ ಸುಭದ್ರೆಯ

ಕರಡಿಗೆಯ ಕಥೆಯನ್ನೂ ಪಠೇಲರು ಸ್ಮರಿಸುತ್ತ ಕೂತರು.

'ಕಿಟ್ಟಣ್ಣನು ಏನಲ್ಲದಿದ್ದರೂ ಹೆಂಡತಿಗೆ ಬುದ್ಧಿ ಕಲಿಸಿದನಯ್ಯಾ' ಎಂದು ಪಠೇಲರೂ ತಲೆದೂಗಿದರು. ಉಗ್ರಾಣಿಯೂ ತಲೆದೂಗಿದನು.

ನಗು ನಗುತ್ತ ಕಿಟ್ಟಣ್ಣನು ಬೇಕೆಂದೇ ಸಂಜೇ ಹೊತ್ತಿಗೆ ಮನೆ ಸೇರಿದನು. ಅವಳು ಅರೆನಿದ್ದೆಯಲ್ಲಿದ್ದಂತೆ ಅಳುತ್ತ ಹೊರಳುತ್ತ ಪೋಲೀಸರ ತನಿಖೆ ಕಾಯುತ್ತ ಇದ್ದಳು. ಒಲೆ ತಣ್ಣಗಾಗಿದ್ದಿತು. ಊಟಕ್ಕಿಲ್ಲ, ಊಟಕ್ಕೆ ಅಡುಗೆ ಮಾಡಿಯೂ ಇಲ್ಲ.

ಕಿಟ್ಟಣ್ಣನು ಲೆಕ್ಚರು ಹೊಡೆದನು. ಪುನಃ ಸರ್ವಜ್ಞ ಪದ್ಯಗಳು, ಗಾದೆಯ ಮಾತು, ದಾಸರ ಪದಗಳು ಎಲ್ಲವನ್ನು ಹಾಡುತ್ತ ಹೇಳುತ್ತ,—ಹಣದ ಸುಖವನ್ನು ಅನುಭವಿಸಬೇಕು, ಅಡಗಿಸಿಡುವುದಕ್ಕಿಂತ ಬೇಂಕೇ ಮೇಲು, ಕಿಟಕಿ ತೆರೆದಿಡಬಾರದು ಎಂಬಿತ್ಯಾದಿ ನಾನಾ ಬೋಧನೆಗಳನ್ನು ಒತ್ತಿ ಒತ್ತಿ ಹೇಳಿ, ಸೊತ್ತು ತಲಾಸಿಯಾದರೆ, ಇನ್ನು ತಾಳದ ಗೊಡವೆ ಬಿಟ್ಟು, ಇದ್ದುದರ ಬಡ್ಡಿಯಿಂದ ಸುಖಜೀವನ ಮಾಡಿ, ಇಹಪರಗಳಲ್ಲಿ ಸೌಖ್ಯವನ್ನು ಹೊಂದುವಂತಹ ಅನುಕೂಲತೆಗೆ ಹೆಂಡತಿಯ ಒಪ್ಪಿಗೆಯನ್ನೂ ಪಡೆದನು.

ನಾಳಿನೊಳಗೆ ಕಳವಾದ ಸೊತ್ತು ಸಿಗುವಂತಾಗಲೆಂದು ದೇವರ ಪ್ರಾರ್ಥನೆಯಾಯಿತು. ನಿರಾಹಾರಿಗಳಾಗಿ, ವೆಂಕಟರಮಣನಿಗೆ ಹರಿಕೆ ಹೊತ್ತು, ಇಬ್ಬರೂ ನಿದ್ದೆ ಹೋದರು.

* * * *

ಬೆಳಗಾಯಿತು. ಪಠೇಲರ ಚಾವಡಿಯಲ್ಲಿ ಇನ್ನೂ ಉಗ್ರಾಣಿಯು ನಿನ್ನೆಯ ತಾಂಬೂಲವನ್ನು ತೊಳೆದಿಲ್ಲ. ಪಠೇಲರು ಇನ್ನೂ ಓಲಗಕ್ಕೆ ಬಂದಿಲ್ಲ. ಕಿಟ್ಟಣ್ಣನು ಅಲ್ಲಿಗೇ ಓಡಿಬಂದಿರುವನು. ಬಾಯಿಯಲ್ಲಿ ತಾಂಬೂಲವಿಲ್ಲ, ಮುಖ ತೊಳೆದಿಲ್ಲ, ಕಣ್ಣು ಕೆಂಪಗಿದೆ, ಮುಖ ಉದ್ದವಾಗಿದೆ, ನಗುವಿನ ಸುಳಿವಿಲ್ಲ.

ಬಂದವನೇ ಪಠೇಲರಿಗೆ, ಊರಿಗೆ ಬೆಂಕಿ ಹತ್ತಿದಂತೆ, ಕೂಗಿದನು, ಕೂಗಿಟ್ಟನು. ಪಠೇಲರು ಈ ಅಪಲಕ್ಷಣವನ್ನು ಕಾಣಲು, ಕಣ್ಣೊರಸಿಕೊಳ್ಳುತ್ತ, ಹೊರಕ್ಕೆ ಕಾಲಿಟ್ಟರು.

'ಸ್ವಾಮಿ, ಬರೆದುಕೊಳ್ಳಬೇಕು, ಪರಾಕೆ, ನಮ್ಮಲ್ಲಿ ಕಳವಾಗಿದೆ!' ಎಂದು ಗೋಳೋ ಎಂದು ಅತ್ತನು.

'ಹಃ,ಹಃ, ನಿನ್ನೆ ಅವಳ ದೂರು, ಇಂದು ನಿನ್ನದೇ? ಹಃ ಹಃ' ಎಂದರು ಪಠೇಲರು.

'ನಿನ್ನೆಯದು ಸುಳ್ಳು; ಇಂದಿನದು ಸತ್ಯ. ನನ್ನ ಮಾತಿಗೆಲ್ಲ ಅವಳು ಒಪ್ಪಿಕೊಂಡಿದ್ದಳು. ಅದಕ್ಕಾಗಿ ಕೋಳಿ ಕೂಗಿದಾಗಲೆ ಎದ್ದು, ಕರಡಿಗೆಗಾಗಿ ಬಚ್ಚಲ ನೀರಹೊಂಡವನ್ನು ಹುಡುಕುತ್ತೇನೆ, ಕರಡಿಗೆಯೇ ಇಲ್ಲವಲ್ಲ!! ಇದನ್ನೆಲ್ಲ ತಿಳಿದ ಯಾರೋ ಅದನ್ನು ರಾತ್ರಿಯಲ್ಲೇ ಚಾರಿಸಿರಬೇಕು. ದಯವಿಟ್ಟು ಬರಬೇಕು.

ಈಗಲೆ ತನಿಖೆಯಾಗಲಿ! ನನ್ನ ಕೈಯಿಂದ ನಾನೇ ಮತ್ತೊಬ್ಬನನ್ನು ಕಳೆದು ಕೊಟ್ಟಂತಾಯಿತಲ್ಲ! ಬನ್ನಿರಿ!" ಎಂದು ಪಟೇಲರ ಕಾಲುಹಿಡಿದು ಕೂಗಿದನು.

ಪಟೇಲರ ವಿಸ್ಮಯಕ್ಕೆ ಮಿತಿಯಿಲ್ಲ. ಕಳ್ಳರಿಲ್ಲದ ಊರಲ್ಲಿ, ಪುನಃ ನಿಜವಾಗಿಯೂ ಕಳ್ಳತನವೇ? ಹೋಗಿ ನೋಡಲೇಬೇಕೆಂದು, ಅವನೊಡನೆ ಅವನ ಮನೆಗಾಗಿ ನಡೆದು ಬಂದರು.

ಕಿಟ್ಟಣ್ಣನ ಮನೆಯ ಬಾಗಿಲು ತೆರೆದಿದೆ. ಸುಭದ್ರೆ ಹೊಸ್ತಿಲ ಬಳಿ ನಿಂತಿದ್ದಾಳೆ. ಇವರಿಬ್ಬರು ನಾಲ್ಕು ಮಾರು ದೂರವಿರುವಾಗಲೆ,– "ಸ್ವಾಮಿ, ಸುಮ್ಮನೆ ಬರಬೇಡಿರಿ. ವೇಂಕಟರಮಣನಿಗೆ ಹರಿಕೆ ಹೇಳಿಯಾಗಿದೆ. ಇನ್ನು ತಾಳಬಿಟ್ಟು, ಬೇಂಕಿನಿಂದ ದೊರೆಯುವ ಬಡ್ಡಿಯಿಂದ ಜೀವನಮಾಡುವುದಾಗಿ ಖಂಡಿತವಾಗಿದೆ. ನಮ್ಮಲ್ಲಿ ಕಳವಾದ ಸುದ್ದಿ ಬಿಡಿ. ತಲಾಸಿಯಾಗುವುದು ದೇವರದಯೆಯಿಂದ." ಎಂದು ಸುಭದ್ರೆ ಎಂದಳು. ಅವಳು ಬಾಯ್ತುಂಬಾ ನಗುತಿದ್ದಳು.

ಎಂತೂ, ಪಟೇಲರು ಮನೆಸೇರಿ, ಅಲ್ಲಿ ಮಣೆಯ ಮೇಲೆ ಆಸೀನರಾದರು. ಹರಿವಾಣ ಬಂತು. ತಾಂಬೂಲಹಾಕಿಕೊಂಡರು. ಸುಭದ್ರೆ ವಿವರಿಸಿದಳು:—

"ಸ್ವಾಮಿ, ಜನ್ಮಾರಭ್ಯ ಬೇರೇನೂ ಇಲ್ಲದೆ ತಾಳದಿಂದಲೇ ಬಾಳಿದ್ದೇವೆ. ಈಗ ಚಿನ್ನಮಾರಿ, ಬಡ್ಡಿಯಿಂದ ಜೀವನಮಾಡ[ಬೇ]ಕಂತೆ. ಅದೇಕೊ? ಆಗ ನಾನ[ು] ಒಪ್ಪಿ, ನಿದ್ದೆಹೋಗಲಾರದೆ ಭಾವಿಸಿದೆ. ರಾಯರು ಸುಖವಾಗಿ ನಗುತ್ತ ನಿದ್ದೆ ಹೋದರು. ನಾನು ಇವರ ಇಂಗಿತ ತಿಳಿದಿದ್ದೆ. ಇವರೇ ಕದ್ದಿದ್ದರೆಂದು ತಿಳಿದೆ. ಮೆಲ್ಲನೆ ಎದ್ದು, ಹಿತ್ತಲಲ್ಲಿ ಹುಡುಕಾಡಿದೆ. ಬಚ್ಚಲ ಚರಂಡಿಯಲ್ಲಿ ನೀರೆಲ್ಲ ಹರಿದಿದ್ದಿತು. ಕರಡಿಗೆ ಬೆಳ್ದಿಂಗಳಲ್ಲಿ ಜಗಜಗ ಎಂದಿತು. ಎತ್ತಿಕೊಂಡು ಬಂದೆ. ಇವರ ಆಟ ನೋಡೋಣವೆಂದು ನಿದ್ದೆಹಿಡಿದಂತೆ ಬಿದ್ದುಕೊಂಡೆ. ಮೆಲ್ಲನೆ ಕೋಳಿಕೂಗುವ ವೇಳೆ ಎದ್ದು ಹೊರಬಿದ್ದರು. ಕಿಟಿಕಿಯಿಂದ ನೋಡಿದೆ. ಬಚ್ಚಲಿಗೆ ಹೋದರು. ಒಳ ಹೋಗುವಾಗ ನಗುವೂ ಹೊರ ಬರುವಾಗ ಅಳುವೂ ತೋರಿತು. ನಾನು ನಿಂತು ನಕ್ಕೆ. ಇವರು ನಿಮ್ಮಲ್ಲಿಗೇ ಓಡಿದರು. ಇಲ್ಲೇನು? ಸೊತ್ತೆಲ್ಲ ಇಲ್ಲೇ ಇದೆ. ಕಳವಾಗಲೇ ಇಲ್ಲ. ವೀಳೆಯ ಹಾಕಿಕೊಳ್ಳಿ. ನಿಮ್ಮಂಥ ಧನಿಗಳು ಊರಿಗೆ ಇರುವಾಗ ಕಳವು ಮಾಡುವವರು ಯಾರು?" ಎಂದಳು. ಪಟೇಲರು ನಗುತ್ತ ಇವಳ ಮಾತಿಗೆ ವಿಸ್ಮಯಗೊಂಡು ಚಾವಡಿಗೆ ಬಂದರು.

ಕಿಟ್ಟಣ್ಣನು, ತಾಳದ ಕಿಟ್ಟಣ್ಣನಾಗಿಯೆ ಉಳಿಯಬೇಕಾಯಿತು. ಅಲ್ಲಿ ನಿಲ್ಲದೆ, ಎಂದಿನಂತೆ,— "ನುಸುಳಿದನು ಬಳಿಕೊಬ್ಬನೇ!"

೬. ಕುದುರೆಮುಖ

ಕೃಷ್ಣಾಷ್ಟಮಿಯ ಹಬ್ಬಕ್ಕೆ ಇನ್ನೆಂಟೇ ದಿನಗಳಿರುವಾಗ ಲಕ್ಷಾಧೀಶ ಕೃಷ್ಣರಾಯರ ಪುತ್ರಕಾಮೇಷ್ಟಿಯಾಗದ ಫಲವಾಗಿ ಹುಟ್ಟಿದ ಒಂದೇ ಒಂದು ಮಗು,—5000 ಎಕ್ರೆ ಕಾಫೀ ತೋಟಕ್ಕೆ ಮುಂದಣ ಯಜಮಾನ–ತನ್ನ ಐದನೆ ವರ್ಷದಲ್ಲಿದ್ದಂತೆ ಹಿರೇತನದ ಅಧಿಕಾರವನ್ನೋ ಅಧಿಕಾರದ ಹಿರೇತನವನ್ನೋ ತೋರಿಸ ತೊಡಗಿ, ತೋಟವೆಲ್ಲ ಅಡಿ ಮೇಲಾಗಿದೆ. ಶ್ರೀಮಂತರ ಮಕ್ಕಳೇ ಹೀಗೆ; ಯಾರಿಗೂ ಬೇಡವಾಗಿ, ಅಸಹ್ಯವಾದುದರ ಮೇಲೆಯೇ ಅವರ ಪ್ರೇಮ, ಆಸಕ್ತಿ. ತನ್ನಂತೆಯೆ ರತ್ನಾಭರಣಾದಿಗಳಿಂದ ಅಲಂಕೃತವಾದ ಗೊಂಬೆಯನ್ನು ಬಿಸುಟು, ಹಾಳಾದ ತಿರುಪತಿ ಚಂದನದ ಅರೆತುಂಡಾದ ಗೊಂಬೆ ಕಳೆದು ಹೋಯಿತೆಂದು ಹಗಲೂ ರಾತ್ರೆ, ಆದೇ ಶ್ರಾವಣದ ಮಳೆಯಂತೆ, ಅಳತೊಡಗಿದೆ. ಅಂತಹ ಗೊಂಬೆಯನ್ನು ಬೊಂಬಾಯಿ, ಮದ್ರಾಸುಗಳಿಂದಲೂ ತಂತೀ ಮೇಲೆ ತರಿಸಲಾಗಲಿಲ್ಲ; ಅದೊಂದು ಸಿಗದೆ ಮಗುವಿನ ಕಣ್ಣೀರಿಂದ ಉಂಟಾಗುವ ನೆರೆ ಹಾವಳಿಯಿಂದ ಕೃಷ್ಣಾಷ್ಟಮಿಯ ಹಬ್ಬವನ್ನು ಕಾಪಾಡಲೂ ಬರುವುದಿಲ್ಲ. ಡಾಕ್ಟರರು, ನರ್ಸಮ್ಮನವರು, ಜೋಯಿಸರು, ಮಾಂತ್ರಿಕರೂ ಬಂದು ನೋಡಿದ್ದಾಯಿತು; ಡಾಕ್ಟರರ ಅತ್ಯುತ್ತಮ ಸೆಕುಂದು ವೋಚುಗಳ ಸೂಚನೆಗಳು, ನರ್ಸಮ್ಮನವರ ವೈಯಾರದ ಹಾವಭಾವಗಳೂ ಜೋಯಿಸರ ಗ್ರಹಕುಂಡಲಗಳೂ, ಮಾಂತ್ರಿಕರ ಬೂದಿಯುಸಿರುಗಳೂ ವ್ಯರ್ಥವಾದುವು. ಮಗು ಅಳುವನ್ನು ತಡೆಯಲೇ ಇಲ್ಲ. ಪ್ರಸಿದ್ಧ ಪತ್ತೇದಾರರನ್ನು ಕರೆಸಿದ್ದರೆ, ಮಗುವಿನೊಡನೆ ಯಾವಾಗಲೂ ಆಡುತ್ತಲಿದ್ದ ನಾಯಿಯನ್ನು ನೋಡಿ, ಅದರ ಕಾಲ್ಬೆರಳ ಸಂದಿನ ಮಣ್ಣನ್ನು ಮೂಸಿ, ಭೂತಕನ್ನಡಿಯಿಂದ ಅದನ್ನು ನಿರೀಕ್ಷಿಸಿ, ಆ ಮಣ್ಣಿರುವ ಸ್ಥಳವನ್ನು ಹುಡುಕಿ, ಅಲ್ಲಿ ಆ ಗೊಂಬೆಯನ್ನು . . . . . . ಇರಲಿ, ಅಲ್ಲಿಲ್ಲದ ಪತ್ತೇದಾರರಿಗಾಗಿ ನಾವೇಕೆ ಎಲ್ಲವನ್ನು ಬಿಡಿಸಿ ಹೇಳಬೇಕು? ಮಗು ಅಳುತ್ತಲೇ ಇದ್ದುದು, ಅಷ್ಟಮಿಯ ತನಕವೂ ಅಳುತ್ತಲೇ ಇರುವುದಾದರೆ ಆ ಕೃಷ್ಣನು ಜನನಕ್ಕೆ ಬಂದ ಸಮಯಕ್ಕೆ ಸರಿಯಾಗಿ, ಈ ಕೃಷ್ಣರಾಯರ ಮಗು ಜನ್ಮ ಮುಗಿಸುವುದೋ ಎನ್ನುವಂತಾಗಿತ್ತು. ಪಾಪ!

ಐದು ವರ್ಷದ ಜೈಲುವಾಸವನ್ನು ಮುಗಿಸಿ, ಜೊಗ್ಗು ಅಂದೇ ಹೊರಬಿದ್ದಿದ್ದನು. ದುರದೃಷ್ಟವು ಎಂದಾದರೂ ಯಾರನ್ನೂ ವರಿಸಿದ್ದರೆ, ಇವನನ್ನೆ; ಜೈಲಿನಿಂದ ಹೊರಬಿದ್ದರೆ, ಹಗಲೆಲ್ಲ ಭೂತದ ಚಾವಡಿ, ಸ್ಮಶಾನದ ಹಾದಿ, ನಾಗನ ಕಟ್ಟೆ, ಸಮುಗಾರ ಗುಂಡಿ, ಎಲ್ಲವನ್ನೂ ಸುತ್ತಿ ಬೇಸತ್ತು ಸಂಜೇ

ಹೊತ್ತಿಗೆ ತೋಟದ ಹೊರಗಣ ಗಡಂಗಿನ ಬಾಗಿಲಲ್ಲಿ ಬಂದು ನಿಂತನು: ಹತ್ತಿರದಲ್ಲಿ ಒಂದು ದಿನ್ನೆ; ತೋಟದ ಕಸದ ಗುಂಡಿ. ಗುಂಡಿಯಲ್ಲೇನೋ ಹೊಳೆದಂತೆ ತೋಚಿತು: ಅದೊಂದು ಲಕ್ಷಣವೆಂದು ಅದನ್ನೆತ್ತಿಕೊಂಡನು. ಚಿನ್ನವಲ್ಲ, ಬೇಗಡೆ ಹಚ್ಚಿದ ಮರದ ತುಂಡು. ಅದನ್ನು ಕೈಯಲ್ಲಿ ಹಿಡಿದುಕೊಂಡು, ಆಡಿಸಿದನು. ಮನೆಯಲ್ಲಾಡುತ್ತಿದ್ದ ತನ್ನದೊಂದೇ ಮೃತ ಮಗುವಿನ ನೆನಪಾಯಿತು. ಅದನ್ನೆ ಭಾವಿಸಿ ಭಾವಿಸಿ, ಗಡಂಗಿನೊಳಗೆ ಅಷ್ಟುಮಿಯ ಗದ್ದಲ ಮೀರಿರಲು, ಹಾಗೇ ತಾನೂ ಒಳಕ್ಕೆ ನಡೆದು ಅಲ್ಲಿದೊಂದು ಹಲಗೆಯ ಮೇಲೆ ಕೂತನು. ಈ ಹಬ್ಬದ ನೆನಪಾದಂತೆಲ್ಲ, ಮಗುವಿನ ಸ್ಮರಣೆ ಬಂದಂತೆಲ್ಲ, ಐದು ವರ್ಷಗಳ ಹಿಂದೆ, ಅದೇ ದಿನ, ಅವನನ್ನು ಕೈದು ಮಾಡಿದ ನೆನಪಾಯಿತು. ಆ ದೃಶ್ಯವು ಅವನ ಕಣ್ಣೆದಿರಲ್ಲೇ ಹೊಳೆಯುತ್ತಿದ್ದಿತು. ಆಗಲೆ ಎತ್ತಿ ತಂದ ಬೇಗಡೆ ಹಚ್ಚಿದ ಮರದ ತುಂಡನ್ನು ನೋಡುತ್ತ ನೋಡುತ್ತ, ಅದನ್ನು ಕುರಿತಾಗಿಯೇ ಮಾತಾಡುತಿದ್ದಂತೆ ತೋರುತ್ತಿದ್ದನು.

ಹತ್ತಿರವೇ ನಾಲ್ಕು ಜನ ಕೂತಿದ್ದರು. ಅವರು ಒಂದೆರಡು ಸಲ ಪ್ರಸಾದ ಪಾನಕಗಳನ್ನು ಗಡಂಗಿನಲ್ಲಿ ಸ್ವೀಕರಿಸಿದ್ದರು. ಬಹಳ ಗೋಪನದಲ್ಲಿ ಎಂಬಂತೆಯಾದರೂ ಆಗುವಷ್ಟು ಗಟ್ಟಿಯಾಗಿ 'ನೂರು ರೂಪಾಯಿ ಇನಾಮಿ'ನ ಚರ್ಚೆ ಮಾಡುತ್ತಿದ್ದರು! ಬೊಗ್ಗುವಿನ ಕಿವಿ ಅದನ್ನು ಕೇಳಿತೋ ಏನೋ ಅವರು ಮಾತ್ರ ಇವನ ಕೈಯಲ್ಲಿದ್ದ ಗೊಂಬೆಯನ್ನು ನೋಡಿದುದು ನಿಜ.

ಅವರಲ್ಲೊಬ್ಬನು ಧೈರ್ಯವಾ[illegible] ಇವನ ಹತ್ತಿರಕ್ಕೆ ಕೊರಳು ಚಾ[illegible] "ಏ, ಎಲ್ಲಿಂದೆತ್ತಿಕೊಂಡೆ ಇದನ್ನು[illegible] ಎಂದನು.

"ಇದನ್ನೊ, ಇದು ಗವರ್ನರ[illegible] ನನಗೆ ಇನಾಮು ಕೊಟ್ಟಿದ್ದಯ್ಯಾ!" ಎಂದ ಬೊಗ್ಗುವನ್ನು ಕಂಡು ನಕ್ಕ[illegible] ಅವನು "ನಮ್ಮ ಅಣ್ಣನ ಮಗು ಇಂತ[illegible]ದೊಂದು ಮರದ ತುಂಡಿಗಾಗಿ ಅಳು[illegible]ಲಿದೆ. ಹಂ." ಎಂದನು.

ಆಫ್ರಿಕದ ಕಾಡಿಗೆ ಹೋಗಿ, ಅ[illegible] ಸಿಂಹವನ್ನು ಕಂಡು, ಅದರ ಮ[illegible]ಯೊಂದನ್ನು ಮನೆಯಲ್ಲಿರುವ ಅಣ್ಣ[illegible] ಮಗುವಿಗೆ ಆಡುವುದಕ್ಕೆ ಬೇಕೆಂದ[illegible] ಕೇಳಿಕೊಂಡರಾದರೂ ಆ ಸಿಂಹವು ಮ[illegible]ಯನ್ನು ಸಾಕಣೆಗೆ ಕೊಡಬಹುದು[illegible] ಐದು ವರ್ಷದ ಸಜೆ ಕಳೆದು ಏನೊಂದು[illegible] ಇಲ್ಲದೆ ಹೊರಬಿದ್ದ ಬೊಗ್ಗುವಿನ ಸಮಸ್ತ[illegible] ಆಸ್ತಿಯಾಗಿದ್ದ ಈ ಲಕ್ಷಣದ ಗೊಂ[illegible]ಯನ್ನು ಕೇಳುವುದರಲ್ಲಿ ಅರ್ಥವುಂಟ[illegible] ಹೀಗಾಗಿ ಅದನ್ನು ಬೇಕೆಂದು ಬೇಡಿ[illegible] ಮೋಸನು ಮೌನವಾದನು. ಮೋಸನ[illegible] ಅದನ್ನು ಸೆಳೆದುಕೊಳ್ಳುತಿದ್ದನು; ಬೊಗ[illegible]ವಿನ ಕೈಯೆಂದರೆ, ಮೋಸನ ತಲೆಯನ[illegible] ಹೆಂಡದ ಮಡಕೆಯಂತೆ, ನುಚ್ಚುನೂ[illegible] ಮಾಡೀತೆಂದು ಮೋಸನಿಗೆ ತಿಳಿದಿತ್ತ[illegible] ಅದಕ್ಕಾಗಿ,—"ಅದಕ್ಕೆ ಏನು [illegible] ಕೊಟ್ಟರೆ ಸಿಕ್ಕೀತು?" ಎಂದನು.

ಬೊಗ್ಗನು—ಇದು ಹಣ ಕೊಟ್ಟು ತೆಗೆದುಕೊಂಡುದಲ್ಲವಲ್ಲ! ಎನ್ನುತ್ತ, ಅಲ್ಲಿಂದೆದ್ದು ಹೊರಟನು. ಅವರು ನಾಲ್ವರೂ, ಅವನ ಹಿಂದೆಯೆ ಪಿಸು ಮಾತಾಡುತ್ತ (ಎಂದಿನಂತೆ) ತಡೆ ತಡೆದು ಹೊರಟು ಹಿಂಬಾಲಿಸಿದರು.

ಹತ್ತು ಮಾರು ದೂರದಲ್ಲೇ ಅವನ ಬಳಿಗೆ ಹೋಗಿ, – "ಈಗ ಕೊಡ ಬಾರದೇನಯ್ಯ?" ಎಂದರು. ಕತ್ತಲು, ಮಳೆ, ನಿರ್ಜನ ಸ್ಥಳ; ಆದರೆ, ಈ ನಾಲ್ವರನ್ನೂ ಅವನು ನುಂಗಬಲ್ಲನು ಎಂದೇ ಇವರೂ ಬಲ್ಲರು, ಅವನೂ ಬಲ್ಲನು. "ಇನ್ನೆಂಟು ದಿನಗಳಲ್ಲಿ ಹೇಳುವೆನು" ಎಂದನವನು. ಆದರೆ, ಇವರು ಅಮಲು ಹತ್ತಿ, ಮಸಲತ್ತು ಮಾಡಿ, 'ನೂರು ರೂಪಾಯಿ ಇನಾಮು' ಎಂದು ಮಾತಾಡಿದುದನ್ನು, ಪ್ರಸಾದ ಸ್ವೀಕರಿಸದ ಬೊಗ್ಗು ಕೇಳಿಯೆ ಇದ್ದನು. ಬೊಗ್ಗು ಸ್ವಾರ್ಥಿಯಲ್ಲ; ಉಪಕಾರಿ. "ಎಲ್ಲವನ್ನೂ ಬಲ್ಲೆನು; ನೀವು ಗೆಳೆಯರಾಗುವಿರಾದರೆ, ನಾನು ನಿಮ್ಮ ಸಲುವಾಗಿ ಈ ಇನಾಮು ಪಡೆವೆನು; ಸರಿಯಾಗಿ ಹಂಚಿಕೊಳ್ಳೋಣ" ಎಂದನು.

(ಶ್ರೀಮಂತ ಕೃಷ್ಣರಾಯರು ಇದೇ ಗೊಂಬೆ ತಲಾಸಿಮಾಡಿ ತಂದುಕೊಡುವವರಿಗೆ ನೂರು ರೂಪಾಯಿ ಇನಾಮು ಕೊಡುವುದಾಗಿ ತೋಟದಲ್ಲೆಲ್ಲಾ ಸಾರಿದ್ದರೆಂದೂ, ತೋಟದ ಆಳುಗಳಲ್ಲಿ ನಾಲ್ವರಾದ ಇವರೇ ಬೊಗ್ಗುವಿನ ಸಂಗಡವಿದ್ದವರೆಂದೂ ಇನ್ನು ಬೇರೆ ವಿವರಿಸಬೇಕಾಗಿಲ್ಲ.) ಆದರೆ, ಅವರು ಮಾತ್ರ ನಂಬಲಿಲ್ಲ, ಹಿಂಜರಿದರು; ಮಾತೆತ್ತಲಿಲ್ಲ. ಬೊಗ್ಗು ಮುಂದೆ ತೋಟದೊಳಗೆ ಕಾಲಿಟ್ಟು, ನಿಧಾನ ನಡೆದನು. ಅವನು ತನ್ನಲ್ಲೇ ಏನನ್ನೋ ಭಾವಿಸುತಿದ್ದನು. ಶ್ರೀಮಂತರ ಬಂಗಲೆಯ ಕಡೆಗೆ ಮುಂದರಿದನು. ಹಿಂದೆ, ಇದೇ ದಾರಿಯಾಗಿ ಅವನು ಹೋಗಿದ್ದಿರಬೇಕು. ತನ್ನ ಎಲವಸ್ತ್ರವನ್ನು ಸರಿಯಾಗಿ ತಲೆಗೆ ಸುತ್ತಿಕೊಂಡೇ ದೊಡ್ಡವರ ಮನೆಗೆ ಹೋಗುವ ರೂಢಿ; ಕೈಗಳು ಅಭ್ಯಾಸದಂತೆ ತಲೆಮುಟ್ಟಿದುವು; ಸೆನ ಪಾಯಿತು, ಎಲವಸ್ತ್ರವಿರಲಿಲ್ಲ; ಮರುಗಿ, ತಲೆಬಾಗಿ, ನಿಟ್ಟುಸಿರು ಬಿಟ್ಟು, ಸುಮ್ಮನಾದನು.

ಇಲ್ಲಿ, ತೋಟದ ಹೊರಗೆ ಇವರು ನಾಲ್ವರು ಗೇಟಿನಬಳಿ ಕಾದುನಿಂತರು. ಬೊಗ್ಗು ಇನಾಮು ಪಡೆದು ಬಂದರೆ, ಒಬ್ಬನು ಗೇಟಿನ ಬಳಿ ಬಿದ್ದಿದ್ದ ಕಬ್ಬಿಣದ ಸರಳಿನಿಂದ, ಸೆಟ್ಟನೆ ಅವನ ಮೇಲೆ ಹಾರಿ ಫಕ್ಕನೆ ಹೊಡೆದು, ಅವನು ದೊಪ್ಪನೆ ಬಿದ್ದಂತೆಯೇ ಅವನ ಹಣ ಸುಲಿದು, ಅವನ ಹೆಣವನ್ನು ಸಮುಗಾರಗುಂಡಿಯಲ್ಲೆ ಬಿಸಾಡುವುದೆಂದು ನಿಶ್ಚಯ ಮಾಡಿಕೊಂಡು, ಸದ್ದುಮಾಡದೆ, ಸಮಯ ಕಾದು, ಬಂಗಲೆಯ ಬಾಗಿಲನ್ನೇ ದಿಟ್ಟಿಸಿ, ಗೇಟಿನ ಕಂಬಗಳ ಮರೆಯಲ್ಲಿ ನಿಂತರು.

ಬಂಗಲೆಯ ಬಾಗಿಲು ತೆರೆಯಿತು. ಶ್ರೀಮಂತರ ಗುಮಾಸ್ತರು ಅತ್ತ ಬಂದರು. ಆಮಂತ್ರಿತರಾರೊ ನೆಂಟರೊ ಬಂದಿರಬಹುದಾಗಿ ಬಂದವನು, ಬೊಗ್ಗುವನ್ನು ಕಂಡು, ಹೌಹಾರಿದನು; ಆದರೆ ಬೊಗ್ಗು

ಆ ಗೊಂಬೆಯನ್ನು ಗುಮಾಸ್ತನಿಗೆ ತೋರಿಸುತ್ತಲೆ, ಬೊಗ್ಗುವನ್ನು ಅಲ್ಲೇ ಕೂಡ್ರಿಸಿ, ಒಳಕ್ಕೆ ನಡೆದು, ಶ್ರೀಮಂತರ ಮಗುವಿನೊಡನೆ ತಿರುಗಿ ಬೊಗ್ಗುವಿನ ಬಳಿಗೆ ಬಂದನು. ಅಳುಕಣ್ಣುಗಳಿಂದ ಮಗು ಈ ಗೊಂಬೆಯನ್ನು ಕೈಯಲ್ಲಿ ಹಿಡಿದುಕೊಂಡಿತು. ಎದೆಗೆ ಒತ್ತಿಕೊಂಡಿತು. ಕೂಡಲೆ, ಬೊಗ್ಗುವನ್ನು ನೋಡಿ, ಬೆದರಿ, ಅಳುವುದಕ್ಕೆಂದು ಬಾಯ್ತೆರೆಯಿತು; ಕೋಪಗೊಂಡಿತು; ಮೆಲ್ಲನೆ ನಸುನಕ್ಕಿತು, ಹೊರತು ಅಳಲಿಲ್ಲ. ಗಟ್ಟಿಯಾಗಿ ಏನೋ ಮಾತುಗಳನ್ನಾಡಿ, ಕೂಗಿ, ಕುಣಿದಂತೆ ಹಾರಿತು. ಗುಮಾಸ್ತನು ಮಗುವನ್ನು ಒಳಕ್ಕೆ ನಡೆಯಿಸಿಕೊಂಡು ಹೋದನು.

ಗುಮಾಸ್ತನು ಮರಳಿ ಬರುವಾಗ ಹತ್ತು ರೂಪಾಯಿಯವಾದ ಹತ್ತು ನೋಟುಗಳನ್ನು ಲೆಕ್ಕಮಾಡುತ್ತ ಬೊಗ್ಗುವಿನ ಕೈಯಲ್ಲಿಟ್ಟನು. ಬೊಗ್ಗು ಅವನ್ನು ಪಡೆದನು; ನಗಲಿಲ್ಲ; ನಮಸ್ಕರಿಸಲಿಲ್ಲ!

ನೋಟುಗಳು ಅವನ ಬರಿಗೈಯಲ್ಲಿ ಸಿಕ್ಕಿದ ಕೂಡಲೆ, ಹಿಂದಣ ಅಭ್ಯಾಸದಂತೆ ಓಡುವುದಕ್ಕಾಗಿ ಅವನ ಕಾಲುಗಳು ಸಿದ್ಧವಾದುವು. ಆದರೆ, ಇವನ್ನು ಕದ್ದುದಲ್ಲವಷ್ಟೆ; ಇದು ಇನಾಮು! ಕಾಸಿಲ್ಲ, ಹೊಟ್ಟೆಗಿಲ್ಲ, ಆಶ್ರಯವಿಲ್ಲ, ಮನೆದೂರ, ಗೆಳೆಯರಿಲ್ಲ, ಒಳ್ಳೆ ದೋತರವಿಲ್ಲ, ಎಲೆವಸ್ತ್ರವಿಲ್ಲ, ಕೈಯಲ್ಲೊಂದು ಕೋಲೂ ಇಲ್ಲ. ಇದನ್ನು ನೆನೆದು ಕಾಲುಗಳನ್ನು ತಡೆದನು. ಕೃಷ್ಣಾಷ್ಟಮಿಯ ಪ್ರಸಾದವೇನೂ ದೊರೆತರೆ, ಇದುವರೆಗಣ ಬೊಗ್ಗುವು ಮುಂದ 'ಭಾರ್ಗವ'ನಾಗಿ ಮರ್ಯಾದೆಯಿಂ ಬಾಳೆಂಬ ಆಶೀರ್ವಾದವೊ, ಅಭಯವೊ ದೇವರ ಕೃಪೆಯು ಕುರುಹಾಗುವುದೆಂದು ಭಾವಿಸಿದನು.

ಆಗಲೆ, ಗೇಟಿನ ಬಳಿ, ನಾಲ್ವರ ಒಬ್ಬರನೊಬ್ಬರು ಕೊಲೆಗೆ ಸಿದ್ಧರಾಗಲ ಸೂಚಿಸಿ, ಒಬ್ಬೊಬ್ಬನು ವಹಿಸಬೇಕಾಗಿ ರುವ ಕಾರ್ಯಕ್ರಮವನ್ನು ನಿಷ್ಕರ್ಷೆಮಾಡಿ ಬೊಗ್ಗುವಿನ ಕಡೆಗೆ ದೂರದಿಂದ ದೂ ದೃಷ್ಟಿಯಿಂದ ಸೂಕ್ಷ್ಮವಾಗಿ ಏಕಾ ಗ್ರತೆಯಿಂದ ನೋಡುತಿದ್ದರು,—ತೋಳ ಗಳು ಕುರಿಮರಿಯನ್ನು ಕಾದಂತೆ!

"ಅಯ್ಯಾ ದೊಡ್ಡ ಹಬ್ಬ. ದೇವರ ಪ್ರಸಾದ ಸಿಗದೆ?" ಎಂದಷ್ಟೆ ಮಾತು ಬೊಗ್ಗುವಿನ ಬಾಯಿಂದ ಹೊರಟಿತು ಗುಮಾಸ್ತನು ಉತ್ತರ ಕೊಡಲು ಕ್ಷಣ ತಡಮಾಡಲು, "ಪ್ರಸಾದ ಪಡೆದ ಬಳಿಕ ನಾನು ಹೋಗುವೆನು" ಎಂದನವನು.

"ಹೊರ ಚಾವಡಿಗೆ ಬರಬೇಕು" ಎಂದು ಗುಮಾಸ್ತನು ಹೇಳಿದನು. ಚಾವಡಿಗೆ ಹೋಗಿ, ಅಲ್ಲೇ ಬೊಗ್ಗು ಕೂತನು.

ಇದೆಲ್ಲವನ್ನೂ ಗೇಟಿನ ಬಳಿಯ ಮುಸಲತ್ತಿನವರು ಗೊತ್ತುಮಾಡಿ ಕೊಂಡರು.

ಬೊಗ್ಗು ಕೂತಲ್ಲಿಗೆ ಪಾನಕ ತಂದಿಡ ಲಾಯಿತು; ಬೊಗ್ಗು ಕುಡಿದನು ಮನಸ್ಸು ಶಾಂತವಾಯಿತು. ಮನೆಯ ಮ್ಮನೇ ಮಡಿಯುಟ್ಟು, ಹಬ್ಬದ ದಿನದ ಸಿಂಗಾರದಲ್ಲೆ, ಪ್ರಸಾದವನ್ನು ದೊಡ್ಡ

ದೊಂದು ಎಲೆಯ ಮೇಲಿಕ್ಕಿದಳು. ತನ್ನ ದೊಂದೇ ಮಗುವಿಗಾಗಿ ಶ್ರೀ ಕೃಷ್ಣನ ಪೂಜೆ; ತಾನೇ ಎಲ್ಲ ಪ್ರಸಾದ ಹಂಚುವವಳು.

ಬೊಗ್ಗು ಪ್ರಸಾದ ನೋಡಿದನು. ಮನಸ್ಸು ತುಂಬಾ ಅರಳಿ, ಕಣ್ಣೀರು ಸುರಿದನು. ಮಗುವಿಗೆ ಗೊಂಬೆ ತಂದು, ಕುಟುಂಬದ ನೆಮ್ಮದಿ, ಹಬ್ಬದ ಆನಂದ ಹೆಚ್ಚಿಸಿದವನನ್ನು ಅಮ್ಮನು ಕ್ಷಣಕಾಲ ನೋಡಿದಳು. ಅವಳಿಗೆ ಇವನೇನೋ ಇವನೇಕೋ ಹೀಗೆ ಎಂದರ್ಥವಾಗಲಿಲ್ಲ:

"ಅಮ್ಮಾ ನಿಮ್ಮೆಲ್ಲರನ್ನು ಶ್ರೀ ಕೃಷ್ಣನೆ ಕಾಪಾಡಲಿ!" ಎಂಬರ್ಥದಲ್ಲಿ ಏನೋ ಹೇಳಲು ಬಾಯ್ತೆರೆದು, ಎರಡು ಮಾತು ಹೊರಡುವುದರೊಳಗೆ, ಅಮ್ಮನ ಮುಖವನ್ನು ಬೊಗ್ಗು ನೋಡಿದನು. ತಟ್ಟನೆದ್ದನು. ಪ್ರಸಾದವಲ್ಲೇ ಉಳಿಯಿತು.

ಐದು ವರ್ಷಗಳ ಹಿಂದೆ, ತನ್ನ ಮಗುವಿಗೆ ಮತ್ತು ಅದರ ತಾಯಿಗೆ ಸಿಡುಬು ಹಿಡಿದು, ಇಬ್ಬರನ್ನೂ ಚಿಕಿತ್ಸೆ ಮಾಡಿಸಲು ಕಾಸಿರದೆ, ಇಲ್ಲೇ ಬೇಡ ಬಂದ ಅವನನ್ನು "ಅಯ್ಯೋ ಕೇಡಿ ಬಂದಾ!" ಎಂದು ಕೂಗಿ, ಬೊಗ್ಗುವನ್ನು ಹಳೆ ಅಪರಾಧಿಯೆಂದು ಐದು ವರ್ಷ ಜೈಲಿಗೆ ಅನ್ಯಾಯವಾಗಿ ಕಳುಹಿಸುವ ಮೊಕದ್ದಮೆಯಾಗುವ ಹಾಗೆಯೂ, ಹೆಂಡತಿಯೂ ಮಗುವೂ ಸಾಯುವ ಹಾಗೂ ಸತ್ತರೂ ಸರಕಾರವೇ ಉತ್ತರವಿಧಿಮಾಡಿಸುವಂತಾಗುವ ಹಾಗೂ ಈ ಅಮ್ಮನೇ ಕಾರಣಳಾಗಿದ್ದಳೆಂದು ಅವನ ತಲೆಯೊಳಗೆ ಹಿಂದಣ ಕಥೆ ಮಿಂಚಿನಂತೆ ಸುಳಿಯಿತು. ಆ ಮಿಂಚೇ ಅವನಲ್ಲಿ ದಿಗ್ಭ್ರಮೆಯನ್ನುಂಟುಮಾಡಿತು. ತಟಕ್ಕನೆದ್ದನು.

ಅಮ್ಮನಿಗೂ ತಲೆಯೊಳಗೆ ಏನೋ ಕನಸು ಸುಳಿದಂತಾಯಿತು. ಹೀಗೆ ನೆಟ್ಟನಿಂತ ಅವನೇ ಬೊಗ್ಗುವೆಂದೂ, ಅಂದಿನ ತನ್ನ ದಿಗಿಲಿಂದಾದ ಕೂಗೇ ಇವನ ಈ ಅವಸ್ಥೆಗೆ ಕಾರಣವಾಗಿತ್ತೆಂದೂ ಅವಳು ತಿಳಿದು,—"ಗುಮಾಸ್ತರೆ, ಇವನನ್ನು ನಮ್ಮ ಗಾಡಿಯ ಮೇಲೆ ಕೂಡ್ರಿಸಿ, ಇವನು ಎಲ್ಲಿಗೆ ಮುಟ್ಟಿಸಬೇಕೆನ್ನುವನೋ ಅಲ್ಲಿಗೇ ಗಾಡಿ ಹೊಡೆಯುವಂತೆ ಹೇಳಿರಿ. ಪಾಪ! ಈ ರಾತ್ರಿಯಲ್ಲಿ ಎತ್ತಹೋದಾನು? ಹೇಗೆ ಹೋದಾನು?" ಎಂದಪ್ಪಣೆಮಾಡಿದಳು.

ಅವಳು ಅತ್ತ ನಡೆದಳು. ಬೊಗ್ಗು, ಅಷ್ಟರಲ್ಲೇ ಬಂದ ಗಾಡಿಹತ್ತಿದನು. ಗೇಟಿನ ಹೊರಗೆ ಬರುತ್ತಾ, ಗಾಡಿಯಾಳು,-"ಎಲಾ, ನೀವೇಕೆ ಇಲ್ಲಿ ನಿಂತಿದ್ದೀರಿ?" ಎಂದು ಆ ಮೋಸ ಹೋದ ನಾಲ್ವರನ್ನು ಕೇಳಿದನು.

ಅವರಲ್ಲಿ ಆಗಲೆ ಮುಖಂಡನಾದವನು,—"ಅಷ್ಟಮಿಯಲ್ಲವೆ? ಚಂದ್ರೋದಯದ ವರೆಗೆ ಉಪವಾಸವಲ್ಲವೆ? ಅದಕ್ಕಾಗಿ, ಇಲ್ಲಿ ನಿಂತು ಆ ಇದಿರಿನ ಗುಡ್ಡದ ಹಿಂದಣಿಂದ ಮೂಡಿ ಬರುವ ಚಂದ್ರನಿಗಾಗಿ ಕಾಯುತ್ತಿದ್ದೇವೆ. ಅದೇ ಅದೇ ಅಲ್ಲವೆ,—ಕುದುರೆಮುಖ!" ಎಂದರು.

ಗಾಡಿ ಮುಂದರಿಯಿತು. ನಾಲ್ವರೂ ಬೊಗ್ಗು ತಮ್ಮ ಕೈಯಿಂದ ಜಾರಿದನೆಂದು ನಿರಾಶರಾಗಿ, ಕುದುರೆಮುಖ ನೋಡುತ್ತಾ ಕತ್ತೆಮುಖಮಾಡಿಕೊಂಡು ಒಬ್ಬರನ್ನೊಬ್ಬರು ನೋಡುತಿದ್ದರು.

೭. ಆತ್ಮಹತ್ಯೆಯ ಉಯಿಲು

ಕೆಸರಿನಲ್ಲಿ ನಟ್ಟ ಕಂಭದಂತೆ, ಅತ್ತಿತ್ತ ಅವನ ಮನಸ್ಸು ಅಲುಗಾಡಿ, "ಈಗಲೋ, ಈ ದೇಹವಿನ್ಯಾವಾಗಲೋ" ಎಂಬ ಪಲ್ಲವಿಯನ್ನು ಹಾಡಿ ಹಾಡಿ, ಚೆನ್ನಾಗಿ ಮಥಿಸಿ ನೋಡಿ, "ಇದು ಈಗ ಸಮಯ, ನಾರಾಯಣ" ಎಂದು ಅವನು ಮುಗಿಸಿ, ಸ್ಥಿರನಾದನು. ದಿವಾಳಿಗೆ ತಯ್ಯಾರಿಯೆ, ಪ್ರಣಯದಲ್ಲಿ ಪರಾಜಯವೆ, ಪರೀಕ್ಷೆಯಲ್ಲಿ ನಾಪಾಸೆ, ಬಡತಿಯಲ್ಲಿ ಲತ್ತೆಯೆ?–ಒಂದೂ ಅಲ್ಲ; ಹೊಟ್ಟೆನೋವು, ಅಷ್ಟೆ ಎಲ್ಲಕ್ಕೂ ಮಿಗಿಲಾದ ಕಾರಣ. ನಾಲಿಗೆಯ ಮಿತಿಮೀರಿದ ಸೊಕ್ಕಿನಿಂದ, ಹೊಟ್ಟೆಯೊಳಗೆ ಹೆಣಹದ್ದುಗಳ ಹಿಂಡೇ ಹೊಕ್ಕು ಕುಕ್ಕುತಿರುವಂತೆ ನೋವು. ಯಾವ ಔಷಧವು ದೊರಕಿತ್ತೊ ಅದನ್ನು ಪ್ರಯೋಗಿಸಿದ್ದಾಯಿತು. ರಾಮಬಾಣಗಳೆಲ್ಲ ಆಕಾಶಬಾಣಗಳಾದುವು; ಖಾತರಿಗೆಂದು ಕುಡಿದುದು ಕತ್ತರಿಯಾಯಿತು; ನುಂಗಿದ ಮಾತ್ರೆಗಳ ಹಿಮಾಲಯವೇ ಆಯಿತು; ಕುಡಿದ ಕಷಾಯಗಳನ್ನು ಒಂದು ಕಡೆ ಕೂಡಿಸಿಟ್ಟರೆ ತಿಮಿಂಗಿಲಗಳನ್ನು ಸಾಕಬಹುದಾಗಿದ್ದಿತು. ಆದರೆ, ಅವನ ಹೊಟ್ಟೆಯೊಳಗಣ ದೆವ್ವಕ್ಕೆ ಇದೊಂದೂ ನಾಟಲಿಲ್ಲ. ಯಮಪಾಶಕ್ಕೂ ಹೆದರದಂತಾಯಿತು. ಐವತ್ತೈದು ಕಳೆದ ಬಳಿಕ, ಅಥವಾ ನಿರುದ್ಯೋಗಿಗಳಾದರೆ ಆತ್ಮಘಾತ ಮಾಡಿಕೊಳ್ಳುವ ದುರಾಶೆ ಉಂಟಾಗುವುದೆಂದು ಬಲ್ಲವರ ಮತವಂತೆ. ಅವನ ವಯಸ್ಸು ಈಗಲೆ ೫೬; ಉದ್ಯೋಗವೆಂಬುದು ಇದ್ದಿಲ್ಲ; ಹೀಗೆ ಇವೆರಡೂ ಕಾರಣಗಳು ಅವನನ್ನು ಒಟ್ಟಾಗಿ ಬಾಧಿಸಿದ್ದುವು; ಇಪ್ಪತ್ತು ವರ್ಷಗಳ ಹಿಂದೆಯೇ ಯಾರೋ ಬಿಟ್ಟ ಉಂಬಳಿಯಿದ್ದಿತು; ದುಡಿಯುವ ಬೇರೆ ತೊಂದರೆ ಇರಲಿಲ್ಲ. ಸಮಯ ಹೋಗುವ ಹಾಗೆ ವಾಚನ ವ್ಯವಸಾಯವಿದ್ದಿತು; ಎಂದರೆ, ಪತ್ರಿಕೆಗಳಲ್ಲಿ ಹೊಟ್ಟೆನೋವಿದ್ದೆಂದು ಪ್ರಕಟವಾಗುವ ಔಷಧಿಗಳನ್ನು ಓದುವುದು ಅಷ್ಟೆ. ಮನೆಯಲ್ಲಿ ತಾನೊಬ್ಬನೆ; ಒಳಗೂ ಹೊರಗೂ ಕೆಲಸಕ್ಕೊಂದು ಜನ,–ಅವನ ತಂಗಿಯಲ್ಲಿ, ಅವಳ ಹೆಸರೇ ತಂಗಿ. ಇವಳು ಸಕಾಲಕ್ಕೆ ಬಂದು, ಮನೆಕೆಲಸ ಮಾಡಿಕೊಟ್ಟು, ರಾಯರ ಊಟವಾದ ಬಳಿಕ, ನಾಳಿನ ಕೆಲಸಕ್ಕೆ ಸಿದ್ಧಮಾಡಿಟ್ಟು ಸ್ವಗೃಹಾಭಿಮುಖವಾಗಿ ಹೋಗುವಳು. ಹಾಗೆಂದು ಎತ್ತ ಹೋಗುತಿದ್ದಳೋ, ರಾಯರಿಗೆ ತಿಳಿದುದಿಲ್ಲ.

ಅಂದೇ "ಇದು ಈಗ ಸಮಯ" ಎನ್ನಲು ಕಾರಣವೆಂದರೆ,— ನಿನ್ನೆಯ ತನಕ ಈ ಸಮಯ ಬಂದಿರಲಿಲ್ಲ ಫಕ್ಕನೆ ಹೊಳೆಯಿತು, ಮಿಂಚಿನ ಹಾಗೆ; ಹೊಟ್ಟೆಯೊಳಗೆ ಕಾಡುಬೆಕ್ಕು ನುಗ್ಗಿ, ಹೆಗ್ಗಣಗಳನ್ನು ಕಚ್ಚುತಿದ್ದಂತೆ, ಕರುಳೆಲ್ಲ ನೋವು! ಇನ್ನಿದನ್ನು ಮುಗಿಸುವುದೆಂದೇ ಮೂರು ಸಲವೂ ನಿರ್ಧಾರವಾಯಿತು.

ಔಷಧಿಗಳನ್ನು ಅಷ್ಟು ವರ್ಷವೂ ಕ್ರಮದಂತೆ, ವೇಳೆಗೆ ಸರಿಯಾಗಿ ಪಥ್ಯಕ್ಕೆ ಸರಿಯಾಗಿ, ಕುಡಿಯುತಿದ್ದ ರೋಗಿಯಾದ ಬಳಿಕ, ಮರಣವನ್ನು ಉಂಟು ಮಾಡಿಕೊಳ್ಳುವುದರಲ್ಲೂ ಒಂದು ಕ್ರಮ ಮಾಡಿಕೊಳ್ಳದಿರುವನೆ? ಯಮನನ್ನು ಸ್ವಾಗತೀಕರಿಸುವುದರಲ್ಲೂ ಒಂದು ನಿಯಮವಿದೆ. ಹೀಗಾಗಿರುವುದರಿಂದಲೇ "ಇದು ಈಗ ಸಮಯ"ವೆನ್ನುವಾಗ, ಸುಖಾಸನದಲ್ಲಿದ್ದು ತನ್ನ ಮೇಜನ್ನು ನೋಡುತಿದ್ದನು.

ಆರು ಲಕ್ಕೋಟೆಗಳು, ಆರು ಪತ್ರಗಳು, ಆರು (ಸ್ಟಾಂಪು) ಚೀಟುಗಳು ಆರು ನೋಟುಗಳ ಕಟ್ಟುಗಳು; ಹೀಗೆ ಕ್ರಮವಾಗಿ ಸಾಲಾಗಿ ಮೇಜಿನ ಮೇಲೆ ಇದ್ದುವು. ತನ್ನ ನಂತರ, ತನಗೆ ಬಂದಿದ್ದ ಉಂಬಳಿಯನ್ನು ಉಂಬುವವರು ಯಾರು ಎಂದು ಈಗ ನಿಷ್ಕರ್ಷೆಯಾಗಬೇಕು. 35 ಕೋಟಿ ಭಾರತೀಯರಲ್ಲಿ ಆರು ಮಂದಿ ತನಗೆ ಉತ್ತರಾಧಿಕಾರಿಗಳು ಸಿಗಲಾರರೆ? ಯಾವುದೊಂದು ವಾರಪತ್ರಿಕೆಯನ್ನೆತ್ತಿಕೊಂಡು ಅದರಲ್ಲಿ ಸಿಕ್ಕಿದ ನಾಲ್ಕು ವಿಳಾಸಗಳಿಗೆ ಈ ಆರು ಪಾಲುಗಳನ್ನು ಕಳುಹಿಸಿದರೇನು? ನಂದಿರಾಯನ ಬದುಕು ನರಿನಾಯಿಗಳಿಗಾದರೆ ಇವನ ಬದುಕು ಕೆಲವು ಮನುಷ್ಯರಿಗೇ ಸಿಗುವುದಲ್ಲವೆ? ಆದರೆ, ಯಾರಿಗೆ ಸಿಗುವುದೋ ಆತನ ಉಲ್ಲಾಸವನ್ನು ಭಾವಿಸಿ ತಿಳಿವುದಕ್ಕಾದರೂ ಆತನು ಅಪರಿಚಿತನಾಗುವನಲ್ಲ! ತನ್ನೊಡನೆ ಹಿಂದೆ ಹೋಟ್ಲಲ್ಲಿ ಸಹಪಂಕ್ತಿ ಭೋಜನಮಾಡಿದ ಆರು ಮಂದಿಯೇ ಈ ಹಣಪಡೆಯಲು ಪಾತ್ರರೆಂದು ನಿಶ್ಚಯವಾಯಿತು. ಇವರಿಗೆ ಅದನ್ನು ಕೊಡಲು ಉಯಿಲು ಮಾಡಿದರೇನು? ಸತ್ತ ಎಷ್ಟೋ ದಿನಗಳ ತರುವಾಯ, ಇದರಲ್ಲಿ ಅರೆವಾಸಿಯಾದರೂ ಕೋರ್ಟು ಮತ್ತು ವಕೀಲರ ಮುಖಾಂತರವಾಗಿ ಅವರಿಗೆ ಸಿಗುವುದೋ ಇಲ್ಲವೊ ಎಂದು ಸಂದೇಹವಾಯಿತು. ಉಯಿಲು ಬರೆದಿಟ್ಟು ಸತ್ತನೆಂದರೆ, ಆ ಕಾಲದಲ್ಲಿ ತಾತ್ಕಾಲಿಕ ಹುಚ್ಚು ಹಿಡಿದು ಹಾಗೆ ಮಾಡಿದ್ದನೆನ್ನರೆ? ಸಾಯಲು ಸಿದ್ಧನಾದಾಗ ಉಯಿಲು ಬರೆವುದೆ? ಅದೂ ಅಲ್ಲದೆ, ಯಾವನೊಬ್ಬ ದೂರದ ಕುಟುಂಬದವನು ತಲೆಯೆತ್ತಿ ಬಂದರೆ, ಹಣಕ್ಕಾಗಿ ವ್ಯವಹಾರ ನಡೆದು, ಅಲ್ಲಿಗೆ ತನ್ನ ಉದ್ದೇಶವೇ ಕೆಡುವುದು ಎಂದು,—ಹಿಂದಣ ಹೋಟ್ಲ ಬಂಧುಗಳಿಗೆ ತಾನೇ ವಿಳಾಸ ಬರೆದು,—ಪತ್ರಗಳನ್ನೂ ನೋಟುಕಟ್ಟನ್ನೂ ಲಕ್ಕೋಟೆಗಳಲ್ಲಿ ಮಡಗಿ, ಮುಚ್ಚಿ, ಸ್ಟಾಂಪುಹಚ್ಚಿ ಇನ್ನು ರಿಜಿಸ್ಟರು ಮಾಡಿದರಾಯಿತೆಂದು ನಿರ್ಧರಿಸಿ,—ಮೇಜಿನೊಳಗಿಂದ ಒಂದು ಸೀಸೆಯನ್ನು ಎತ್ತಿಕೊಂಡನು.

ಕೊರಳು ಕಡಿದುಕೊಳ್ಳಬಹುದಾಗಿದ್ದಿತು; ಆದರೆ ನೋವು ಬಹಳ, ಹೊಟ್ಟೆ ನೋವು ಬೇಡವೆಂದು ಈ ನೋವನ್ನು ವಹಿಸಿಕೊಳ್ಳುವುದೆ? ಗುಂಡಿಟ್ಟುಕೊಳ್ಳಬಹುದಾಗಿದ್ದಿತು; ದುಸ್ತು ಕೆಟ್ಟು ನೆಲದ ಮೇಲೆ ಇಲಿಯಂತೆಬಿದ್ದುಕೊಳ್ಳಬೇಕಲ್ಲ? ನೇಣು ಹಾಕಿಕೊಳ್ಳಬಹುದಾಗಿದ್ದಿತು; ಪೊಲೀಸರು ಪುನಃ ಹೊಟ್ಟೆ ಕತ್ತರಿಸಿ ಪರೀಕ್ಷಿಸುವರು,— ಹೊಟ್ಟೆನೋವಿಗಿಂತಲೂ ಕಠಿನವಲ್ಲವೆ? ಮುಳುಗಿ ಸತ್ತ

ರೇನು? ಅದೂ ಹಾಗೆಯೆ. ಮಾಳಿಗೆ ಹತ್ತಿ ಕಿಟಕಿಯಿಂದ ಹಾರಿದರೇನು? ರೂಪುಗೆಡುವುದು. ಅದಕ್ಕಾಗಿಯೆ ಈ ಸೀಸೆಯ ಉಪಾಯ. ಕುಡಿದನು— ಮಡಿದನು, ಅಷ್ಟೆ ಸುಲಭ, ಅಷ್ಟೆ ಟೀಕೆ.

ಹಾಗೆನ್ನುವುದರೊಳಗೆ, ಬಾಗಿಲು ತೆರೆದು ತಂಗಿ ಒಳಕ್ಕೆ ಕಾಲಿಟ್ಟಳು. ಅವಳು ಪೇಟೆಗೆ ಹೋಗುವಳು. ಕೂಡಲೆ ಸೀಸೆ ಮುಸಿದವತಿಯ ಹಿಂದೆ ಕೂತಿತು. ತಂಗಿ, ಇದಿರಿನ ಕಾಲುಮಣೆಯ ಮೇಲೆ ಕೂತಳು.

ತಂಗಿ, 35ರ ಅಂದಾಜಿನ ಗಟ್ಟಿ ಮುಟ್ಟಾದ ಅಬಲೆ; ಸುಮಂಗಲೆ. ಎಂದೋ ಮದುವೆಯಾಗಿದ್ದಿತು; ಗಂಡನು ಆಗಲೆ ಗಟ್ಟಕ್ಕೆ ಆಳುಕಟ್ಟಿ ಕೊಂಡು ಕಾಫಿತೋಟಕ್ಕೆ ಹೋಗಿದ್ದನು. ಇಂದಿಗೂ ಬಂದಿಲ್ಲ, ಸತ್ತಿರುವ ಸುದ್ದಿ ಯಿಲ್ಲ. ಇವಳು ಪ್ರಕಟವಾಗಿ ಎರಡನೆ ಸಲ ಪುನಃ ಗಂಡನೊಬ್ಬನನ್ನು ಕಟ್ಟಿ ಕೊಂಡೂ ಇರಲಿಲ್ಲ. ಮದುವೆಯಾಗು ತ್ತಲೆ, ಗಟ್ಟಕ್ಕೆ ಹೋಗುವವರನ್ನು ಕಟ್ಟಿ ಕೊಂಡು ಪುರುಷಾರ್ಥವಿದೆಯೆ? ಹಾಗೆ,— ಹಾಗೆಯೆ ಇದ್ದಳು. ಈಗಲೆ ಪೇಟೆಗೆ, ಸ್ವಗೃಹಾಭಿಮುಖವಾಗಿ ಹೋಗುವಳು. ರಾಯರಿಗೇನಾದರೂ ಬೇಕೆ? ಊಳಿಗ ವುಂಟೆ? ಬೆನ್ನಿಗೆ ವಾತದ ಸೆಳವು ಹಿಡಿ ದಂತಾದುದರಿಂದ ತಾನೆ ಇಂದು, ಎಂದಿ ಗಿಂತ ಮೊದಲು, ಹೋಗುವಳು, ಅಷ್ಟೆ.

ರಾಯರೂ ಜೀವನದಲ್ಲಿ ವಿವಾಹ ವಾಗಿಲ್ಲ. ಅವಕಾಶವಿಲ್ಲ. ತನ್ನಲ್ಲಿಗೆ ನಾಲ್ಕು ಜನರನ್ನು ಆಗಾಗ ಕರೆದು, ಅವರೊಡನೆ ಉಂಡು ಕುಡಿದು ಸುಖಿ ವಾಗಿರತಕ್ಕವರು, ವಿವಾಹ ಬೇಕೆನ್ನು ವರೆ? ಉಂಬಳಿ ಸಿಗುವ ಮೊದಲು ಬಡ ತನ, ಯೋಗ್ಯ ಹುಡುಗಿ ಕೊಡುವವ ರಿಲ್ಲ; ಉಂಬಳಿ ಸಿಕ್ಕಿದ ಬಳಿಕ ವಯಸ್ಸು, ಯೋಗ್ಯ ಹುಡುಗಿ ಸಿಗುವಂತಿಲ್ಲ. ಅಂತೂ ಬ್ರಹ್ಮಚಾರಿಗಳಾಗಿಯೇ ಇದ್ದರು. ಕೆಲಸಕ್ಕಿಲ್ಲ ತಂಗಿ, ತಿಂಗಳಿಗೆ 20 ರೂಪಾಯಿ ಸಂಬಳವಿದೆ; ಲೋಕರೂಢಿ ಬಲ್ಲವಳು, (20 ರೂಪಾಯಿ ಸಿಕ್ಕಿದರೆ) ಒಂಟಿಯಾಗಿರತಕ್ಕವಳು, ಭೂಪ್ರದಕ್ಷಿಣೆ ಮಾಡಲೂ ಹಿಂತೆಗೆವ ಹೆಂಗಸಲ್ಲ. ಈಗ ರಾಯರನ್ನು ನೋಡಿ ನಸುನಕ್ಕಳು: ಏಕೆಂದು ಯಾರು ಬಲ್ಲರು? ಅವಳಿಗೂ ತಿಳಿದಿರಲಿಲ್ಲ. ನಗುವು ರಾಯರೊಳಗೆ ಹೊಕ್ಕು ಅವರ ಕರುಳನ್ನು ಚುಚ್ಚಿತು; ಎಂದಿನಂತೆ ಹೊಟ್ಟೆ ನೋಯಲಿಲ್ಲ, ಜಿಸಿ ಜಿಸಿಯಾಗಿ ಆದೇಕೋ ಜುಮ್ಮೆಂದಿತು.

"ತಂಗೀ—ನನಗೇನೂ ಬೇಕಾಗಿಲ್ಲ; ಆದರೆ, ಈ ಆರುಪತ್ರಗಳನ್ನು ರಿಜಿಸ್ಟರು ಮಾಡಿ, ಮನೆಗೆ ಹೋಗುವಿಯಾದರೆ ಉಪಕಾರವಾಗುತಿದ್ದಿತು" ಎಂದರು ರಾಯರು.

ರಾಯರಿಗೆ, ಇದುವರೆಗೆ, ತಂಗಿ ಉಪಕಾರಮಾಡಿರಲಿಲ್ಲ; ಚಾಕರಿ ಮಾಡಿ ದ್ದಳು, ಅಷ್ಟೆ. ಮತ್ತೆ ಈ ಉಪಕಾರ ಮಾಡುವುದಕ್ಕೆ ಹಿಂಜರಿಯುವಳೆ? ಒಪ್ಪಿ ಕೊಂಡಳು.

"ತಂಗೀ ನಮ್ಮಲ್ಲಿ ನೀನು ಕೆಲಸ ಕ್ಕಿದ್ದು ಆರು ವರ್ಷಗಳಾದುವು. ನಾನು ನಿನಗೆಂದು ಇನಾಮು ಕೊಟ್ಟಿದ್ದೇನು? ಛೆ, ಮೂರ್ಖತನ."

"ಒಳ್ಳೆ ಸಂಬಳ, ಛಂದನೆ ತಾರೀಕಿಗೇ ಕೊಟ್ಟಿದ್ದಿರಿ. ಅದು ಇನಾಮಿಗಿಂತಲೂ ಹೆಚ್ಚು".

"ಆರು ವರ್ಷ ಕಾಲ ನನ್ನಲ್ಲಿ, ನಿನ್ನ ಹಿಂದೆ, ಕೆಲಸಕ್ಕಿದ್ದವರಾರು? ನಿನ್ನನ್ನು ಬರೇ ಕೂಲಿಯವಳೆಂದು ನಾನು ಭಾವಿಸಿದ್ದೇನೆಯೆ? ಇಕ್ಕೊ, ಇಲ್ಲಿವೆ ಒಂದು ಕಟ್ಟು ನೋಟುಗಳು. ಎತ್ತಿಕೋ." ಎಂದು ನೋಟುಗಳ ಕಟ್ಟನ್ನು ತೋರಿಸಿದರು. ಅವಳು ಮಾತದ ಸೆಳವೆಂದು ಏಳಲಿಲ್ಲ; ವಿಚಿತ್ರವೂ ಎನಿಸಿತ್ತು. ತಾನೆ ಕಟ್ಟನ್ನೆತ್ತಿ ಕೊಡ ಹೋದನು. ಹೊಟ್ಟೆನೋವಿನ ಬಾಧೆ, ಆತ್ಮಘಾತಮಾಡಿಕೊಳ್ಳುವ ಸಿದ್ಧಾರ, ಎಂದೂ ಅವಳನ್ನು ನೋಕದಿದ್ದ ಲಜ್ಜೆ, ಈಗಿದೇ ಕೊನೆಯ ಮಾತುಗಳೆಂಬ ವ್ಯಥೆ,—ಹೀಗೆ ಕೈಗೆ ನಡುಕವುಂಟಾಗಿ ನೋಟುಗಳ ಕಟ್ಟು ಅವಳ ಕಾಲ ಬಳಿ ಬಿದ್ದುದರಿಂದ, ಅದನ್ನೆತ್ತಲು ಬಾಗುತ್ತ, ಎತ್ತಿಕೊಂಡು, ಅವಳ ಮಡಿಲಲ್ಲಿ ತಟ್ಟನೆ ಕೆಡವಿದನು. ಹಾಗೆ ಕೆಡವಿ ಹಿಂದಕ್ಕೆಳೆದ ಕೈಯು ಅವಳ ಕೋಮಲವಾದ ಕೆನ್ನೆಗಳನ್ನು, ತಿಳಿಯದೆ, ಸವರಿಹೋಯಿತು!

"ಹೂಂ! ನಾನಿದನ್ನು ತಿಳಿದೇ ಇದ್ದೆ ಎಂದರೆ!" ಎನ್ನುತ್ತ, ಆರು ವರ್ಷ ಮನೆಗೆಲಸಮಾಡಿದ ಕಸರತ್ತಿನ ತನ್ನ ಕೈಯಿಂದ ನೋಟುಗಳ ಕಟ್ಟನ್ನೆತ್ತಿಕೊಂಡುದೇ ಮಾತ್ರವಲ್ಲದೆ, ಬಲವಾಗಿ ಅವನ ಕೆನ್ನೆಗೊಂದು ಒಡೆದೇ ಬಿಟ್ಟಳು, ಈ ಅಬಲೆ.

"ಇಷ್ಟು ಜೋರೇ? ನನ್ನ ಮಾನ ಕೆಡಿಸುವ ಆಲೋಚನೆಯೆ? ಜಾಗ್ರತೆಯಿರಲಿ. ನಾನು ಬಡಹೆಂಗಸು" ಎಂದೂ ಕೂಡಿಸಿದಳು.

"ಹಾಗೆ ಅನ್ಯಾಯ ಹೇಳದಿರು. ನಿನ್ನ ಮನಸ್ಸು ನೋಯಿಸುವ ಇರಾದೆಯೆ ನನ್ನಲ್ಲಿರಲಿಲ್ಲ" ಎಂದು ರಾಯರೆಂದರು.

"ಗೊತ್ತಿದೆ. ಒಬ್ಬಂಟಿಗಳಾಗಿದ್ದರೆ ಏನೂ ಮಾಡೀರಿ ನೀವು ಗಂಡಸರು—ನಾನು ಬಡ ಕೂಲೀ ಹೆಂಗಸೆಂದು...."

"ಛಿ. ಸಾಕು. ಹೋಗವ್ವ ಹೋಗು".

"ತಿಳಿದಿದೆ, ನಿಮ್ಮ "ಅವ್ವ"—"ತಂಗಿ" ಎಲ್ಲಾ ಬಲ್ಲೆ" ಎನ್ನುತ್ತ, ತನ್ನದೆಲ್ಲವನ್ನೂ ಎತ್ತಿಕೊಂಡು, ಸಟಕ್ಕನೆ ಎದ್ದು, ಸರಸರನೆ ಬಾಗಿಲ್ತೆರೆದು ಸರಿದೇ ಹೋದಳು. ಹೋಗುವಾಗಲೂ,—"ಇದು ಮನೆಯೆ? ಇವರು ಗೃಹಸ್ಥರೆ? ಇಲ್ಲಿ ಇನ್ನಾವಳೂ ಕೆಲಸಕ್ಕೆ ಬರಲುಂಟೆ?" ಎನ್ನುತ್ತ, "ಬಡ ಕೂಲೀ ಹೆಂಗಸು" ನಡೆದಳು.

ರಾಯರು ಬಿಸಿಯಾದರು. ಹೊಟ್ಟೆನೋವಿನ ಮೇಲೆ ಮಿಂಚಿನ ಬರೆ ಎಳೆದಂತಾಯಿತು. ಇನಾಮು ಕೊಡ ಹೋಗಿ, ಇನಾಮು ದೊರೆಯಿತಲ್ಲ ಎಂದೇ ಅವರ ದುಃಖ, ರೋಷ. ಇಂತಹ ಕೃತಘ್ನರು ತುಂಬಿರುವ ಲೋಕದಲ್ಲಿ...

ಆಲೋಚನೆ ಅಲ್ಲೇ ನಿಂತಿತು. "ಯಾರಿಗೂ ಹಣ ಬಿಟ್ಟು ಸಾಯುವುದೊಳ್ಳೆಯದಲ್ಲ" ಎಂದು ಹಿಂದಣ ವಾಕ್ಯ ಮುಗಿಸುತಿದ್ದರು. ಆದರೆ, ಮೇಜಿನ

ಮೇಲೆ ನೋಡಿದರು: ಲಕ್ಕೋಟೆಗಳಿಲ್ಲ. ಇನ್ನು ಆತ್ಮಘಾತವನ್ನು ಖಂಡಿತವಾಗಿಯೂ ಮಾಡಿಕೊಳ್ಳುವುದಿಲ್ಲ ಎಂಬುದು ನಿರ್ಧಾರವಾದರೂ, ಬದುಕಿದರೆ ಗತಿಯೇನ? ಒಹೋ, ಲಕ್ಕೋಟೆಗಳನ್ನು ಟಪ್ಪಾಲಾಫೀಸಿಗೆ ಒಯ್ಯುವಳಲ್ಲ! ಅಷ್ಟರಲ್ಲೇ ತಡೆಯಬೇಕೆಂದ, ದುಸ್ತು ಹಾಕಿಕೊಂಡು, ಬಾಗಿಲಿಕ್ಕಿ, ಹೊರಬಿದ್ದರು.

ರಸ್ತೆಯನ್ನು ಉದ್ದಕ್ಕೆ ನೋಡಿದರು. ದೂರದಲ್ಲಿ ತಂಗಿ ಸೆಟ್ಟಗೆ ಸಾಗುತ್ತಿರುವಳು. "ಎಲೇ–ತಂಗಿ!" ಎಂದು ಕೂಗಿದರು.

ಇದನ್ನು ಕೇಳಿದ ತಂಗಿ ಅಲ್ಲೇ ಕ್ಷಣಮಾತ್ರ ತಂಗಿದಳು.

"ಬಂದಾ, ಹರಾಮಿ" ಎಂದಳು. ಮತ್ತೂ ಬಿರುಸಾಗಿ ನಡೆದಳು.

"ತಂಗೀ–ತಡೀ" ಎಂದು ರಾಯರು ಗರ್ಜಿಸಿದರು.

"ಹಣಕ್ಕಾಗಿ ಬರುತ್ತಾನೆ: ಆಸೆ ತೀರಲಿಲ್ಲ" ಎನ್ನುತ್ತ ಅವಳು ಬೆನ್ನ ಸೆಳವು ಮರೆತು, ಮುಂದರಿದಳು.

ರಾಯರು, ಇದೇ ಆರು ವರ್ಷಗಳ ನಂತರ, ಸ್ವಲ್ಪ ಓಡಲು ಅಭ್ಯಾಸ ಮಾಡಬೇಕಾಯಿತು. ಹತ್ತು ಮಾರು ಓಡಿ ನಿಲ್ಲುವರು,— ಮೊಲದ ಹಾಗೆ; ಬೆನ್ನ ಸೆಳವಿನ ತಂಗಿ, ಆಮೆಯಂತೆ ನಿಧಾನ ಮುಂದೆಯೇ ಹೋಗುವಳು.

ಆದರೆ, ಈ ರಸ್ತೆ ಪೇಟೆಯ ಮಧ್ಯದಲ್ಲಿ ಅಲ್ಲವಷ್ಟೆ. ಉಂಬಳಿಯಿಂದ ನಿರುದ್ಯೋಗಿಗಳಾಗಿ ಜೀವಿಸುವವರಿಗೆ ಜನನಿವಾಸವೂ ಜನಸಂಚಾರವೂ ಕಡಿ[...] ಯಿರುವಲ್ಲಿ ತಾನೆ ಬೀಡು. ಹೀಗಾಗಿ, [...] ಓಡುತ್ತ ತಡೆಯುತ್ತ, ಕೂಗುತ್ತ ಸಿಟ್[...] ಸಿರುಜಿಡುತ್ತ, ಹೆದ್ದಾರಿಯಲ್ಲಿ ಪೇಚಾ[...] ತಿದ್ದ ರಾಯರನ್ನು ಎಷ್ಟು ಮಂದಿ ನೋ[...] "ಚಮತ್ಕಾರ"ವೆನ್ನಲು ಅಲ್ಲಿರುವ ರು[...] ಹಾಗಿದ್ದರೂ, ಹೆಂಗಸು ಒಂದು ಕ[...] ನಿಂತು, "ನೋಡಿರಪ್ಪಾ, ಬಡ ಕೂಲ[...] ಹೆಂಗಸು. ಬೆನ್ನಟ್ಟುತ್ತಾರೆ. ತಡೀರಪ್ಪ[...] ಎಂದು ಕಣ್ಬಿಟ್ಟು ಅಭಿನಯಿಸುವಾಗ[...] ಸುತ್ತುಗಟ್ಟುವುದಕ್ಕೆ ಹತ್ತಿಪ್ಪತ್ತು ಮಂ[...] ಪರದುಃಖದುಃಖಿತರೂ, ಪರಾರ್ಥಕ್ಕಾ[...] ತ್ಯಾಗಶೀಲರೂ, ಅಬಲಾಸಂಕಟನಿವಾ[...] ಕರೂ ಮಾತ್ರವಲ್ಲದೆ, ನಿರುದ್ಯೋಗಿಗಳ[...] ಗೃಹಾಭಿಮುಖರಾದ ಇತರ ಕೂಲ[...] ಹೆಂಗಸರೂ ಸೇರದೆ ಇರಬಹುದೇ?

"ದಮ್ಮಯ್ಯ—ಕಾಪಾಡಿರಿ" [...] ದೊರಲ್ದಳಬಲೆ!

ಅಷ್ಟರಲ್ಲೆ ಪೊಲವೂ ಅತ್ತ [...] ರಿತು. ಮಾತೆತ್ತಲಾರದೆ, ಬುಸುಗ[...] ಟ್ಟುತ್ತ, ಓಡಾಟಕ್ಕೆ ಸೋತ ರಾಯರು, [...] ಅವಳ ಕೈಯಲ್ಲಿದ್ದ ಲಕ್ಕೋಟೆಗಳಿ[...] ಬೆರಳು ತೋರಿಸಿ, ತಡೆದರು.

ಆರುವರ್ಷ ಓಡಿದುದಿಲ್ಲ; ಕೂತ[...] ತಿಂದು, ಕೋಣೆಯಲ್ಲಿ ತಿರುಗಿದ ಹೊ[...] ನೋವಿನ ಚಿರಂಜೀವಿ ವಯಸ್ಕನಲ್ಲ[...] ಮತ್ತೇನು ಮಾಡುವನು?

ಸುತ್ತಲಿದ್ದ ಕೆಲವರು– "ಬಡಿಯಿ[...] ಮುಟ್ಠಾಳನನ್ನು!" ಎಂದರು. "ಠೊಣ[...] ಸಿಗೆ ಗಚ್ಚೀಹಾಕಿರಿ" — "ಮುರಿಯಿ[...] ಅವನ ಸೊಕ್ಕನ್ನು—ಕಾಲನ್ನು" ಎ[...]

ತ್ಯಾದಿ ಉತ್ಸಾಹಕಾರಕ ಧ್ವನಿಗಳೆದ್ದುವು. ನಾಲ್ಕಾರು ಬಗೆಯ ಸಿಳ್ಳುಗಳೂ ಕೇಳಿಸಿದುವು. ಈ ಧ್ವನಿಗಳಾದ ಬಳಿಕ, ಪ್ರತಿಧ್ವನಿಯಾಯಿತು: "ಏನಯ್ಯ, ಗಲಾಟೆ ಮಾಡುತ್ತೀರಿ?" ಇದು ಬೀಟಿನ ಪೋಲೀಸನ ಅಧಿಕಾರವಾಣಿ.

ರಾಯರ ಬಾಯಿಯ ಬೀಗವು ಈಗ ಮುರಿಯಿತು. "ನ ..ನ್ನ....ಲಕ್ಕೋಟೆ... ಗಳು.....ನನಗೇ.......ಬೇಕು" ಎಂದು ನಾಲ್ಕು ಊರ್ಧ್ವಶ್ವಾಸಬಿಟ್ಟರು.

"ಇವಳು ಕದ್ದುಕೊಂಡಳೇ ಅವನ್ನು?"

"ಅವರೇ ನನ್ನ ಕೈಗೆ ಕೊಟ್ಟವರು" ಎಂದಳು ತಂಗಿ. "ರಿಜಿಸ್ಟ್ರಿ ಮಾಡಿದರೆ ಉಪಕಾರ ಎಂದವರು ಅವರಲ್ಲವೆ?"

"ಹೌದು ..ಆದರೆ...ನನಗೇ..ಅವು.. ಬೇಕು" ಎಂದು ರಾಯರು ಒಗಟುಬಿಚ್ಚಿದರು.

ಇಷ್ಟರಲ್ಲಿ ಪೋಲೀಸ ಜವಾನನಿಗೆ ರಾಯರ ಪರಿಚಯವು ಸ್ಮರಣೆಗೆ ಬಂತು. "ಓಹೋ, ರಾಯರೋ!" ಎಂದುದೇ ತಡ, ಸುತ್ತಲಿನ ಉತ್ಸಾಹಕಾರಿಗಳು ತಟಸ್ಥರಾಗಿ ಮೌನವಾದರು. ಇದೇನೂ ಕೊಲೆಯ ಮಾತಲ್ಲ, ಮತ್ತೆ ತಾವೇಕೆಂದು ಒಬ್ಬೊಬ್ಬರಾಗಿ ಹಿಂಜರಿದು ಮಾಯವಾದರು. ಮುಂದೆ ಸೆಶನ್ಸ್ ಕೋರ್ಟಿನಲ್ಲಿ ಸಾಕ್ಷಿವಿಚಾರವಿಲ್ಲದ ಬಳಿಕ ನಿರುದ್ಯೋಗಿಗಳಿಗೆ ಅಲ್ಲಿ ನಿಲ್ಲುವ ಉದ್ಯೋಗವೇತಕ್ಕೆ?

"ರಾಯರ ಲಕ್ಕೋಟೆಗಳು ರಾಯರಿಗೇ ಬೇಕಂತಲ್ಲ!" ಎಂದು ಜವಾನನೆನ್ನುವುದರೊಳಗೆ, "ಇಲ್ಲಿವೆ ಲಕ್ಕೋಟೆಗಳು" ಎಂದು ಅವನ್ನು ಅಲ್ಲಿಟ್ಟು, "ನಿಮ್ಮ ಉಪಕಾರಮಾಡಿಸಿಕೊಳ್ಳುವ ರೀತಿ ನಿಮಗೇ ಇರಲಿ!" ಎಂದು ತಂಗಿ ತೆರಳಿದಳು.

ಲಕ್ಕೋಟೆಗಳನ್ನೆತ್ತಿಕೊಂಡು ರಾಯರೂ, ಜವಾನನಿಗಿಷ್ಟು ನಕ್ಕು, ಹೇಗೂ ಹಿಂತಿರುಗಿದರು. ಲಕ್ಕೋಟೆಗಳ ಹೊಟ್ಟೆ ಬಗಿದು, ನೋಟು ಕಟ್ಟುಗಳನ್ನು ಬಾಗಿಲು ಭದ್ರಮಾಡಿ ಬೀಗ ಮುದ್ರೆಮಾಡಿಟ್ಟರು.

ಮರುದಿನ ಬೆಳಗ್ಗೆ, ರಾಯರು ಸುಖನಿದ್ದೆಯಿಂದ ಎಚ್ಚತ್ತವರು, ಲೋಕವೇ ಬೇರೆಯಾದಂತೆ, ತಾವು ಸ್ವಪ್ನರಾಜ್ಯದಿಂದ ಹಿಂತಿರುಗಿದಂತೆ, ಸ್ವರ್ಗದಲ್ಲಿ ಎಚ್ಚರಗೊಂಡಂತೆ, ಪುನರ್ಜನ್ಮ ಪಡೆದಂತೆ, ಏನೋ ಆಗಿದೆ ಎಂದೇ ವಿಸ್ಮಯಗೊಂಡರು. ಮೈ ಹಗುರವಾಗಿದ್ದಿತು. ಕಿಟಕಿ ಬಾಗಿಲು ತೆರೆದು ಹೊರಕ್ಕೆ ನೋಡಿದರು. ಊರು ತುಂಬ ಉಲ್ಲಾಸ; ಎಲ್ಲೆಲ್ಲಿಯೂ ಅತ್ಯಾನಂದ.

"ಹೊಟ್ಟೆ! ಒಳಗಿನ ಹೆಚ್ಚು ಹದ್ದುಗಳಿಲ್ಲ, ಕಾಡುಬೆಕ್ಕುಗಳಿಲ್ಲ. ಎರಡು ಮೈಲು ಓಡಿದ್ದೆ. ಇನ್ನು ದಿನಂಪ್ರತಿ ಹೀಗೆಯೆ ಮೈಹುಡಿ ಮಾಡಿಕೊಂಡರೆ, ಹಗುರವಾಗುವುದಲ್ಲವೆ" ಎಂದರು.

ಆತ್ಮಘಾತವೆಲ್ಲಿ? ಈ ಬಗೆಯಲ್ಲಿ ಚಿರಂಜೀವಿಯಾಗಿ ಬಾಳುವ ಆಸೆಯಿಂದ ನಿರೀಕ್ಷಿತವಾದ ಸುಖವೆಲ್ಲಿ?

"ಇದು ಈಗ ಸಮಯ, ನಾರಾಯಣ" ಎನ್ನುತ್ತ, ಸಂಸಾರಸಾಗರದಲ್ಲಿ "ಈಸಿ ಜೈಸಬೇಕು" ಎಂದರು. ದಂಡ, ಒಸ್ಕಿಗಳಿಗೆ ಆರಂಭವಾಯಿತು; ಹೆಂಡತಿಯೊಂದಾಗಲೇ ಬೇಕೆಂದು ನಿರ್ಣ
ವಾಯಿತು.

ತಂಗಿಯಿಂದ ಹೀಗೆ ರಾಮು
"ಉಪಕಾರ"ವಾಯಿತು.

೮. ಯಮುನ ದುರ್ಭಾಗ್ಯ!

ವರ್ಷಕ್ಕೆ 2000 ರೂಪಾಯಿಗಳ ಹುಟ್ಟು; ಕುಲವಿಲ್ಲ; ಕುಟುಂಬವಿಲ್ಲ ಎಂಬಂತೆ, ಬಂದಾಗಲೂ ಹೋದಾಗಲೂ ಒಬ್ಬನೆ; ಮದುವೆ ಮಾಡಿಕೊಂಡಿಲ್ಲ,—ಯಾರಿಗಾಗಿ? ಎಂತ; ವಯಸ್ಸು 28, ದೇಹ ತೆಳ್ಳನೆ, ಕಣ್ಣು ಶುಭ್ರ ಕಪ್ಪು, ಸದಾ ಚಿಂತಕ; ಪತ್ತೇದಾರಿ ಕಥೆಗಳನ್ನೋದುವುದೆಂದರೆ ಉಸಿರೆಳೆದಷ್ಟು ಪ್ರಿಯ; ಕೊಲೆ ಮೊಕದ್ದಮೆಗಳಾದಲ್ಲಿ ಪ್ರೊಸಿಕ್ಯೂಶನ್ ಡಿಫೆನ್ಸು ಪಕ್ಷಗಳಿಗಿಂತಲೂ ಹೆಚ್ಚಿನ ಆತುರದಿಂದ (ಸೆಶ್ಶನ್ ಕೋರ್ಟಿನ ಕಂಭವಾಗಿಯೆ) ಜೀವಂತ ಕಲ್ಲಿನಂತೆ ಏಕಾಗ್ರತೆಯಿಂದ ಸ್ಥಿರವಾಗುತಿದ್ದ ವ್ಯಕ್ತಿ,—ನಮ್ಮ ಕಥೆಯ ರಾಯ ಚೆಲುವಯ್ಯ.

ಚೆಲುವಯ್ಯನಿಗೇನೋ ಮಹಾರೋಗವಾಗಿದ್ದಿತು; ಅದು ಹಣ್ಣಾಗುವ ಸಮಯವೆಂದು ಡಾಕ್ಟರರನ್ನು ಕರೆಯಲಾಯಿತು. ಇನ್ನಾರೇ ತಿಂಗಳಲ್ಲಿ ಫಲಕ್ಕೆ ಬರುವುದೆಂದು ಪರೀಕ್ಷಾಫಲ. ಚೆಲುವಯ್ಯನು ನಕ್ಕನು. ಎಂದಿಗೆ ಯಮನು ಬರುವನೆಂಬುದನ್ನು ತಿಳಿಯಲಾರದ
ಜೀವಿಗಳೆಲ್ಲ ವ್ಯರ್ಥ ಒದ್ದಾಡುವು
ತನಗೆ ಆರು ತಿಂಗಳ ಮುಂಚಿತವಾ
ಈಗ ವೈದ್ಯರಿಂದ ಮುನ್ನುಡಿ ಹೇಳಿ
ಸಿಯೇ, ಯಮನು ಬರುವನೆಂದ ಬಳಿ
ಇನ್ನು ಆರು ತಿಂಗಳ ಕಾಲದಲ್ಲಿ ಜೀಕ
ದಷ್ಟು ಸುಖ ಅನುಭವಿಸಿಯೇ ಸಿದ್ಧ
ಸಂತತಿಯಿಲ್ಲದೆ ಸತ್ತು, ಸೊತ್ತನ್ನೆಲ್ಲ ಸ
ಕಾರದ ಉತ್ತರಾಧಿಕಾರಕ್ಕೆ ಬಿಟ್ಟುಬಿಡ
ವುದು ಶುದ್ಧ ಹುಚ್ಚೆಂದನು. ಇವ
ಆನಂದವನ್ನು ಕಂಡು ಡಾಕ್ಟರರು ಇ
ನಿಗೆ ಕ್ಷಯರೋಗವೇ ಅಲ್ಲದೆ ಉನ್ಮಾ
ರೋಗವೂ ಇದೆ ಎಂದು ಚಕಿತರಾದರು

ಚೆಲುವಯ್ಯನು ಹೋದಲ್ಲೆಲ್ಲ ತನ
ಊರೆಂದೂ, ಉಳುಕೊಂಡಲ್ಲೆಲ್ಲ ತನ
ಮನೆಯೆಂದೂ, ಜಗತ್ತೆಲ್ಲ ತನ್ನ ಕುಟುಂ
ವೆಂದೂ, ತನ್ನ ಹಣವೆಲ್ಲ ಜನಾಂ
ದ್ದೆಂದೂ ತೀರ್ಮಾನಿಸಿಕೊಂಡನ
ಮೋಟಾರು ಬಸ್ಸುಗಳೊಳಗೆ ಸ್ಪರ್ಧೆ
ಯಿದ್ದುದರಿಂದ, ದಿನಕ್ಕೊಂದು ಊರಿ
ಪ್ರಯಾಣಮಾಡಿ ಅಲ್ಲೇ ಬೀಡುಮಾ

ಕೊಂಡು ಅಲ್ಲಿನ ನಿವಾಸಿಗಳಿಗೆ ತನ್ನ ಕುಟುಂಬದವರೆಂದು ಔತಣ ಮಾಡಿಸಿ, ಕೆಲವೇ ದಿನಗಳಲ್ಲಿ ಜಿಲ್ಲೆಯಲ್ಲೆಲ್ಲ ಮಹಾ ಪುಣ್ಯಪುರುಷ, ಮಹಾ ದಾನಿಯೆಂದು ಹೆಸರುಪಡೆದನು. ಇಂತಹ ಧರ್ಮಾತ್ಮರು ಯಾವ ಬಿರುದಿಗೂ ಹೆಚ್ಚಿನವರೆಂದು ಪ್ರಕಟವಾಯಿತು. ಅಧಿಕಾರಿಗಳೂ ಸಮಸ್ತ ಜಾತಿಗಳ ಮುಖಂಡರೂ ಇವನ ಹೆಸರು ಕೇಳಿದೊಡನೆ ನಮಸ್ಕಾರ ಹಾಕುತಿದ್ದರು; ಅಷ್ಟು ಗೌರವ!

ಹೊಸ ಹೊಸ ಕೊಲೆಮೊಕದ್ದಮೆಗಳ ವೃತ್ತಾಂತಗಳನ್ನು ಪತ್ರಿಕೆಗಳಲ್ಲಿ ಓದುವುದೂ, ಅಪರಾಧಿ ಯಾರೆಂದು ತಾನೆ ಮೊದಲಾಗಿ ನಿಶ್ಚಯಿಸಿಡುವುದೂ, ಪತ್ತೇದಾರಿ ಹೇಗೆ ನಡೆಯಬೇಕೆಂದು ಸಮಸ್ಯೆಕಟ್ಟಿ ಪೊಲೀಸರ ಕ್ರಮಗಳನ್ನೂ ಸೆಶನ್ಸ್ ಕೋರ್ಟಿನಲ್ಲಿ ನಡೆವ ವಿಚಾರಣೆ ತೀರ್ಮಾನಗಳನ್ನೂ ವಿಮರ್ಶಿಸುವುದೂ ಮಾತ್ರ ಎಂದಿನಷ್ಟೆ ಬಲವಾಗಿ ಇವನಲ್ಲಿ ನಿಂತ ಪದ್ಧತಿಯೇ ಆಗಿದ್ದಿತು. ಹೀಗೆ ವಿಮರ್ಶಿಸುತ್ತ ಬಂದಂತೆ, ತಪ್ಪಿಸಿಕೊಳ್ಳುವ ರೀತಿ ಗೊತ್ತಿದ್ದರೆ ಎಂತಹನೂ ಎಂತಹನನ್ನೂ ಕೊಲೆಮಾಡುವುದು ಕಷ್ಟವಲ್ಲೆಂದೂ ಖಂಡಿತಮಾಡಿಕೊಂಡನು. ಇದೊಂದು ಹೊಸ ಜ್ಯೋತಿಯು ಅವನ ಮೆದುಳಲ್ಲಿ ಬೆಳಗಿದ್ದೇ ತಡ, ಅವನ ಚಟುವಟಿಕೆಗಳು ನೂರ್ಮಡಿ ಹೆಚ್ಚುವಂತಾಯಿತು. ಯಾರನ್ನು ಕೊಲೆ ಮಾಡಲಿ ಎಂದೇ ಯೋಚಿಸುತ್ತ ಹಾತೊರೆಯುತಿದ್ದನು. ಯಾರು ಸತ್ತರೆ ಕೆಲವರಿಗಾದರೂ ಸುಖವಾದೀತೋ ಅಂತವರಾರು? ಎಂದು ತಿಳಿಯಲು, ಕತ್ತಲ ಓಣಿಗಳಲ್ಲಿ, ನಾಲ್ಕಾರು ಪಟಂಗರು ಸೇರಿ ಅಮಲೇರಿ ಅಂತರಂಗ ಹೊರಗೆಡೆವಲ್ಲಿ, ಅಡಗಿ ನಿಂತು ಎಲ್ಲವನ್ನೂ ಕೇಳುವನು. ಬಹಳ ದಿನಗಳಾದರೂ, ನ್ಯಾಯವಾಗಿ "ಸಾಯಿಸ"ಬಹುದಾದ ಯೋಗ್ಯ ವ್ಯಕ್ತಿಯೇ ಇವನಿಗೆ ಸಿಗಲಿಲ್ಲ.

ಒಂದು ದಿನ, ನಸುವಿನಲ್ಲಿ, ನಾಲ್ವರು ಸಂಭಾವಿತರಂತೆ ತೋರುತಿದ್ದ ಗೃಹಸ್ಥರು ಒಂದು ಕಡೆ ಕುಳಿತು ಮಾತುಕತೆ ಸಾಗುತ್ತಿರಲು, ಅದನ್ನು ಮರೆಯಾಗಿ ಕೇಳುತಿದ್ದ ಚೆಲುವಯ್ಯನಿಗೆ "ಸಂದರ್ಭ ಸಿಕ್ಕಿದರೆ, ಇಂತಹನ ಕುತ್ತಿಗೆ ಮುರಿದೇ ಹಾಕುತಿದ್ದೆ!" ಎಂದು ಯಾರೋ ಗಟ್ಟಿಯಾಗಿ ಆಡಿದಂತೆ ಕೇಳಿತು. ಚೆಲುವಯ್ಯನು, ಹತ್ತಿರಕ್ಕೆ ಸುಳಿದು, ಇನ್ನೂ ಕೇಳಿದನು. "ಬೆಳೆದ ಹುಡುಗಿ. ಅವಳ ಇಡೀ ಜನ್ಮವು ನಿರಾಶವಾಗುವ ಹಾಗೆ, ಅವನು ಶ್ರೀಮಂತನಾದರೂ ಸಾಧಿಸಿದನೆಂದ ಬಳಿಕ, ಇಂತಹರನ್ನಲ್ಲವೆ ಕೊಂದು ಸೇಡು ತೀರಿಸಿ ನ್ಯಾಯ ಪಾಲಿಸಬೇಕು?" ಎಂದೂ ಕೇಳಿದನು. ಯಾವ ಶ್ರೀಮಂತನು, ಕನ್ಯಾದ್ರೋಹವನ್ನು ಮಾಡಿದನೆಂದು ಮಾತ್ರ ತಿಳಿಯಲಾರದೆ, ಅವರ ಸಂಭಾಷಣೆ ಮುಗಿಯುವಾಗ, ಅವರಲ್ಲಿ ಹಾಗೆ ಮಾತಾಡಿದವನ ಬೆನ್ನು ಹಿಡಿದು ನಡೆದನು.

ಆ ಮನುಷ್ಯನು ಒಂದು ಹೋಟಲನ್ನು ಸೇರುವುದರೊಳಗೆ, ಇವನು ಅವನನ್ನು ತಡೆದು ಮೆಲ್ಲನೆ ಎಲ್ಲ ವೃತ್ತಾಂತ

ವನ್ನೂ ಸಂಗ್ರಹಿಸಿದನು. ಕನ್ಯೆ ಎಂಬವಳು ಒಬ್ಬ ಬಾಲವಿಧವೆ; ನರ್ಸಮ್ಮನಾಗಿ ಶ್ರೀಮಂತನ ಪ್ರಥಮ ಪತ್ನಿಯ ಬಾಣಂತಿತನದ ಕಾಲದಲ್ಲಿ ಶುಶ್ರೂಷೆ ಮಾಡಿದವಳು. ಬಾಣಂತಿಯು ಸನ್ನಿ ಹಿಡಿದು ಸತ್ತಳಾದರೂ, ಶ್ರೀಮಂತನ ಅದೊಂದೇ ಎಳಗೂಸನ್ನು ಆರೈಕೆಮಾಡಿ ಬದುಕಿಸಿದವಳೇ ಇವಳು. ಆರು ತಿಂಗಳಲ್ಲಿ ಇವಳಿಗೆ ಮನೆಯವಳಷ್ಟೆ ಪ್ರೀತಿಯಿಂದ ಶ್ರೀಮಂತನು ಕಂಡು, ಇಂತಹಳನ್ನೆ ಮದುವೆಯಾಗುವುದುತ್ತಮವೆಂದು ಎಣಿಸಿದ್ದನು. ಹಾಗೆಯ ಅವಳಿಗೂ ಮಾತುಕೊಟ್ಟಿದ್ದನು. ಅವಳೂ ಒಪ್ಪಿದ್ದಳು. ತನ್ನವರಿಗೆ ತಿಳಿಸಿದ್ದಳು. ಹೇರಳ ಹಣವನ್ನು ಶ್ರೀಮಂತನಿಂದ ಶುಶ್ರೂಷೆಯ ಉಪಕಾರಕಾಗ್ಗಿ ಪಡೆದಿದ್ದಳು. ಅನಾಥ ಬಾಲಿಕಾಶ್ರಮದವರಿಗೂ ಈ ವೃತ್ತಾಂತ ತಿಳಿದು, ತಮ್ಮ ಆಶ್ರಿತಳೊಬ್ಬಳಿಗೆ ಸಮಾಜದಲ್ಲಿ ಸುಖಸ್ಥಾನಪ್ರಾಪ್ತಿಯಾಯಿತೆಂದು ಅವರೂ ಅಲ್ಪಸ್ವಲ್ಪ ಪ್ರಕಟಿಸಿದ್ದರು. ಆದರೆ, ಅದುವರೆಗೆ ಲಗ್ನಮುಹೂರ್ತವು ಮುಂದೆಮುಂದಕ್ಕೇ ಸರಿಯುತಿತ್ತು. ನಿರುದ್ಯೋಗಿಗಳ ಮತ್ತು ನಿಂದಕರ ಹಾಗೂ ಕಾಮುಕರ ಬಾಯಿಯಿಂದ ಈ ವೃತ್ತಾಂತವು, ಅರೆಸುಟ್ಟ ಒಣಮೀನಿನಂತೆ, ಊರಲ್ಲೆಲ್ಲ ವಾಸನೆ ಹಬ್ಬಿಸಿತು. ಅದನ್ನು ತಿಳಿದು, ನರ್ಸಮ್ಮನ ಸೋದರಮಾವನ ಅಭಿಪ್ರಾಯದಲ್ಲಿ ಪಶ್ಚಾತ್ತಾಪವುಂಟಾಗಿ ಶ್ರೀಮಂತನನ್ನು ಕೊಂದೇಬಿಟ್ಟರೆ ಸುಖವೆಂಬ ಅದೊಂದು ಮಾತುಹೊರಟಿತ್ತು. ಅಷ್ಟೆ ಅಂತರಂಗ.

ಚಲುವಯ್ಯನು ಎಲ್ಲವನ್ನೂ ಆಲೋಚಿಸಿದನು. ಇಂತಹನ ಕೊಲೆ ನ್ಯಾಯವಾದ ಪಾತಕವೆಂದನು. ತಾನೇ ಅವನನ್ನು ಕೊಲ್ಲುವುದಾಗಿ ನಿಶ್ಚಯಿಸಿದನು. ಸೋದರಮಾವನು ಈ ಮಾತು ಕೇಳಿ ಬೆಚ್ಚಿ, ಬೆದರಿ, ಮೈಹಾರಿದನಾದರೂ ತನಗೇನು ಅಥವಾ ಇವನು ಹಾಗೆಲ್ಲ ಮಾಡುವುದುಂಟೆ ಎಂದೇ ಭಾವಿಸಿ ನಕ್ಕನು. "ಪತ್ರಿಕೆ ಓದುತ್ತಿರಿ, ವರ್ತಮಾನ ತಿಳಿದೀತು" ಎನ್ನುತ್ತ, ಚೆಲುವಯ್ಯನು ಅವನಿಗೆ ಭಾಷೆ ಕೊಟ್ಟು ಮಾಯವಾದನು. ಮಾವನು,–'ಹುಚ್ಚ! ಹಾಗೇ ಮಾಡುವನೆ? ಛಿ! ಮಾಡಿದರೆ?' ಎಂದೇ ತನ್ನಲ್ಲಿ ಭಾವಿಸಿ ಯೋಚಿಸಿ ಕನಸುಕಂಡು, ಕ್ರಮೇಣ ಮರೆತನು.

ಮರುದಿನ ಬೆಳಗ್ಗೆ ಆ ಶ್ರೀಮಂತನಲ್ಲಿಗೆ ಚೆಲುವಯ್ಯನು ಸವಾರಿಬೆಳೆಸಿದನು. ಕಾಫಿ ವಹಿವಾಟಿನ ಪ್ರಸ್ತಾಪವನ್ನೆತ್ತಿ, ಕೆಲವು ಕಾಗದಪತ್ರಗಳನ್ನು ಶ್ರೀಮಂತನ ಮುಂದಿಟ್ಟು ವಿವರಿಸಿದನು. ವಿವರಣೆ ಮುಗಿಯುವಾಗ, ಶ್ರೀಮಂತನು ಎದೆತುಂಬ ಗಾಯಗಳಾಗಿ ಸತ್ತು ಬಿದ್ದನು; ಅವನ ಕೈಯಲ್ಲೇ ಹರಿತವಾದ ಚೂರಿ. ಚೆಲುವಯ್ಯನು ಪತ್ರಗಳನ್ನೆತ್ತಿಕೊಂಡು ಎಂದೋ ತೆರಳಿದ್ದನು.

ಪೇಟೆಯುಲ್ಲೆಲ್ಲ ಅತಿ ಭಯಂಕರವಾದ ತುಫಾನು ಎದ್ದಂತಾಯಿತು. ಶ್ರೀಮಂತನ ಮರಣದ ವೃತ್ತಾಂತವು ನಾನಾ ಊಹಾಪೋಹೆಗಳಿಂದೊಡಗೂಡಿ ಆ ದಿನವೇ ಪತ್ರಿಕೆಗಳಲ್ಲಿ ಪ್ರಕಟವಾಯಿತು. ನಮ್ಮ ಕಥೆಯ ಮಾವನೂ

ಈ ವೃತ್ತಾಂತವನ್ನೋದಿ ಚಕಿತನಾದನು. ಊರಲ್ಲಿನ ಶ್ರೀಮಂತರುಗಳು ಒಳಗೊಳಗೆ ನಡುಗತೊಡಗಿದರು. ಪೋಲೀಸರಿಗಂತೂ ಮಹಾಬಾಧೆ.

ಸಂಜೆಯಲ್ಲಿ ಊಟದ ಹೊತ್ತಿಗೆ ಸರಿಯಾಗಿ, ಮಾವನ ಊಟದ ಹೋಟಲ ಬಳಿಯಲ್ಲಿಯೆ ಚೆಲುವಯ್ಯನು ಹಾಜರು. ಮಾವನಿಗೆ ಆಗ ಕಣ್ಣಿನ ಮುಂದೆ ಯಮದೂತನೆ ಬಂದು ನಿಂತಂತೆ ತೋರಿತು. ಅವನ ಪ್ರಶ್ನೆಗೆ ಮೊದಲೇ—'ಕೇಳಿದಿರಾ? ಶ್ರೀಮಂತನು ಇಂದೇ ಮಡಿದನು. ನಿಮ್ಮಿಂದ ತಾನೆ ಇಷ್ಟು ಬೇಗನೆ ಇಷ್ಟು ಸುಲಭವಾಗಿ ಅವನನ್ನು ಕೊಲ್ಲಲಾಗುತಿತ್ತೆ? ನನ್ನ ಮಾತು ಹೇಗೆ?' ಎಂದು ಚೆಲುವಯ್ಯನು ಹಿಗ್ಗುತ್ತ ತಿಳಿಸಿ, ಕೊಲೆಯನ್ನು ಅವನೊಡನೆ ಒಪ್ಪಿಕೊಂಡನು.

"ಅಯ್ಯೋ! ಭಯಂಕರ ಪಾಪವಾಯ್ತು! ಆ ಬಾಲವಿಧವೆಯನ್ನು ವರಿಸಿಕೊಳ್ಳಲು ದಿನ ನಿಶ್ಚಯವಾದುದನ್ನು ತಿಳಿಸಿ, ಅವಳೂ ಶ್ರೀಮಂತನೂ ನನಗೆ ಪತ್ರ ಬರೆದಿದ್ದರಲ್ಲ! ಇಂತಹ ಮಹಾಪರಾಧವನ್ನು ಮಾಡಿದ ಪಾದಿಗನೆ! ದೂರಸರಿ!" ಎಂದು ಅತಿ ನಿಂದೆಯ ಸ್ವರದಿಂದ ಮಾವನೆಂದನು.

ಈ ಧಿಕ್ಕಾರಕ್ಕೇನೆನ್ನಬೇಕು? "ನಿಮಗೆ ಬೇಕಾದಂತೆ ಮಾಡಿದೆನು. ಪಾತೆತ್ತದಿರಿ." ಎಂದು ಒಂದು ನೋಟಿನ ಕಟ್ಟನ್ನು ಮಾವನ ಕೈಯಲ್ಲಿಟ್ಟು ಚೆಲುವಯ್ಯನು ಎತ್ತ ಹೋದನೋ ತಿಳಿದಿಲ್ಲ. ಮಾವನಿಗೆ ಈ ಮನುಷ್ಯನು ಯಾರೆಂದಾಗಲಿ, ಎಲ್ಲಿಯವನೆಂದಾಗಲಿ ಗೊತ್ತಿರಲಿಲ್ಲ. ಇನ್ನು ಅದು ಅಗತ್ಯವೂ ಎನಿಸಲಿಲ್ಲ. ಬಾಲವಿಧವೆ ಹಾಗೇ ಉಳಿಯಲಿ; ಅವಳ ಹೆಸರು ಹಾಳಾಗದಂತಾಯ್ತು. ವಿಧವಾ ವಿವಾಹಕ್ಕೊಲ್ಲದ ಮತ್ತಾರೋ ಇವನ ಹೆಂಡತಿಯ ಪಕ್ಷದವರು ಹೀಗೆ ಗೋಪನದಲ್ಲಿ ಅವನನ್ನು ಕೊಂದಿಕ್ಕಿದರೆಂದಾದರೂ ಜನರು ನಂಬುವರು. ನ್ಯಾಯವಾಗಿ ನೋಡಿದರೆ, ಒಂದು ಕ್ಷಣಕ್ಕಾದರೂ ಮನಸಾ ನಾನೇ ಕೊಲೆಮಾಡಲೆಳಸಿದ್ದೆನು; ಈಗ ಈ ಕೊಲೆಗಾರನಿಗೆ ಸಹಾಯಕನೂ ಪ್ರೇರೇಪಕನೂ ಎಂದು ನನ್ನ ಮೇಲೆ ದೂರು ಎದ್ದೀತು.... ಇತ್ಯಾದಿ ಎಣಿಸಿ ಮೌನನಾದನು. ಆ ನೋಟುಗಳು ಅವನ ಬಾಯಿಗೆ ಬೀಗ ಜಡಿದು ಮೊಹರೊತ್ತಿದುವು.

ಹೋಟೆಲಿನಲ್ಲಿ ವರ್ತಮಾನವೆಲ್ಲ ಹಬ್ಬಿತು. ಮಾವನೆಂದವನೇ ಈ ವರ್ತಮಾನವನ್ನು ಕೇಳಿ ನೊಂದನು. ಇವನಿಗೂ ಶ್ರೀಮಂತನಿಗೂ ಮನೋಕಲ್ಪಿಷವುಂಟಾಗಿದ್ದಿತೆಂದು ಕೆಲವರಾದರೂ ತಿಳಿದೇ ಇದ್ದರು. ಪೋಲೀಸರಿಗೆ ಇದು ಕ್ರಮೇಣ ತಿಳಿಯದೆ ಇರಲಿಲ್ಲ. ಆದರೆ, ಮಾವನು ಬಹಳ ಸಾಧು. ಅವನಿಂದಲ್ಲ, ಅವನ ಆ ನರ್ಸಮ್ಮನ ಕಡೆಯಿಂದಲೂ ಅಲ್ಲ, ಮತ್ತಾರೋ ಎಂದೇ ಒಂದು ತಿಂಗಳು ಶೋಧನೆ, ಊಹನೆ, ಸಂದೇಹಗಳಲ್ಲೇ ಕಳೆಯಿತು. ಕೊಲೆಗೇಡಿಯು ಸಿಗಲಿಲ್ಲ!

ಇಷ್ಟರೊಳಗಾಗಿ ಚೆಲುವಯ್ಯನು ಬಲು ದೂರದ ಮತ್ತೊಂದು ಜಿಲ್ಲೆಗೇ ತೆರಳಿದ್ದನು. ಪೊಲೀಸರು ಯಾವಾ

ಗಲೂ ಸುಲಭದ ಕುರುಹುಗಳಿಂದ ಕಠಿನವಾದ ಅಪರಾಧಗಳ ಮೂಲವನ್ನು ಕಂಡುಹಿಡಿಯದೆ, ಸುತ್ತು ಸುತ್ತಾಡಿ ರಗಳೆಗಳಲ್ಲಿ ಸಿಲ್ಕಿಬೀಳುವರೆಂದು ಅವನೇ ದೂರುತಿದ್ದನು. ಇನ್ನು ತನ್ನ ಜಾಣತನವನ್ನು ತೋರಿಸಲೂ, ಫಕ್ಕನೆ ಮಾವನು ಬಾಯಿ ತೆರೆದರೆ ಅವನೇ ಬಲಿಬೀಳುವಂತೆ ಮಾಡಲೂ ಅನುಕೂಲವಾಗುವಂತೆ, ವೃತ್ತ ಪತ್ರಿಕೆಗೆ ತಾನೆ ಗುಪ್ತನಾಮದಿಂದ ಒಂದು ಸೂಚನೆ ಬರೆದನು. ಅವನ ಲೇಖದಲ್ಲಿ,—"ಪೋಲೀಸರು ಇಷ್ಟು ಸಹಜವಾದೊಂದು ಆತ್ಮಹತ್ಯವನ್ನು ಕುರಿತು ಪತ್ತೆಮಾಡುವುದರಲ್ಲೆ ಇನ್ನು ಮಗ್ನರಾಗಿರುವುದು ವಿಚಿತ್ರ; ಹೊರಗೆ ಶ್ರೀಮಂತನಾದರೂ ಒಳಗೆ ಪಾಪಿಷ್ಠನಾದವನು ಹೀಗೆಯೇ ಸಾಯಲೆಂದು ಯಮನೇ ನಿರ್ಧಾರ ಮಾಡಿದ್ದಾಗಲೂ, ಪೋಲೀಸರು ಕೊಲೆಗಾರನನ್ನು ಹುಡುಕುತ್ತಿರುವುದು ನಿಜವಾಗಿಯೂ ಯಮನ ದುರ್ಭಾಗ್ಯವಲ್ಲವೆ?" ಎಂದು ಬರೆದಿದ್ದಿತು. ಅವನ ಮೇಲಂತೂ ಎಂತಹ ಆರೋಪವೂ ಅಸಂಭವವಾಗಿದ್ದಿತು; ಕೊಲೆಯಾದಂದೇ ಐವತ್ತು ಮೈಲು ದೂರದ ಹಳ್ಳಿಯಲ್ಲಿ ಯಕ್ಷಗಾನ ಪ್ರಸಂಗದ ಅಭಿನಯಕಾಲದಲ್ಲಿ ಚೆಲುವಯ್ಯನು ಭಾಗವತರಿಗೂ ಮುಖ್ಯ ವೇಷಧಾರಿಗಳಿಗೂ ನೂರು ರೂಪಾಯಿಯ ವಿಶೇಷ ಉಡುಗೊರೆಗಳನ್ನು ತಾನೆ ಹಂಚಿದ್ದುದನ್ನು ಅಲ್ಲಿದ್ದ ಪೊಲೀಸ್ ಸಬ್ ಇನ್ಸ್‌ಪೆಕ್ಟರರೂ ತಿಳಿದಿದ್ದರು!

ಪೊಲೀಸ ಇನ್ಸಪೆಕ್ಟರರು ಈ ಪತ್ರವನ್ನೋದಿಕೊಂಡರು. ಪ್ರಯತ್ನಮಾಡಿದರೂ ಕೊಲೆಗಾರನ ಪತ್ತೆಯಾಗದಿರುವಲ್ಲಿ, ಆತ್ಮಘಾತವೆಂಬುದಕ್ಕೆ ಮನಶ್ಶಾಸ್ತ್ರವನ್ನೂ ಮೃತನ ಅಂತರಂಗವನ್ನೂ ಬಲ್ಲವನ ರುಜುವಾತು ಆಯಿತೆಂದು ಗುರುತುಮಾಡಿಕೊಂಡರು. ಆದರೆ ತಮಗೂ ಈ ಅಂತರಂಗವನ್ನಿಷ್ಟು ತಿಳಿಯಬೇಕೆಂದು ಮಾವನೆಂಬಾತನನ್ನು ಕರೆಯಿಸಿ ವಿಚಾರಿಸಿದರು. ಆ ಬಾಲವಿಧವೆಯ ವಿಷಯಪ ಮಾತಾಯಿತು. ಆದರೆ, ಅವಳಿಗೆ ಅನ್ಯಾಯವಾಗದಂತೆ ಅವರು ನಿರ್ಧರಿಸಿ ಬರೆದ ಪತ್ರವನ್ನೋದಿದ ಬಳಿಕ, ಮರುದಿನವೇ ಅವನನ್ನೇಕೆ ಮಾವನಾಗಲಿ ಇತರರಾಗಲಿ ಮಾವನ ಕಡೆಯಿಂದ ಕೊಲೆಮಾಡುವರು ಎಂದು ಆ ಸಂದೇಹವು ಮುಗಿಯಿತು. ಆದರೂ, ಪತ್ತೆಮಾಡಿದುದರ ಫಲಿತಾಂಶವು ರಿಕಾರ್ಡುಮೂಲಕ ಹೊರಬೀಳಲೆಂದು ಇನ್ಸಪೆಕ್ಟರರು ರಿಕಾರ್ಡು ತುಂಬುವುದರಲ್ಲೇ ಇದ್ದರು.

ಇರಲಿ, ಶ್ರೀಮಂತನ ಮರಣದ ಮೊದಲು ಹೊಟೇಲಿನಲ್ಲಿರುತ್ತಿದ್ದ ಮಾವ ಈಗ ನರ್ಸಮ್ಮನೊಡನೆ ಸುಖವಾಗಿ ಬಂಗಲೇನಿವಾಸಿಯಾಗಿದ್ದಾನೆ. ಅವಳ ಬಳಿ ಬೇಕಾದಷ್ಟು ದುಡಿದ ಹಣವಿರಬಹುದು ನಿಜ. ಇದುವರೆಗೆ ಮಾತ್ರ ಇವರು ಒಂದೇ ಮನೆಯುಲ್ಲಿಲ್ಲದವರು ಈಗ ಹೀಗಿರುವುದೇಕೆ ಎಂದು ಇನ್ಸಪೆಕ್ಟರರು ವಿಚಾರಕ್ಕಿಳಿದರು. ಇವರ ಬಂಗಲೆಗೆ ಸಾಮಾನು ಒದಗಿಸುವ ವರ್ತಕನನ್ನು ಮಾತನಾಡಿಸಿದ್ದಾಯಿತು.

ಅಲ್ಲಿ, ಮಾವನ ಲೆಕ್ಕ ನೋಡಿದರೆ, ನಗದು ಹಣ ಸಲ್ಲುವುದೂ ಕಂಡು ಬಂತು. ಕೇವಲ ನೂರು ರೂಪಾಯಿಯ ನೋಟುಗಳನ್ನೆ ವರ್ತಕನಿಗೆ ತೆರುವ ಕ್ರಮವಿತ್ತು. ನೋಟುಗಳ ನಂಬರು ಗುರುತು ಮಾಡಲಾಯಿತು.

ಹತ್ತು ದಿನಗಳಲ್ಲಿ ಮಾವನಿಗೆ ರಿಮಾಂಡು. ಅವನು ವರ್ತಕನಿಗೆ ಕೊಟ್ಟ ನೋಟುಗಳೆಷ್ಟೋ ಶ್ರೀಮಂತದ ಕೊನೆಯ ದಿನದ ಲೆಕ್ಕಾಚಾರದಲ್ಲಿ ನಗದು ಸಿಲ್ಕು ಎಂದು ಬರೆದಿಟ್ಟವುಗಳು! ಅಲ್ಲಿಂದಿಲ್ಲಿಗೆ ನೋಟುಗಳು ಹೇಗೆ ತಲಪಿದುವು? ಶ್ರೀಮಂತನ ಕೊನೆಯ ಪತ್ರದಲ್ಲೇನೂ ಈ ಪ್ರಸ್ತಾಪವಿರಲಿಲ್ಲ. ನೋಟುಗಳು ಕದ್ದವನಿಂದ ಪಡೆದುದಾಗಲಿ, ಇವನೇ ಕದ್ದುದಾಗಲಿ ಆಗಿರಬೇಕಾಗಿ ಊಹೆ. ಹಾಗೆ ಮಾಡಿಲ್ಲವೆಂದು ರುಜುವಾತು ಕೊಡುವ ಭಾರವು ಮಾವನ ಮೇಲೆ.

ಅವನ್ನು ತನಗೆ ಶ್ರೀಮಂತರೇ ಕಳುಹಿಕೊಟ್ಟುದಾಗಿ ಮಾವನ ಉತ್ತರ, ಕೋರ್ಟಿನಲ್ಲಿ. ಕೊಟ್ಟವನಾರು? ಶ್ರೀಮಂತನ ನವುಕರನಾರೂ ಅಲ್ಲ; ಮತ್ತೊಬ್ಬ. ಅವನಾರು? ಕೊಲೆಯಾದಂದು, ಆ ದೂರದ ಊರ ಭಾಗವತರಿಗೆ ಉಡುಗೊರೆಯಾಗಿಯೂ ಇವುಗಳಲ್ಲೊಂದು ನೋಟನ್ನು ಕೊಟ್ಟವನೇ? ಅವನನ್ನು ರುಜುಪಡಿಸಲು ಇತ್ತ ತಂದರು.

ಚೆಲುವಯ್ಯನು, ಮಾವನನ್ನು ಕೋರ್ಟಿನಲ್ಲಿಯೆ ಪೊಲೀಸರ ಕಾವಲಲ್ಲೇ ಕಾಣಬೇಕಾಯಿತು. ಬಹುಶಃ ಮಾವನು ಎಲ್ಲವನ್ನೂ ಹೇಳಿದನೇನು? ಅಂದೇ ತನ್ನನ್ನು ಕೊಲೆಗಾರನೆಂದವನು ಇನ್ನು ಹಿರಿತೆಗೆವನೆ? ಎಂದೆಣಿಸಿ, ವಿಚಾರಣೆಗೆ ಆರಂಭವಾಗುತ್ತಲೇ,— ಚೆಲುವಯ್ಯನು, ಈ ನೋಟುಗಳನ್ನು ಶ್ರೀಮಂತನು ತನಗೆ ಕೊಟ್ಟವನೆಂದೂ ಎನ್ನಲಿಲ್ಲ; ತಾನೆ ಕಿತ್ತುಕೊಂಡುದೆಂದೂ ಹೇಳಲಿಲ್ಲ; ಅವನ್ನು ಮಾವನಿಗೆ ತಾನೆ ಕೊಟ್ಟೆನೋ ಕೊಡಲಿಲ್ಲವೊ ಎಂದೂ ನುಡಿಯಲಿಲ್ಲ. "ನಾನೇನು ಬಲ್ಲೆನು ಅಥವಾ ನಾನೇ ಶ್ರೀಮಂತನನ್ನು ಕೊಂದವನೆಂದು ಇಲ್ಲಿ ಹೇಳುತ್ತೇನೆನ್ನುವ; ರುಜುವಾತು ಬೇಡವೆ? ನಾನಿಲ್ಲಿದ್ದಿಲ್ಲವೆಂದು ಪೊಲೀಸರಿಗೇ ಗೊತ್ತಿದೆ. ಶ್ರೀಮಂತನನ್ನು ಕೊಂದು ನನಗೇನು ಲಾಭವಿತ್ತು? ಹಣವಾದರೂ ನನ್ನೊಡನಿದ್ದುದೇ ಸಾಕು, ಅದರಲ್ಲೂ ಉತ್ತರಾಧಿಕಾರಿಯಿಲ್ಲದೆ, ಇನ್ನು ಕೆಲ ತಿಂಗಳೊಳಗೆ ಸಾಯಲಿರುವ ಕ್ಷಯ ರೋಗಿಗೆ ಮತ್ತೊಬ್ಬನನ್ನು ಕೊಂದು ಸಿಗುವುದೇನು? ಹಣ ಜೊರೆತು ಮಾಡುವುದೇನು?" ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದನು.

ಆಟದ ಭಾಗವತರನ್ನು ಅತ್ತ ತಂದರು; ಅವರ ಬಹುಮಾನವಾದ ನೋಟೂ ಹಾಜರಾಯಿತು; ಆಗ ಅಲ್ಲೇ ಹಾಜರಿದ್ದ ಸಬ್‌ಇನ್ಸಪೆಕ್ಟರರೂ ಸಾಕ್ಷ್ಯ ನುಡಿದರು. ನೋಟುಗಳಿಗೂ ಕೊಲೆಗೂ ಸಂಬಂಧಹಾಕಿದರು.

ಚೆಲುವಯ್ಯನೇ ಕೊಂದವನಲ್ಲವಾದರೂ, ನೋಟುಗಳನ್ನು ಹೇಗೋ ಪಡೆದಿದ್ದನೆಂದು ಜಡ್ಜರೆಣಿಸಿದರು. ಅಪಾದಿತನು ಇನ್ನೇನಾದರೂ ಹೇಳುವುದಕ್ಕಿದೆಯೆ?

"ವೈದ್ಯಪರೀಕ್ಷೆಯಾದ ಆರು ತಿಂಗಳೊಳಗೇ ಮರಣವೆಂದು ನಾನೆಂತೂ ವೈದ್ಯರಿಂದ ಮೊದಲೇ ತಿಳಿದಿದ್ದೆನು. ಹೀಗಿರುತ್ತಾ, ಯಮನಪಾಶಕ್ಕೆ ಜೀವ ಕೊಡುವ ಮೊದಲು, ನಾನು ಫಾಸಿಯ ಪಾಶಕ್ಕೆ ತಲೆಗೊಡತಕ್ಕವನೆ? ಕೊಲೆ ಮಾಡಿದವನು ನಾನಲ್ಲ" ಎಂದು ಚಲುವಯ್ಯನು ನಗುತ್ತ ನುಡಿದನು.

ಶ್ರೀಮಂತನ ಶವ ಪರೀಕ್ಷೆಯ ರುಜುವಾತು ಕೊಡಲು ಬಂದಿದ್ದ ಡಾಕ್ಟರರು ಅಲ್ಲೇ ಇದ್ದುದನ್ನು ಅವನು ತಿಳಿದಿರಲಿಲ್ಲ. ಈ ಪ್ರಸ್ತಾಪ ಕೇಳಿ, ಡಾಕ್ಟರರು ಸ್ವಯಂ ಸಾಕ್ಷ್ಯ ನುಡಿಯಲಿಚ್ಛಿಸಿ "ಹುಜೂರ್, ಆಪಾದಿತನ ದೇಹಪರೀಕ್ಷೆ ನಾನೇ ಮಾಡಿದವನು. ಆರು ತಿಂಗಳು ಮಾತ್ರ ಇವನು ಜೀವಿಸಬಹುದಾಗಿ ಅಂದು ನಾನೇ ನುಡಿದವನು. ಆದರೆ, ತರುವಾಯದಲ್ಲಿ, ಇದು ಕ್ಷಯರೋಗವೇ ಅಲ್ಲವೆಂದೂ, ಅದರಂತೆ ತೋರುವ ದೀರ್ಘಕಾಲದ ಉಪಚಾರದಿಂದ ಶಮನವಾಗುವ ರೋಗವೆಂದೂ ತಿಳಿದುಕೊಂಡೆನು. ಇವನಂತೆಯ ನರಳುತಿದ್ದ ನೊಬ್ಬನು, ಈಗ ಇಲ್ಲಿ ಈ ಮೊಕದ್ದಮೆಯಲ್ಲಿ, ನೋಟುಗಳಿಗಾಗಿ ರುಜುವಾತು ಹೇಳಲು ಬಂದಿರುವ "ಮಾವ"ನು. ನನ್ನ ಚಿಕಿತ್ಸೆಗಾಗಿಯೆ ಬಂಗಲೆಯಲ್ಲಿ ನರ್ಸ್ ಒಬ್ಬಳ ಶುಶ್ರೂಷೆಯಿಂದ ಇರುತ್ತ, ಈಗ ದೃಢಕಾಯನಾಗಿ ನಿಂತಿರುವನು. ಆಪಾದಿತನು ನನ್ನ ದೃಷ್ಟಿಗೆ ಎಂದು ಗೋಚರಿಸುವನೋ, ಅಂದೇ ಅವನಿಗೂ ಅದೇ ಚಿಕಿತ್ಸೋಪಚಾರ ನಡೆಯಿಸಿ ಇನ್ನು ಹತ್ತೆಂಟು ವರ್ಷಗಳಾದರೂ ಜೀವಿಸಿರುವಂತೆ ಮಾಡಬೇಕೆಂ... ನಿರ್ಧರಿಸಿದ್ದೆನು. ಈಗ ತಾನೆ ಇ... ನನ್ನು ಕಂಡೆ; ಇವನು ತಾನೆ ಶ್ರೀಮ... ನನ್ನು ಕೊಂದವನೆಂದೂ ತಮಾಷೆಗಾ... ಯೋ ನಿಜವಾಗಿಯೋ ಹೇಳುತ್ತಿರ... ನೆಂದು ಅವನೇ ಬಲ್ಲನು. ಆ ವಿಷಯ... ವನ್ನು ಇತರರು ಹೇಗೆ ತಿಳಿಯಬೇಕು... ಎಂದನು.

ಚಲುವಯ್ಯನ ಮೋರೆಯು ... ಕೆಟ್ಟಿತು. ಅವನ ಹಿಡುಗಳಲ್ಲಿ ತ...ಫಾ... ಎದ್ದಿತು. ತಾನು ಪ್ರಮಾಣಮಾಡಿ ನಿಂ... ಕೊಂಡುದನ್ನು ಮರೆತನು. "ವೈದ್ಯ... ಆರು ತಿಂಗಳೊಳಗೆ ನಾನು ಸಾಯ... ವುದು ನಿಶ್ಚಯವೆಂದು ಕೈಬಿಟ್ಟರಿ. ಎಂ... ನಿಂದಲೂ, ಪತ್ತೇದಾರಿ ಕಾದಂಬರಿ... ನ್ನೋದಿ, ನಾನು ಕೊಲೆಪಿಶಾಚಿಯಂ... ಕೊಲೆಮೊಕದ್ದಮೆಗಳ ವಿಚಾರಣೆ ... ಮಾನಗಳನ್ನು ನೋಡಿ, ಬುದ್ಧಿಯೊಂ... ದ್ದರೆ ಕೊಲೆಮಾಡಿಯೂ ಜೀವಿಸುವು... ಕಷ್ಟವಲ್ಲವೆಂದು ನಂಬಿದೆನು. ಅ... ಕ್ಕಾಗಿ ಮಾವನ ಮಾತು ಕೇಳಿ, ಹೀ... ಶ್ರೀಮಂತರನ್ನು ಕೊಂದಿಕ್ಕಿದೆನು... ಹತ್ತೆಂಟುವರ್ಷ ಬದುಕುವವನಾಗಿದ್ದ... ಈ ಕೊಲೆಮಾಡುತಿದ್ದೆನೇ? ನಿಮ್ಮ ಚಿ... ತ್ಸೆ ತಯಾರಾಗುವಾಗ ಮರಣಕಾಲವೊ... ಗುವುದು; ಮರಣಕಾಲವೊದಗುವಂ... ದ್ದಾಗ ನಿಮ್ಮಲ್ಲಿ ಚಿಕಿತ್ಸೆಯೇ ಇದ್ದಿ... ಎಂದು ಗಟ್ಟಿಯಾಗಿ ಗರ್ಜಿಸಿ, ವೈ... ನನ್ನೂ, ಮಾವನನ್ನೂ, ಚುರಚು... ನೋಡುತಿದ್ದಂತೆ, ದೊಪ್ಪನೆ ಬಿದ್ದು ಬಿಟ್ಟನು.

ಯಮನು ಆರು ತಿಂಗಳಲ್ಲೋ ಹತ್ತೆಂಟು ವರ್ಷಗಳಲ್ಲೋ ಇವನನ್ನು ನುಂಗುವ ಭಾಗ್ಯವನ್ನು ಕಟ್ಟಿಕೊಂಡು ಮ ವ್ಯರ್ಥವಾಯಿತು. ಅವನನ್ನು ಫಾಸೀ ಪಾಶವು ಬಿಗಿಯಲೂ ಇಲ್ಲವೆಂಬುದು ನಿಜ; ಆಗಲೆ, ನಿಂತಲ್ಲೇ ಬಿದ್ದು ಅಳಿದ ಕಾರಣ ಇವನ ಅಕಾಲಮರಣವು ಯಮನ ದುರ್ಭಾಗ್ಯವಲ್ಲವೆ?

೯. ಕೊರವಂಜಿಯ ಕರಾಮತ್ತು

'ವೇಂಕಟಗಿರಿ ಮಹಾತ್ಮೆ'ಯನ್ನು ಮನೆಯಲ್ಲಿ ಓದುತಿದ್ದರು. ಪದ್ಮಾವತಿಗೆ ವಿರಹತಾಪದಿಂದ ಮೈ ಬಿಸಿಯಾಗಿ ಸ್ಮೃತಿತಪ್ಪಿದೆ; ಎಂತಹ ಚಿಕಿತ್ಸೆಗೂ ತಾಪವು ಸಮಾಧಾನ ಹೊಂದುತ್ತಿಲ್ಲ. ಆಗಲೆ ಅಲ್ಲಿಗೆ ಕೊರವಂಜಿಯು ಚಿತ್ತೈಸಿದಳು. ಎಲ್ಲವೂ ಕ್ಷಣದೊಳಗೆ ಗುಣವಾಯ್ತು; ವೇಂಕಟರಮಣನೆ ಕೊರವಂಜಿಯ ವೇಷದಲ್ಲಿ ಬಂದಿದ್ದನೆನ್ನಿ; ಆದರೂ, ಆ ಕೊರವಂಜಿಯೆ ನಮಗೆ ಮುಖ್ಯ. ಇವಳ ಸಂತತಿಯು ಈಗ ಎತ್ತಲೂ ಇದೆ. ಎಲ್ಲಿಂದ ಹೊರಟು, ಹೇಗೆ ಜೀವಿಸಿ, ಎತ್ತ ಸಂಚರಿಸಿ, ದುಃಖಶಮನಾರ್ಥವಾಗಿ ತನ್ನ ಜೀವನವನ್ನೆ ಅರ್ಪಿಸಿರುವ ಈ ಕೊರವಂಜಿಯರೆಂದರೆ, ಈ ಜಗತ್ತಿಗೇ ಒಂದು ಚಿಕಿತ್ಸೆ. ಅಪೂರ್ವ ಗಿಡಮೂಲಿಕೆಗಳನ್ನು ಮಾರುವುದು, ಶಕುನ ಹೇಳುವುದು, ಅಂಗೈ ಲಕ್ಷಣ ಹೇಳುವುದು ಇವೆಲ್ಲವೂ ಗೌಣ; ಯಾವ ರಾಗ, ಯಾವ ಧಾಟಿ, ಯಾವ ಅಭಿನಯ, ಯಾವಲ್ಲಿ ಯಾರೊಡನೆ ಎಂದಿರದೆ, "ಸಿಂಗಾರಪಾಟನಲೋ" ಎಂದು ಹಾಡಿದರೆ,—ದೇವರೇ ಗತಿ! ಈಗೊಮ್ಮೆ ಪದ್ಮಾವತಿಯು ಅವತಾರವನ್ನೆತ್ತಿ ಉದ್ಯಾನದಲ್ಲಿ ವಿಹರಿಸುತಿದ್ದರೆ, ನಮ್ಮೂರ ಕೊರವಂಜಿಯು ಅಲ್ಲೇ ಹಾಜರಾಗಿ,—ಹಾಡನ್ನು ಹಾಡಿ, ಗಂಡುಸರಾರೂ ಬಳಿಯಲ್ಲಿಲ್ಲವಾದಲ್ಲಿ,-ಎಷ್ಟೆಲ್ಲ ಶಕುನ ನುಡಿಯುವಳು! ಗಂಡನ ಪ್ರೀತಿಯ ಆಕರ್ಷಣ, ಮಕ್ಕಳ ಭಾಗ್ಯ, ಕುಬೇರನ ಸಂಪತ್ತು ಎಲ್ಲವನ್ನೂ ಭವಿಷ್ಯದಲ್ಲಿ ಕರುಣಿಸುವಳು. ಅತ್ತೆಯ ಕಾಟದಿಂದ ಸದ್ಯದಲ್ಲೇ ವಿಮೋಚನೆಯಾಗುವುದೆಂದೂ, ನಾದಿನಿಯ ಮೇಲೆ ಅವಳ ಅತ್ತೆಯ ಕಣ್ಣು ವಕ್ರವಾಗುವುದೆಂದೂ, ಕಾಶೀ ಪೀತಾಂಬರಗಳೂ ವಜ್ರದ ಕಡುಕುಗಳೂ ಅಲಂಕಾರಕ್ಕೊದಗುವುವೆಂದೂ, ಪದ್ಮಾವತಿಗೆ ತಿಳಿಸಿ, ಗಂಡನ ಮೇಲೆ ಕಣ್ಣಿರಲಿ, ಅವನ ಒಲಿಮೆ ಸದ್ಯಕ್ಕೆ ಬೇರೆ ಠಾಣ್ಯವನ್ನು ಹೊಂದಿದೆಯೆಂದೂ ಟೀಕಿಸಿ ಎಚ್ಚರಿಸಿ ಕೊರವಂಜಿ,—ತುಲಸೀಪೂಜೆಗಾಗಿ ಇಟ್ಟ ಚವಲದಿಂದ ಒಂದಾಣೆ ಈಸಿಕೊಂಡು, ತಾಂಬೂಲ ತುಂಬಿದ ಬಾಯ್ತೆರೆದು ನಕ್ಕು, ಗಂಟನ್ನೆತ್ತಿಕೊಂಡು

ಕೋಲೂರಿ, ನೆರೆಮನೆಯ ಭೂದೇವಿಯನ್ನು "ಅಮ್ಮಾ!" ಎಂದು ಕರೆದು "ಸಿಂಗಾರಪಾಟು" ಪ್ರಾರಂಭಿಸಲು ತೆರಳುವಳು.

ಪದ್ಮಾವತಿ, ಪ್ರಭಾವತಿ, ವಜ್ರವತಿ ಎಂಬೀ "ವತಿ"ಗಳು ಸವತಿಯರಂತೆ ಉದ್ಯಾನದಲ್ಲಿ ಅಡ್ಡಾಡುತಿದ್ದರು. ಪದ್ಮಾವತಿ ಮನೆಯಾಕೆ; ಪ್ರಭಾವತಿ ಅವಳ ಹಿಂದಿನ ಸಹಪಾಠಿ, ಇಂದಿನ ಅತಿಥಿ; ವಜ್ರವತಿ ಪದ್ಮಾವತಿಯ ಸೋದರತ್ತೆಯ ಮಗಳು. ಪದ್ಮಾವತಿಯ ವಿವಾಹದ ಮೊದಲು ಅವಳ ಜಾತಕವನ್ನು ವೆಂಕಟರಮಣನ ಜಾತಕದೊಡನೆ ಕೂಡಿಬರುವುದೋ ಎಂದು ನೋಡಿದ್ದರು. ಇಬ್ಬರೂ ಒಬ್ಬರಿಗೊಬ್ಬರೆಂಬಂತೆ ಜನನಗಳೆರಡೂ ತೋರಿದುವಾದರೂ, ಇಬ್ಬರ ತಾಯಂದಿರ ಮನಸ್ಸಿಗೆ ಅದೇನೋ ಸರಿಹೋಗದೆ, ವೇಂಕಟರಮಣನು ಪದ್ಮಾವತಿಕಲ್ಯಾಣವನ್ನೆ ಮಾಡಿಕೊಳ್ಳಬೇಕಾಯಿತು ಹೊರತು, ವಜ್ರವತಿಯ ಪ್ರೇಮದ ವಜ್ರಕವಚವನ್ನು ಧರಿಸಿಕೊಳ್ಳಲಾರದಾದನು; ಮದುವೆಯಾಗಿ ಒಂದು ವರ್ಷದಷ್ಟೆ ಆಗಿದೆ. ವಜ್ರವತಿ ಇನ್ನೂ ಅವಿವಾಹಿತೆ,– ಕನ್ಯೆಗೆ ವೆಂಕಟರಮಣನ ಗೆಳೆಯರಾರಾದರೂ ವರನಾದರೆ ಆಗಬಹುದಾಗಿದ್ದಿತು, ಆದರೆ ಅವನಿಗಿಂತ ಶ್ರೀಮಂತರಾಗಿದ್ದು ವಜ್ರದೋಲೆಯನ್ನೆ ವಧುವಿಗೆ ಒಪ್ಪಿಸುವನಾಗಬೇಕೆಂದು ಅವಳ ತಾಯಿಯ ಇಚ್ಛೆ. ದಸರೆಯ ಅವಕಾಶವಾದುದರಿಂದಲೂ ಪರಸ್ಪರ ದರ್ಶನದ ಅನುಕೂಲವೆಂದೂ ಮೂವರು "ವತಿ"ಗಳ ವಸತಿ ಈಗ ಇಲ್ಲಿಯೆ.

ವೆಂಕಟರಮಣನು ಒಂ
ಕಾರ್ಖಾನೆಯಲ್ಲಿ ಮುಖ್ಯ ಗುಮಾಸ್ತ
ಈಗ ಆಫೀಸಿಗೆ ಹೋಗಿರುವ
ಇಬ್ಬರು ಗೆಳತಿಯರು ಉದ್ಯಾನದ ಸ
ಪದಲ್ಲಿರುವರು; ಪದ್ಮಾವತಿ ಮಾ
ಏನನ್ನೋ ಎಣಿಸಿ, ಹಿಂಬಾಗಿಲಿನ ಬ
ನಿಂತಿರುವಳು. ವಿರಹತಾಪವಿಲ್ಲ, ವಿರ
ಚಿತ್ರವಷ್ಟೆ. ಆಗಲೇ ಕೊರವಂ
ಒಬ್ಬಳು ಅಲ್ಲಿಗೇ ಬಂದು "ಸಿಂಗಾ
ವಾಗಿ ಹಾಡಿದಳು. ಪದ್ಮಾವತಿ
ಮನಸ್ಸು ಚಂಚಲವಾಯಿತು. ಇತ್ತೀ
ಚೆಗೆ ಪತಿದೇವನು ಅದೇಕೋ ಅವ
ಕಡೆಗೆ ಅಷ್ಟು ಒಲಿದಿರಲಿಲ್ಲವೇಕ
ಯಾವಾಗ ಮಾತನಾಡಿಸಿದರೂ, ವ್ಯ
ನಾಗಿರುವನು. ಮಾತಿಗೆ ಸರಿಮಾತಿಲ್ಲ.
ನಕ್ಕುನುಡಿಯುವನು, ಮಾತಾಡಿದ
ಬೇಸರಗೊಳ್ಳುವನು. ಆ ಭಾವಗ
ಅವಳ ಮುಖದಲ್ಲಿ ಮೂಡಿದ್ದುವು. ಕೊ
ವಂಜಿ, ಪುರಾಣದ ಕೊರವಂಜಿಯ
ಸಂತಾನದವಳೇ; ಇದನ್ನು ಗ್ರಹಿ
ಕೊಂಡಳು.

ಹಸ್ತಲಕ್ಷಣ ನೋಡಿ ಹೇಳು
ನೆಂದಳು. ಪದ್ಮಾವತಿಗೆ ಮನವೊಪ್ಪದ
ಯಾವ್ಯಾವ ಅಂತಃಪುರಗಳಲ್ಲಿ ಮಹ
ರಾಣಿಯವರ ಕೈಗಳನ್ನು ನೋಡಿ ಅ
ವರ ಭಾಗ್ಯವನ್ನು ಓದಿ ಹೇಳಿರು
ನೆಂದಳು. ಪದ್ಮಾವತಿಯೇನೂ ಮಹ
ರಾಣಿಯಲ್ಲವಷ್ಟೆ. ಆದರೂ ತನ್ನ ಮನೆ
ತಾನು ರಾಣಿ; ಪತಿಗೆ ಮಾತ್ರ ರಾ
ಯಾಗಿಲ್ಲವೇಕೆ? ಇತರ "ವತಿ"ಗಳ ದೆ
ಯಿಂದಲೇನು? ಎಂಬ ಸಂದೇಹ
ಅವಳ ಮನಸ್ಸಿನಲ್ಲಿ ಮಿಂಚಿನಂತೆ ಬೆಳ

ಘಾಯವಾಯಿತು. ಕಾಲಾಣೆಗೆ ಭವಿಷ್ಯ ಹೇಳಬರುವುದೆಂದು ಕೊರವಂಜಿ ನುಡಿದುದೇ, ಪತಿಯು ಕಾಲಾಣೆಯಿಟ್ಟು ಕೊಂಡು, ಇವಳ ಮಾತಿನಲ್ಲಿ ಅನ್ಯಾಯವಿದ್ದರೆ ಇವಳನ್ನು ಧಿಕ್ಕರಿಸುವೆನೆಂದು, ಕೊರವಂಜಿಗೆ ಕೈತೋರಿಸಿದಳು.

"ಉತ್ತಮ ಕುಲವಮ್ಮಾ; ಒಮ್ಮೆ ಇದ್ದಂತೆ ಒಮ್ಮೆ ಇರುವುದಿಲ್ಲವಮ್ಮಾ; ನಾಳೆ ಏರು ಇಂದು ತಗ್ಗು, ನಾಳೆ ತಗ್ಗು ಇಂದು ಏರು. ಇಷ್ಟೆ ಅಮ್ಮಾ; ವಂಚನೆಯಿಲ್ಲ, ಮೋಸವಿಲ್ಲವಮ್ಮಾ; ಗಂಡನನ್ನೊಲಿಸಿಕೊಂಡು ಬಾಳುವೆಯಮ್ಮಾ, ಆಳುವೆಯಮ್ಮಾ" ಎಂದು ಕೊರವಂಜಿ ನುಡಿದು, ಕಾಲಾಣೆ ಈಸಿಕೊಂಡು, ತಾಂಬೂಲದ ಬಾಯ್ತೆರೆದು ನಕ್ಕು, ಉಳಿದ ಪತಿಯರ ಕಡೆಗೆಂದು, ಉದ್ಯಾನದಾಚೆಗೆ ಹೊರಟಳು.

ಪದ್ಮಾವತಿಯ ನೆನಪಿನಲ್ಲಿ, ಕೊರವಂಜಿಯ ಕೊನೆಯ ಮಾತು ಉಳಿಯಿತು. "ಗಂಡನನ್ನೊಲಿಸಿಕೊಂಡು ಬಾಳುವೆಯಮ್ಮ!" ಎಂದಳಲ್ಲ. ನಿಜ. ಈಗ ಅವನು ಒಲಿದಿಲ್ಲ. ಇನ್ನು ಒಲಿಸಿಕೊಳ್ಳಬೇಕು. ಬಂದೊಡನೆಯೆ, ಪ್ರಯತ್ನಿಸಬೇಕು ಎನ್ನುವುದರೊಳಗೆ, ಅವನೂ ಎದುರಿನ ಬಾಗಿಲಿಂದ ಬರುತಿದ್ದುದನ್ನೂ ಅವನೊಡನೆ ವಜ್ರವತಿಯು ಮಾತಾಡುತಿದ್ದುದನ್ನೂ ಕಂಡಳು. ಅವನು "ಏನೆನ್ನಲಿ; ನನ್ನ ಈ ಅವಸ್ಥೆಯನ್ನು ನೆನೆದರೆ, ನಾನು ವಿವಾಹವಾದುದೇ ಮೂರ್ಖತನ ಎನಿಸುತಿದೆ. ಇದು ವರೆಗೂ ನಾನು ಲಗ್ನಮಾಡಿಕೊಂಡಿಲ್ಲದಿದ್ದಲ್ಲಿ ಎಲ್ಲರಿಗೂ ಸುಖವಾಗಿದ್ದಿತು. ಈಗೇನು ಮಾಡಲಿ?" ಎಂದು ವಜ್ರವತಿಗೆ ಬೇಸರದಿಂದ ಖಿನ್ನನಾಗಿ ಹೇಳುತಿದ್ದ ಅವನ ಮಾತುಗಳು, ಹೂಬಳ್ಳಿ ಹಬ್ಬಿದ ಮಂಟಪದಾಚೆಯಿಂದ ಅವನಿಗೆ ಮರೆಯಾಗಿದ್ದ ಇವಳ ಕಿವಿಯನ್ನು ಕೊರೆದುವು.

ಅವರಿಬ್ಬರೂ ಮನೆಯೊಳಗೆ ನಡೆದರು. ಪ್ರಭಾವತಿ ಇಲ್ಲಿದ್ದು ಕಸೂತಿ ಕೆಲಸಧಲ್ಲಿದ್ದಳು. ಪದ್ಮಾವತಿಯು ಈ ಮಾತುಗಳಿಂದ ಗಾಯಗೊಂಡು, ಹೇಗೂ ಮಾಡಿ ವ್ಯಥೆಯನ್ನು ಅಡಗಿಸಿ, ನಸುನಗುತ್ತ ಹುಸಿ ನಗುತ್ತ, ಮನೆಸೇರಿ ಇವರ ಉಪಹಾರೋಪಚಾರ ಮಾಡಲು ಸಿದ್ಧಳಾದಳು. ಮಾತುಗಳನ್ನು ಮಾತ್ರ ಮರೆಯಲಾರಳು; ಕೊರವಂಜಿಯ ಧ್ವನಿ ಮರೆವುದರೊಳಗೆ ಕೇಳಿದ್ದ ಕರುಳು ಕೊರೆಯುವ ಮಾತುಗಳಿವು.

ರಾತ್ರಿಯಲ್ಲಿ ಹತ್ತು ಹೊಡೆಯಿತು; ಹನ್ನೊಂದಾಯಿತು. ಪತಿದೇವನು ಇನ್ನೂ ನಿದ್ದೆಹೋಗಿಲ್ಲ. ಸತಿ ಕೇಳಿದಳು: "ಇಡೀ ಹಗಲೂ ರಾತ್ರಿಯೂ ಹೀಗೆ ದುಡಿದರೆ ಹೇಗಾದೀತು? ಅಥವಾ, ನನ್ನೊಡನಾದರೂ ನಾಲ್ಕು ಮಾತಾಡಲು ಅವಕಾಶವಾದರೂ ಎಲ್ಲಿದೆ? ಸಾಕು ಮಾಡಿರಿ". ಪತಿದೇವನು, ಕಣ್ಣುಗಳನ್ನು ಕಿರಿದುಮಾಡಿ ಬೇಸರದಿಂದ, "ನೀನು ಮಲಗಿಕೊ. ನನಗಿಷ್ಟು ಅಗತ್ಯಕೆಲಸವಿದೆ. ಮುಗಿಸಿ ಬರುವೆನು" ಎಂದನು. ಪದ್ಮಾವತಿ, ಅಳುವಳೋ ಎಂಬಂತಾಗಿದ್ದಿತ್ತು; ಆದರೆ ಮಾತೆತ್ತದೆ, ಹಿಂದೆ ನಡೆದು, ಹಾಸಿಗೆಯಲ್ಲಿ ಪವಡಿಸಿದಳು.

ನಿದ್ದೆ ಹತ್ತಲಿಲ್ಲ. ಮೂರು ಗಂಟೆ ಹೊಡೆವಾಗಲೇನೋ ಪತಿದೇವನು, ಕಾಗದ ಲೇಖನಿಗಳ ವ್ಯವಹಾರವುಗಿಸಿ, ತಾನೂ ಮಲಗಿಕೊಂಡನು.

ಮರುದಿನ, ಬೆಳಗ್ಗೆ, ಉಳಿದಿಬ್ಬರೊಡನೆ ಕಿಂಚಿತ್ತಾದರೂ ಉಲ್ಲಾಸದಿಂದ ಆಡುತಿದ್ದವಳು, ಪ್ರಭಾವತಿಯನ್ನು ಕಾಣುತ್ತಲೆ, ಪುನಃ ಕಣ್ಣುಗಳನ್ನು ಕಿರಿದುಮಾಡಿಕೊಂಡು, ಬೇಸರ ಹತ್ತಿದವನಂತೆ,—"ಪೇಟೆಯಿಂದ ಕೆಲವು ಸಾಮಾನುಗಳನ್ನು ತರಬೇಕಾಗಿದೆ. ನಾಳೆಯೆ ಗೆಳತಿಯರು ಊರಿಗೆ ಮರಳುವರಂತೆ. ನಾವು ಪೇಟೆಗೆ ಹೋಗಿ ಬರುವೆವು" ಎಂದು ಅವಳು ಹೇಳಿದುದಕ್ಕೆ,—"ಏನೂ ಬೇಡ. ಸಾಮಾನಿನ ಪಟ್ಟಿ ಬರೆದುಕೊಡು. ಎಲ್ಲವನ್ನೂ ಕಳುಹಿಸುತ್ತೇನೆ" ಎಂದಷ್ಟೆ ಗಂಭೀರವಾಗಿ ನುಡಿದನು. ಅವಳ ಮಾತು ಕೇಳಿದರೇ ಒಲ್ಲದವನಂತೆ ಅವನ ಸ್ವರ. ಅವರಿಲ್ಲದಿದ್ದಲ್ಲಿ, ಹೆಂಡತಿಯನ್ನು ಬೈದು ಭಂಗಿಸಿ ಒಡೆದು ಬೀಳಿಸುತಿದ್ದನೋ ಏನೋ ಎನ್ನುವ ಅಭಿನಯಸೂಚಕವಾದ ನುಡಿ, ಧ್ವನಿ, ನೋಟ ಎಂದೇ ಅವಳ ಭಾವನೆ.

ಕೊರವಂಜಿಯ ಮಾತಿನಿಂದೀಚೆಗೆ ನಡೆದುದೆಲ್ಲವೂ ಅವಳ ಮನಸ್ಸನ್ನು ಖಂಡಿಸುತ್ತಿರಲು, ಹೃದಯವು ಕತ್ತರಿಸಿಹೋಗುತ್ತಿರಲು, ಗೆಳತಿಯರೆದುರಲ್ಲಿ ಎಷ್ಟು ಮರೆಯಲ್ಲಿರಿಸಿದರೂ, ನೆರೆಯವರಲ್ಲಿ ಅನುಭವಸ್ಥೆಯರ ಕಣ್ಣಿಗೆ ಇವಳ ಮುಖಮುದ್ರೆಯು ಹೇಗೆ ತೋರುತ್ತಿದ್ದಿತು? ನೆರೆಮನೆಯ ನಾಗಮ್ಮನು ಇಂತಹ ರೂಢಿಗಳನ್ನೆಲ್ಲ ಚೆನ್ನಾ.... ನ್ನಾ....ನ್ನಾಗಿ ಬಲ್ಲವಳು.

"ಏನಮ್ಮಾ ಪದ್ಮಾ, ಮಗೂ; ಮದುವೆಯಾಗಿ ಒಂದು ವರ್ಷವಾಗಲಿಕ್ಕಾಯ್ತು. ತಾಯಿಮನೆಗೆ ಯಾವಾಗ?"

"ಏಕಮ್ಮ, ನನಗಿಲ್ಲೇನು ಕಡಿಮೆ?"

"ಕಡಿಮೆಯೇನೂ ಇಲ್ಲದಿರಬಹುದು ಮಗೂ; ಇನ್ನೂ ನಿನಗೆ ಮಗು ಹುಟ್ಟಲ್ಲ. ಮಗುಹುಟ್ಟಿದ ಮೇಲೆ ಮತ್ತೆ ತಾಯ್ಮನೆಗೆ ಹಾಗೆ ಹೀಗೆ ಹೋಗಿ ಬರುವುದಕ್ಕಾಗುತ್ತಿದೆಯೆ? ಅದಕ್ಕಾಗಿ ಕೇಳಿದೆ ಎಂದರೆ?"

ಪದ್ಮಾವತಿ ನಾಚಿಕೊಂಡಳು. ನಸುನಕ್ಕಳು.

"ಬೇರೇನೂ ನಾಚಿಕೆ ಬೇಡ, ತಾಯಿ. ಕಾಮನಂತಹ ಗಂಡನಿದ್ದಾನೆ. ಮಗು ಆಗುವಾಗ ಆಗುವುದು. ಹೀಗೆ, ನಿನ್ನ ವಯಸ್ಸಿನವರ ಮನಸ್ಸಿನಲ್ಲಿರುವ ಮಾತುಗಳನ್ನಾಡಿದೆ. ಅಷ್ಟೆ. ಅವನನ್ನು ಆಳುವ ರಾಣಿಯೇ ನೀನಾಗಿದ್ದಿ; ನಿನಗೊಲಿದಿರುವ ಅವನೇ ಇದ್ದಾನೆ. ನಿನಗಿನ್ನು ಕಡಿಮೆಯಿದೆಯೇ? ಹಂ. ಹಂ" ಎಂದು ನಾಗಮ್ಮನು ನಕ್ಕು ಮರೆಯಾದಳು.

ಪುನಃ ಕೊರವಂಜಿಯ ಮಾತು! ಸೀರೆಯ ಸೆರಗಿಗೆ ಆ ಮಾತುಗಳನ್ನು ಅವಳು ಕಟ್ಟಿಕೊಂಡಿರಲಿಲ್ಲವಾದರೂ, ಸೆರಗಿನಂತೆ ಆ ಮಾತು ಅವಳನ್ನು ಬಳಸುತ್ತ ಕೊರಗಿಸುತಿದ್ದಿತು.

ಕಾರ್ಖಾನೆಯ ಆಳು ಒಂದು ಚೀಟನ್ನು ತಂದು ಕೊಟ್ಟನು. "ನಿನ್ನ ಇಬ್ಬರು ಗೆಳತಿಯರೂ ಊರಿಗೆ ಹಿಂತಿರುಗುವ ಹಾಗೆ ಅವರಿಗೆ ತಂತೀವಾರ್ತೆ ಬಂದಿದೆ. ಲಗ್ನವಿಚಾರವೇನೋ ಇರಬಹುದು. ಅವರೊಡನೆ ನಾನೂ ಹೋಗುತ್ತೇನೆ. ಕಾರ್ಖಾನೆಯ ಕೆಲಸವೂ ಸ್ವಲ್ಪವಿದೆ. ಅದನ್ನು ಮುಗಿಸಿಕೊಂಡು ಆರೆಂಟು ದಿನಗಳಲ್ಲಿ ಬರುವೆನು. ಅದುವರೆಗೆ ಖರ್ಚಿಗಾಗಿ 20 ರೂಪ್ಯಾಕಳುಹಿಸಿದ್ದೇನೆ. ಜಾಗ್ರತೆಯಾಗಿರು". ಎಂದಿಷ್ಟೇ ಪತಿದೇವನ ಅಪ್ಪಣೆಯೊಡನೆ ಸಂದೇಶ.

ಚೀಟು ತಲಪಿದುದು ನಾಲ್ಕು ಗಂಟೆಗೆ; ನಾಲ್ಕೂವರೆಗೆ ಅಂದು ಹೊರಡುವ ಕೊನೆಯ ಬಸ್ಸು ನಗರಕ್ಕೆ ಹೊರಡುವುದು. ಅದರಲ್ಲೇ ಗಂಡನೂ ಇಬ್ಬರು ಗೆಳತಿಯರೂ ಪ್ರಯಾಣ ಮಾಡುವರು. ಅವರು ಮನೆಯಲ್ಲಿದ್ದಾಗಲೆ ಮನೋವ್ಯಥೆಯಿಂದ ಕರುಳು ಬೇಯುತಿತ್ತು. ಈಗ, ಒಬ್ಬಳೇ ಮನೆಯಾಳಿನೊಡನಿದ್ದು ಆರೇಳು ದಿನಗಳ ವರೆಗೆ ವ್ಯಥೆ ಸೈರಿಸುವುದು ಹೇಗೆ? ಕೊರವಂಜಿಯ ಮಾತು, ಗಂಡನು ಪದ್ಮಾವತಿಗೆಂದ ಮಾತು, ಅವನು ತನ್ನೊಡನೆ ಎರಡೂ ಸಲ ಆಡಿದ ರೀತಿ, ನಾಗಮ್ಮನ ನುಡಿ, ಈ ಚೀಟಿನ ಒಕ್ಕಣೆ—ಇಷ್ಟೆಲ್ಲವೂ ಒಂದು ಸರಣಿಯಾಗಿ, ಅವಳ ಕೊರಳನ್ನೊತ್ತುವ, ಎದೆ ಬಿಗಿಯುವ ಸರಪಣಿಯಾಗಿ ತೋರಿದುವು. ಸಂಜೆ ಹೊತ್ತಿಗೆ, ಮನೆಯಾಳಿಗೆ "ಅವರು ನಗರಕ್ಕೆ ಹೋಗಿದ್ದಾರೆ. ನನಗೆ ನಾಳೆ ಬೆಳಗ್ಗಿನ ಬಸ್ಸಿನಲ್ಲಿ ಬರಹೇಳಿದ್ದಾರೆ. ನಾನು ಬರುವ ವರೆಗೆ ಮನೆ ಕಾದಿರು." ಎಂದು ಮೊದಲಾಗಿ ತಿಳಿಸಿದಳು.

ರಾತ್ರಿಯಲ್ಲಿ ನಿದ್ರೆ ಹತ್ತಿದುದು; ತಲೆ ನೋವು ಬಹಳ; ಎದೆ ಬಡೆಯುವುದೂ ವಿಶೇಷ.

ಬೆಳಗಾಗುತ್ತಲೆ, ಮೋಟರ ಆಫಿಸಿನಿಂದ ನಗರಕ್ಕೆ ಟಿಕೇಟು ತರಿಸಿಕೊಂಡಳು. ಚೊಕ್ಕ ಉಡುಗೆ ಧರಿಸಿ, ಇಪ್ಪತ್ತು ರೂಪ್ಯಾಗಳನ್ನು ಸಂಗಡ ಇಟ್ಟುಕೊಂಡು, ಆಳನ್ನು ಮನೆಕಾವಲಾಗಿರಿಸಿ, ಮನೆಯಿಂದ ಹೊರಟು, ನಾಗಮ್ಮನನ್ನು ಕಂಡು, "ಅಮ್ಮಾ, ಹಿರಿಯರ ಮಾತು ಸುಳ್ಳಾಗುವುದೇ? ಕಾರ್ಖಾನೆಯ ಕೆಲಸಕ್ಕಾಗಿ ನಿನ್ನೆ ನಮ್ಮ ತಾಯ್ಮನೆಯ ಊರಿಗೆ ಹೋಗುವಾಗ ರಾಯರು ನನಗೆ ಈ ದಿನ ಹೊರಟು ಬಾರೆಂದರು. ಹೋಗಿ ಬರುತ್ತೇನಮ್ಮಾ" ಎಂದು ತಿಳಿಸಲು, ಅವಳು "ಅಲ್ಲವೆ ಮಗು! ನಾನು ಹೇಳಿಯೆ ಇದ್ದೆನಲ್ಲ,— ಅವನನ್ನಾಳುವ ರಾಣಿಯೇ ನೀನಾಗಿದ್ದಿ, ನಿನಗೊಲಿದಿರುವ ಅವನೇ ಇದ್ದಾನೆ ಎಂದು? ಹೋಗಿಬಾರವ್ವ!" ಎಂದು ಅವಳೂ ಹರಸಿದಳು. ಚಮತ್ಕಾರವಲ್ಲವೆ?

ಬಸ್ಸಿನಲ್ಲಿ ಪದ್ಮಾವತಿಯ ನಾಡಿಯ ಬಡಿತವು ಬಲವಾಯಿತು; ಮೈ ಬಿಸಿಯಾಯಿತು; ತಲೆ ಬಸ್ಸಿನ ವೇಗದಿಂದ ಇನ್ನೂ ಪ್ರಬಲವಾಗಿ ಸುತ್ತಾಡುತಿದ್ದಂತೆ ತೋರಿತು. ಬಸ್ಸು ನಗರಕ್ಕೆ ತಲಪಿತು.

ಹನ್ನೆರಡು ಹೊಡೆಯಿತೆಂದು "ಢಮ್" ಎಂಬ ತೋಫಿನ ಶಬ್ದವು

ನನ್ನನ್ನು

ಕೇಳುವ ಹೊತ್ತಿಗೆ, ನಗರದ ನಡುಮಧ್ಯೆ ಒಂದು ಆಫೀಸಿನ ಬಳಿ ಎಂದೂ ಹಳ್ಳಿ ಬಿಟ್ಟು ಹೊರಡದ ಹುಡುಗಿಯನ್ನು, ಬಸ್ಸು ತಂದು ಇಳಿಸಿದರೆ, ಅವಳ ಪಾಡೇನು? ದೇಹವೆಲ್ಲ ಇಷ್ಟರಲ್ಲೆ ನಡುಗುತ್ತಲಿದ್ದು, ಬಿಸಿಲಿಗಿಂತ ಮೈ ಬಿಸಿಯಾಗಿರುವ ಪದ್ಮಾವತಿಯು ನಗರದಲ್ಲಿಳಿದಳು ನಿಜ, ಎತ್ತ ಹೋಗುವಳು? ನಿನ್ನೆ ಮಧ್ಯಾಹ್ನದಿಂದ ಆಹಾರ ಮುಟ್ಟಿದುದಿಲ್ಲ. ನೀರನ್ನೆ ಆದರೂ ಎಲ್ಲಿ ಬೇಡುವಳು? ಗಂಡನೆಲ್ಲಿ ಎಂದು ಹೇಗೆ ಹುಡುಕುವಳು? ದೇವರೇ ಗತಿ.

ದೇವರಲ್ಲ,—ಬಸ್ಸು ನಿಂತೊಡನೆ, ತಾನು ಮುಂದೆ-ತಾನು ಮುಂದೆ ಎಂದು ಬರುವ ಜಟ್ಕಾಗಾಡಿಯವರು! ಜಟ್ಕಾದವನು ಬಂದು "ಸವಾರಿಯಿದೆ ಏನಮ್ಮಾ?" ಎಂದನು. ಏನು ಉತ್ತರ ಕೊಡುವಳು? ಅಷ್ಟರಲ್ಲೇ, ಅವಳ ಕಣ್ಣೆದುರಿಂದ ಮುತ್ತೊಂದು ಮೋಟರು ಹಾದುಹೋಯಿತು. ಆದಾರು ಮೋಟರಿನಲ್ಲಿ? ಹೌದು, ಅವನೇ, ಅವಳ ಪತಿ! ದೇವರೊಲಿದನು.

ಪದ್ಮಾವತಿ ಗಾಡಿ ಹತ್ತಿ "ಅಕ್ಕೋ! ಆ ಮೋಟರು ಕಂಡ್ಯಾ? ಕೆಂಬಣ್ಣದ್ದು. ಅದಕ್ಕೆ ಹಿಂಬಾಲಿಸಿ ನಡೆ. ಅದೆಲ್ಲಿ ತಂಗುವುದೋ ಅಲ್ಲೇ ನನ್ನನ್ನಿಳಿಸು" ಎಂದಳು.

ಗಾಡಿಯವನಿಗೆ ಸ್ಪರ್ಧೆಯಾಟವೆಂದರೆ, ಕುದುರೆ, ಗಾಡಿ, ಸವಾರಿ, ತಾನು, ಒಂದರ ಆಸೆಯೂ ಇಲ್ಲ. ಮೋಟರನ್ನು ಕಣ್ಣೆದುರಲ್ಲಿಟ್ಟೇ ಗಾಡಿ ಓಡಿತು; ಮೋಟರು ಎಷ್ಟು ನಿಧಾನವೆಂದರೂ ಹತ್ತು ನಿಮಿಷ ದೂರದಲ್ಲಿದೆ.

ಮೋಟರು ಒಂದು ಕಟ್ಟಡದ ಬಳಿ ನಿಂತಿತು. ಅದರಿಂದಿಳಿದು ಯುವಕನೊಬ್ಬನು ಕಟ್ಟಡದೊಳಗೆ ನುಗ್ಗಿದನು. ಆದಾಗಿ ಕೆಲನಿಮಿಷಗಳಲ್ಲೇ ಗಾಡಿಯೂ ಅಲ್ಲೇ ನಿಂತಿತು; ಅದರಿಂದ ಯುವತಿಯೊಬ್ಬಳು ಇಳಿಯಬೇಕಾಗಿದ್ದಿತು. ಅವಳು ಸ್ವೇಚ್ಛೆಯಿಲ್ಲದೆ ಇಳಿದಂತೆಯೂ, ಆ ಕಟ್ಟಡದ ಎದುರು ಹಲಗೆಯಲ್ಲಿ ದೊಡ್ಡ ಅಕ್ಷರದಲ್ಲಿ "ವಜ್ರ...." ಎಂದು ಬರೆದುದನ್ನು ಅವಳು ಓದಿದಂತೆಯೂ ಕಂಡವರಿಗೆ ತೋರಿತು. ಅವಳು ಮಾತ್ರ ಕಟ್ಟಡದ ಮೆಟ್ಟಿಲ ಬಳಿಯಲ್ಲೆ ಪ್ರಜ್ಞಾಶೂನ್ಯಳಾಗಿ ಬಿದ್ದಳು.

ಗಾಡಿಯವನು (ಬಾಡಿಗೆಯ ಹಣಕ್ಕಲ್ಲದಿದ್ದರೂ) ಅಮ್ಮನು ಬಿದ್ದಳೆಂದು ಕೂಗಿದನು. ಮೇಲ್ಮಹಡಿಯಿಂದ ಸ್ತ್ರೀಯರಾರೋ ಬಂದು ಅವಳನ್ನೆತ್ತಿಕೊಂಡು ಹೋದರು. ಗಾಡಿಯವನು "ವಿಚಿತ್ರ-ನನ್ನ ಹಣೇ ಬರಹ" ಎನ್ನುತ್ತ, ತಲೆಯ ಮೇಲೆ ಕೈಯಾಡಿಸಿ ಅಲ್ಲೇ ನಿಂತನು. ಬಡಕೂಲಿಗಾಗಿ ಬಂದವನಾದರೇನು? ಮನುಷ್ಯನಲ್ಲವೆ?

ಅರೆತಾಸಿನ ತರುವಾಯದಲ್ಲಿ—"ಭಯವಿಲ್ಲ. ಚೇತರಿಸಿಕೊಂಡಳು" ಎಂದು ಯಾರೋ ನುಡಿಯುತಿದ್ದಂತೆಯೂ, ಸುತ್ತಲೂ ಎಂತಹದೋ ಒಂದು ಬಗೆಯ ತೀಕ್ಷ್ಣ ವಾಸನೆಯ ಗಾಳಿ ಬೀಸುತಿದ್ದಂತೆಯೂ ಪದ್ಮಾವತಿಗೆ ತಿಳಿದುಬಂತು. ನಿಧಾನ ಕಣ್ತೆರೆದಳು. ಇದಿರಲ್ಲಿ ಯಾವನೋ ವೈದ್ಯನು ತನ್ನ ಎಡಗೈಯ ನಾಡಿಬಡಿತವನ್ನು ಎಣಿಸುತಿದ್ದಂತೆ ತಿಳಿದಳು.

ಮಾತಾಡಲೆತ್ನಿಸಿ,—“ನಾನೇಕೆ ಬಂದೆನು?” ಎಂದಳು.

“ಚೆನ್ನಾಯಿತು. ನಾನೇ ಇಲ್ಲಿಗೆ ಕರೆಸಿಕೊಳ್ಳುತಿದ್ದೆ. ಆದರೂ, ನೀನೇಕೆ ಇಷ್ಟು ಬೆದರಿ ಬಂದೆ? ನನ್ನನ್ನೆ ಹೇಗೆ ಹುಡುಕಿಕೊಂಡೆ? ಪದ್ಮಾ, ಬಹಳ ದಣಿದು ಹೀಗಾಯ್ತಲ್ಲವೆ?” ಎಂದು ಅವಳ ಪತಿಯೇ ಅವಳ ಬಳಿಗೆ ಬಂದು ನುಡಿದನು. ಅವನ ಮುಖದ ಮೇಲೆ ಪಶ್ಚಾತ್ತಾಪ, ಕರುಣೆ, ಪ್ರೀತಿ ಎಲ್ಲವೂ ಅಂಕಿಸಿದಂತಿದ್ದಿತು.

ಈಗ ವೃದ್ಧನಾದ ವೈದ್ಯನ ಮಾತು. “ಮದುವೆಯಾದ ಬಳಿಕ, ಹೆಂಡತಿಯಿಂದ ಅಡಗಿಸಿಡುವುದುಂಟೆ? ಅವಳಿಗೆ ತಿಳಿಸಿದ್ದರೆ ಇಷ್ಟೆಲ್ಲ ರಗಳೆಗೆ ಕಾರಣವಿರುತಿತ್ತೇ? ಹೇಗೂ ಆಗಲಿ. ಒಳಿದೇ ಆಯಿತು. ನೀವಂತೂ ಗಂಡ ಹೆಂಡರು. ನೀನು ರಾಜನಾದರೆ, ಅವಳು ರಾಣಿ; ನಾನೇಕೆ ಇಲ್ಲಿ ನಡುವೆ ಬಾಯಿ ಹಾಕಬೇಕು. ನೀವು ನೀವೇ ಮಾತಾಡಿ ಕೊಳ್ಳಿರಿ. ಇನ್ನು ನಿಜಸ್ಥಿತಿ ಮಾಜದೆ ಹೇಳದಿರಬಾರದು.”

“ಪದ್ಮಾ, ನನ್ನ ಕಣ್ಣು. ಆರು ತಿಂಗಳಿಂದಲೂ ದೃಷ್ಟಿ ಕೆಡುತ್ತಾ ಬಂದಿದ್ದಿತು. ಕಳೆದ ವಾರ ಊರ ಆಸ್ಪತ್ರೆಯಲ್ಲಿ ಪರೀಕ್ಷೆಮಾಡಿಸಿದೆ. ಒಂದು ತಿಂಗಳಲ್ಲೇ ಕುರುಡಾದೀತು ಎಂದರು. ಕಾರ್ಖಾನೆಯ ಕೆಲಸವೆಂದು ಆಗಾಗ ಇಲ್ಲಿಗೆ ಬರುತಿದ್ದುದು ಅಲ್ಲಲ್ಲಿ ವೈದ್ಯರಿಂದ ದೃಷ್ಟಿಪರೀಕ್ಷೆ ಮಾಡಿಸುವುದಕ್ಕಾಗಿ ಹೊರತು ಕಾರ್ಖಾನೆಯ ಕೆಲಸವೇನೂ ಇರಲಿಲ್ಲ. ಫಾಸೀ ಶಿಕ್ಷೆ ನಿಶ್ಚಿತವಾದರೆ ಕೈದಿಯ ಸ್ಥಿತಿ ಹೇಗಾಗುತ್ತಿದೆಯೋ ಅದಕ್ಕಿಂತ ಸಾವಿರಮಡಿ ನನ್ನ ವ್ಯಥೆ ಹೆಚ್ಚಾಗುತಿದ್ದಿತು. ಕಣ್ಣಿದ್ದರೇ ಗುಮಾಸ್ತ, ಇಲ್ಲದಿದ್ದರೆ...? ವಜ್ರವತಿಗೆ ಇದನ್ನು ತಿಳಿಸಿದ್ದೆ. ಈಗಲೇ ಇಲ್ಲಿಗೆ ಪರದೇಶಗಳಲ್ಲಿ ಕಲಿತ ನಿಪುಣರಾಗಿದ್ದ ನೇತ್ರವೈದ್ಯರು ಉಳಕೊಂಡಿದ್ದರೆಂದು ಅವಳಿಂದ ತಿಳಿದೆ. ಅವಳಿಗೆ ಇಲ್ಲೇ ವಿವಾಹವಾಗಲಿದೆ ಎಂದು ತಿರುಗಿ ಬರಹೇಳಿದ ವಾರ್ತೆ ನಿನ್ನೆ ತಲಪುತ್ತಲೇ ಅವಳ ಜತೆಯಲ್ಲಿ ಅವಳನ್ನು ಇಲ್ಲಿ ಮುಟ್ಟಿಸುವ ನೆವದಿಂದ ಇತ್ತ ಬಂದೆ. ಈ ಮನೋವ್ಯಥೆಯನ್ನು ನಿನಗೆ ಹೇಳಿ ನಿನ್ನ ಕೋಮಲಹೃದಯವನ್ನು ವ್ಯರ್ಥವಾಗಿ ದುಃಖಗೊಳಿಸುವುದು ಬೇಡವೆಂದಿದ್ದೆ. ನನ್ನಲ್ಲಿ ಮೊದಲಿಂದಲೇ ಇದ್ದ ದೃಷ್ಟಿಮಾಂದ್ಯವು ಚಿಕಿತ್ಸೆಹೊಂದುವ ಮೊದಲೇ ನನಗೆ ವಿವಾಹವಾಗಿದ್ದಿತೆಂದು ಬಹಳವಾಗಿ ನೊಂದುಕೊಂಡಿದ್ದೆ. ನಮಗಿಬ್ಬರಿಗೆ ಈ ನನ್ನ ಸ್ಥಿತಿಯಲ್ಲಿ ಏಕೆ ವಿವಾಹವಾಗಿದ್ದಿತೆಂದೇ ನೊಂದೆನು. ನಾನು ಹಾಳಾಗಿದ್ದರೆ, ನಿನಗೆ ಗತಿ.. ಯಾ.. ರಾ... ಗುತಿದ್ದರು? ಇನ್ನು ಭಯವಿಲ್ಲ. ಕಣ್ಣ ಮೇಲೆ ಬೆಳೆದ ಪರೆಯನ್ನು ಕತ್ತರಿಸಿರುವರು. ಕೆಲದಿನ ನಿನ್ನ ಆರೈಕೆಯಲ್ಲಿದ್ದರೆ, ಎಲ್ಲವೂ ಕ್ಷೇಮವಾಗುವುದು” ಎಂದು ನಗುತ್ತ, ಕಣ್ಣೀರಿಡುತ್ತ ಹೇಳಿದನು.

ಗಾಡಿಯವನು, "ರಾಯರೆ, ಹೋಗೋಣವೆ?" ಎಂದನು.

ಇಬ್ಬರೂ ಗಾಡಿಹತ್ತಿದರು. ಗಾಡಿಯವನನ್ನು ತಮ್ಮೂರ ಮನೆಯ ತನಕ ತಂದು ಊಟಮಾಡಿಸಿ, ಕೈತುಂಬ ಬಾಡಿಗೆ ಕೊಟ್ಟು ಕಳಿಸಿದರು.

ನಾಗಮ್ಮನು "ತಾಯ್ಮ ನ ಹೋಗಿ ಬಂದೆಯಾ, ಮಗೂ?" ಎ ವಿಚಾರಿಸಿದಳು.

ಆಗಲೂ, ಹತ್ತಿರದ ಅಂಗಳ ಕೊರವಂಜಿಯ 'ಸಿಂಗಾರ' ಹಾ ಕೇಳಿಸುತಿದ್ದಿತು.

೧೦. ಉಪವಾಸದ ಉಪಕಾರ

ದಾರಿಯುದ್ದಕ್ಕೂ ಇದಿರಿದಿರಾಗಿ ಹತ್ತಿರಹತ್ತಿರವಾಗಿ ಉಪಹಾರಗೃಹಗಳೇ ಇದ್ದು, ಅವುಗಳಲ್ಲಿಂದ ತಿಂಡಿ ತೀರ್ಥಗಳ ವಾಸನಾವಿಲಾಸವು ಹರದಾರಿಯುದ್ದಕ್ಕೂ ಹರಡಿದರೆ,—ಉಪವಾಸಿಯಾಗಿರುವ ನಿರುದ್ಯೋಗಿಯ ಕಣ್ಣು ಮೂಗು ನಾಲಗೆಗಳ ಅವಸ್ಥೆಯನ್ನು ಯಾರು ಬಣ್ಣಿಸಲಾಪರು? ಹುಟ್ಟಿದಂದಿನಿಂದ ಉಂಡಿಲ್ಲವೆಂಬಂತೆ, ಖಾಂಡವ ವನವನ್ನೆ ದಹಿಸ ಹೊರಟ ಅಗ್ನಿಯ ಜ್ವಾಲೆಯು ಅವನ ಹೊಟ್ಟೆಯೊಳಗಿಂದ ಧಗಧಗನೆ ಉರಿದೇಳದೆ? ಹಾಗಿರುವಾಗಲೆ, ನೂರಾರು ಜನರು, ತನಗಿಂತ ಕೀಳು ಸ್ಥಿತಿಯಲ್ಲಿದ್ದೂ ಅಂದು ದುಡಿದುದರಿಂದ ಕೆಲವು ಕಾಸುಗಳನ್ನು ತೆತ್ತು, ತೇಗಿ ಚಪ್ಪರಿಸಿ ಬರುವುದಕ್ಕೆಂದು ಈ ಹೊಟ್ಲುಗಳಲ್ಲಿ ನುಗ್ಗುವಾಗ, ಇವನ ಕಡೆಗೆ ನೋಡಲೊಲ್ಲರೆಂದರೆ, ಅವನೇನೆಂದು ಭಾವಿಸಬೇಕು?

ಪಾಪ, ಇವನ ಚೀಲದ ಆಳದ ಒಂದಾಣೆಯದೊಂದು ನಿಕ್ಕಲ್‌ನಾ ಏದೆ. ಅದನ್ನು ಕೊಟ್ಟು ಹಸಿವನ ತಣಿಸಬಹುದಾಗಿದ್ದಿತು; ಆದರೆ, ತಿ ಕೊನೆಯದಾಗಿ ಉಳಿದ ಈ ನಾಣ್ಯ ಖರ್ಚಾದರೆ, ಮತ್ತೆ ಒಂದೂ ನಾ ವಿಲ್ಲವೆಂದೇ ಅವನಿಗೆ ಹುಚ್ಚು ಹಿಡಿಯ ಆ ಭಯಂಕರ ಅವಸ್ಥೆಗೆ ಬೆದರಿ ಇವನು ಈ ಆಣೆಯನ್ನು ಪ್ರಯಿಸಿ ಜೀವವೇ ಅದೆಂಬಂತೆ ಅದನ್ನು ಬಚ್ಚಿ ರುವನು; ಹಸಿವು ಬಾಧಿಸಿದಂತೆ ಅ ನ್ನೊಮ್ಮೆ ಮುಟ್ಟಿನೋಡುವನು,—ಧೈ ಕ್ಕಾಗಿ! ಒಂದಾಣೆಯಿಂದ ತಾನೆ ಎ ಮಟ್ಟಿಗೆ ಇವನ ಹಸಿವು ಸಮಾಧ ಹೊಂದಬಹುದು?

ಆದರೂ ನೂರಾರು ಮ ದೀನರೂ ಒಂದಲ್ಲ ಮತ್ತೊಂ ಹೊಟೇಲಿನೊಳಗೆ ನುಗ್ಗುತ್ತಿರುವುದ ಕಂಡು, ಇವನು ಹುಚ್ಚನಂತಾದ

ಇವನೂ ಒಂದು ಉತ್ತಮ ಹೋಟ್ಲಿನಲ್ಲಿ ವಿಲಾಸಹೊಂದಲು ಒಳ ಹೊಕ್ಕು, ಚಂದ್ರಕಾಂತ ಶಿಲೆಯ ಹಲಗೆ ಮುಚ್ಚಿದ ಮೇಜಿನ ಬಳಿಕೂತು, ಬಾಗಿಲಲ್ಲೇ ಕಂಡ ಹತ್ತೆಂಟು ಬಗೆಯ ಖಾದ್ಯಗಳನ್ನೂ ತರಿಸಿಕೊಂಡು, ಎರಡು ಕಪ್ ಕಾಫಿ ಕುಡಿಯುವುದೆಂದು ನಿಶ್ಚಯಿಸಿದನು.

ಈ ಹರಿವಾಣಗಳಲ್ಲಿನ ತಿಂಡಿಯನ್ನು ತಿನ್ನುತಿರುವಂತೆ ಉಪವಾಸಿಗೆ ಸ್ವಲ್ಪ ದಣಿವು ಆರಲು, ಮನಸ್ಸಿನಲ್ಲಿ ಆಧೈರ್ಯ ಹೆಚ್ಚುವಂತಾಯಿತು. ಹಸಿವಿನ ಜ್ವಾಲೆಯು ಕಾಫಿ ಹೊಯಿದುಕೊಂಡ ಬಳಿಕ ತಾನೆ ನಂದಿ ಹೋಯಿತು.

ಒಂದೆರಡು ಹಣ್ಣುಗಳ ರುಚಿ ನೋಡ ಕುಳಿತನು. ಇವನ ಮೇಜಿನ ಇದಿರಲ್ಲಿದ್ದ ಕುರ್ಚಿಯ ಮೇಲೆ, ಶ್ರೀಮಂತನೊಬ್ಬನು ಒಂದು ಪತ್ರಿಕೆ ಓದುತ್ತಾಬಂದವನು ಬಂದಂತೆಯೆ ಕುಳಿತನು. ಅವನು ಪತ್ರಿಕೆಯನ್ನು ಬಿಡಿಸಿಕೊಂಡು ಓದುತ್ತಲೇ ಇದ್ದನು; 'ಅರ್ಧ ಕಪ್ ಚಾ' ಎಂದಷ್ಟೆ ಅಲ್ಲಿನ ಹುಡುಗನಿಗೆ ಹೇಳಿದನಲ್ಲದೆ, ಅತ್ತಿತ್ತ ನೋಡಲಿಲ್ಲ. ಅವನ ಈ ಮಾತು ಕೇಳುತ್ತಲೆ, ಉಪವಾಸಿಯ ಮನಸ್ಸಿನಲ್ಲೇ "ಉಳ್ಳಾಗ ಉಣಲಿಲ್ಲ, ಉಳ್ಳಾಗ ಉಡಲಿಲ್ಲ" ಎಂಬ ಗಾದೆಯ ನೆನಪಾಗಿ, 'ಹಣವಿದ್ದಾಗಲೆ ತಿಂದುಕೊಳ್ಳಬಾರದೇ? ಕಿಸೆಯಲ್ಲಿ ಒಂದಾಣೆ ಮಾತ್ರ ಉಳಿದಾಗ ಮತ್ತೇನನ್ನು ತಿನ್ನುವೆಯಂತೆ?"ಎಂದು ನಿರುದ್ಯೋಗಿಯ ಅಂತರಂಗವು ಶ್ರೀಮಂತನನ್ನು ಗದರಿಸಿತು. ಆದರೆ, ಅವನು ಮಾತ್ರ ಆ ಅರ್ಧ ಕಪ್ಪನ್ನು ಕಾದು ಕೂತನು. (ತಿಂಡಿ ತರಿಸದವರಿಗೆ, ತೀರ್ಥವು ಬೇಗನೆ ಸಿಗುವುದುಂಟೆ? ನಮ್ಮ ಹೋಟ್ಲುಗಳು ದೇವಸ್ಥಾನಗಳ ಹಾಗೆಯೇ ಇವೆ; ದಕ್ಷಿಣೆಕೊಡುವಂತಿಲ್ಲವಾದರೆ ಪ್ರಸಾದದ ಗಂಧವು ಸಿಗಲು ವಿಳಂಬವಾಗುತ್ತಿದೆಯಲ್ಲವೆ?) ಆದರೂ ಓದುತಿದ್ದ ಪತ್ರಿಕೆಯಿಂದ ಕಣ್ಣೆತ್ತಲಿಲ್ಲ.

ಇವನಿಗೆ ಮಾತ್ರ ಮನಸ್ಸಿನಲ್ಲಿ ಗಾಬರಿಯುಂಟಾಯಿತು. ತಾನು ತಿಂದುದೆಷ್ಟಾಯಿತು? ಅದರ ಬೆಲೆ ಕೊಡುವವರಾರು? ತನ್ನ ಹತ್ತಿರವಿರುವುದು ಒಂದಾಣೆ ಮಾತ್ರ. ಮುಂದೆ? ಗದ್ದಲ, ನೂಕಾಟ, ವಂಚನೆಮಾಡಿರುವುದಕ್ಕೊಂದು ದೂರು, ನಾಳೆ ಪತ್ರಿಕೆಗಳಲ್ಲಿ ಪ್ರಕಟನೆ! ಸುತ್ತಲಿರುವ ಯಾರೂ ಇತ್ತ ನೋಡುತ್ತಿಲ್ಲವಷ್ಟೆ!

ಅವರಿಗೆ ಬೇರೆ ಕೆಲಸವಿಲ್ಲವೆ? ಅವರವರು ಗುಂಪುಗುಂಪಾಗಿ ತಮ್ಮ ಇದಿರಿನ ತಿಂಡಿಯನ್ನು ನುಂಗುತ್ತ, ಹರಟೆ ಹೊಡೆದು, ನಕ್ಕು, ಗದ್ದಲದಲ್ಲಿಯೆ ಇರುವರು. ಆದರೂ, ತನ್ನ ಅವಸ್ಥೆ? ಇವನು ನಡುಗಿದನು. ಛೀ, ಇತ್ತ ಬಂದುದೇ ಅವಿಚಾರದ ಕೆಲಸವಾಯಿತೆಂದನು. ಇದಿರಲ್ಲಿದ್ದವನನ್ನು ನಕ್ಕು ಮಾತಾಡಿಸಿದರೆ ಏನಾದರೂ ಒಂದು ಸಮಾಧಾನವಾಗುವಂತಿದ್ದಿತೋ ಏನೊ? ಆದರೆ, ಅವನು? ಇನ್ನೂ ಪತ್ರಿಕೆಯಲ್ಲೇ ಮಗ್ನನು, ತಲೆಯೆತ್ತುವುದಿಲ್ಲ; ಅಲ್ಲಿಟ್ಟ ಚಾ ಸಹ ತ... ತ.. ತಣ್ಣಗಾಗಿದೆ; ಅದರಲ್ಲಿ ನಾಲ್ಕಾರು ನೊಣಗಳೂ ತೇಲುತ್ತಿವೆ!

ಇವನು ಇಷ್ಟರಲ್ಲಿ ಎರಡು ಸಲ ತೇಗಿದನು. ಇನ್ನೊಂದೆರಡು ದಿನ ನಿರುದ್ಯೋಗಿಯಾಗಿದ್ದರೂ ಉಪವಾಸದಿಂದ ಶ್ರಮವುಂಟಾಗದೆಂದನು. ಹೋಟ್ಲಿನ ಹುಡುಗನು ಹನ್ನೆರಡೂವರೆ ಆಣೆ ಎಂದು ಬರೆದ ಚೀಟನ್ನು ಇವನಿದ್ದಲ್ಲಿಯೂ, ಒಂಭತ್ತು ಪೈ ಎಂದು ಬರೆದ ಚೀಟನ್ನು ಪತ್ರಿಕೆಯವನಿದ್ದಲ್ಲಿಯೂ ಮೇಜಿನ ಮೇಲಿಟ್ಟು ಮಾಯವಾದನು. ಚೀಟಸೊಡನೆ ಇಟ್ಟ ವೀಳೆಯ ಜಗಿಯುತ್ತ ಇವನು ಪತ್ರಿಕೆಯವನ ಕಡೆಗೆ ನೋಡಲು, ಅಲ್ಲಿ—

"ಬೇಕಾಗಿದೆ; 'ಚಾ' ಮಾರುವ ಏಜಂಟನು; ಕಮಿಶನ್ ಧಾರಾಳ; ಯೋಗ್ಯ ಸಂಬಳವಿದೆ. ತಮಿಳು ಮಲೆಯಾಳಿ ಭಾಷೆ ಬಲ್ಲವನಿರಬೇಕು. ವಿಳಾಸ, ನಂಬ್ರ 490, ಗೋಳಿಕಟ್ಟೆ ಬಜಾರ್. ಕೂಡಲೆ ಬೇಕಾಗಿದೆ."

—ಎಂದು ಜಾಹೀರಾತು ಛಾಪಿಸಿದ್ದುದನ್ನು ಓದಿದನು. ಜಗಿಯುತಿದ್ದ ವೀಳೆಯವು ಅರ್ಧ ಮರ್ದನವಾಗಿ ಬಾಯಿಯಲ್ಲಿ ಹಾಗೆಯೆ ಉಳಿಯಿತು. ತಿರುವಾಂಕೂರಿನ ಚಾತೋಟದಲ್ಲಿ ತಾನಿದ್ದುದನ್ನೂ, ಅಲ್ಲಿನ ಮೆನೇಜರರು ಮಲೆಯಾಳಿಯನ್ನೆ ಸಂಬಳಕ್ಕಿಟ್ಟುಕೊಳ್ಳಬೇಕಾಗಿ ಒತ್ತಾಯಪಟ್ಟುದರಿಂದ ಕನ್ನಡಿಗನಾದ ತನ್ನನ್ನು ಬೇರೇನೂ ಕಾರಣವಿಲ್ಲದೆ, ವ್ಯಸನಪಟ್ಟೇ ನಿವೃತ್ತಪಡಿಸಬೇಕಾದುದನ್ನೂ, ನೆನೆದು ಈಗಲೆ ಆ ವಿಳಾಸಕ್ಕೆ ಹೋಗಿ ತನಗಾಗಿಯೆ ದೇವರು ದಯಪಾಲಿಸಿದ ಈ ಏಜಂಟುಹುದ್ದೆಯನ್ನು ಪಡೆವೆನೆಂದನು.

ಆದರೆ, ಹೋಟ್ಲಿನಿಂದ ಹೊರಗ ಹೋಗುವುದೆಂತು? ಹನ್ನೆರಡೂವರೆ ಆಣ ತೆರಬೇಡವೆ? ಎಲ್ಲಿಂದ? ಸಂಜೆಯಾಗುತ್ತ ಬಂದಿದೆ. ಇನ್ನಿಷ್ಟರಲ್ಲೆ ಆ ಆಫೀಸು ಮುಚ್ಚುವುದಲ್ಲ? ಹತ್ತೆಂಟು ಜನರು ಅವ ರವರ ಚೀಟಿನಂತೆ ಹಣತೆತ್ತು ಚಿಲ್ಲ ಪಡೆಯುವಾಗ, ಹೋಟ್ಲಿನವನ ಕಣ್ಣಿಗೆ ಬೀಳದಂತೆ ಫಕ್ಕನೆ ಜಾರಿದರೇನು? ಧೈರ್ಯವಿಲ್ಲ.

ಇನ್ನೇನು ಮಾಡುವನು? ನಯ ವಾದ ಆ ಮೇಜಿನ ಹಲಗೆಯ ಮೇಲ ಅವನ ಕೈಯಾಡಿತು. ಅತ್ತಿತ್ತ ತಿರುಗಿತು ತಟ್ಟನೆ ಎದ್ದು, ಓರೆಗಣ್ಣಿಂದ ಪತ್ರಿಕೆ ಯವನ ಕಡೆಗೆ ನೋಡಿದನು; ಅವನ ವಾಚನ ಮುಗಿದಿಲ್ಲ. ಹೋಟ್ಲಿನ ಬಾ ಗಿಲ ಬಳಿಗೆ ಬಂದನು. ಇವನ ಚೀಟ ನ್ನೆತ್ತಿಕೊಂಡು, 'ಒಂಭತ್ತು ಪೈ ಮಾತ್ರ ವಷ್ಟೆ' ಎನ್ನುತ್ತ, ಧನಿಯು ಇವನ ಒಂದಾಣೆಯನ್ನು ತಟ್ಟೆಯಲ್ಲಿಕ್ಕಿ, ಇವ ನಿಗೆ ಮೂರು ಪೈ ಮರಳಿಕೊಟ್ಟನು!

ಹೋಟ್ಲಿನ ಹೊರಗೆ ಬಂದವನು ಪಕ್ಕದ ಓಣಿ ಮಾರ್ಗವಾಗಿ ಕೈಬೀಸಿ ಹೋಗುತ್ತ, "ಅವನು ಪತ್ರಿಕೆ ಓದುತ್ತಾ ಇರಲಿ. ಅವನಿಗೆ ತಿಳಿದರೆ? ಶ್ರೀಮಂತ ನಾದಾತನಿಗೆ ಹನ್ನೆರಡೂವರೆ ಆಣೆ ಎಂದ ರೆ ನುಸಿಕಚ್ಚಿದಂತೆ ಅಷ್ಟೇ. . . ಹಂ ಹಂ." ಎನ್ನುತ್ತ ಗೋಳಿಕಟ್ಟೆ ಬಜಾರಿನ 490ನೆ ನಂಬರದ ಆಫೀಸಿನ ಕಡೆಗ ಸುಖವಾಗಿ ನಡೆದನು.

ಆಫೀಸು, ಮಾಳಿಗೆಯ ಮೇಲೆ ಇದೆ ರಸ್ತೆ ಬದಿಯಿಂದ ಒಳಗೆ ಬಂದೊಡನ

ದೊಡ್ಡ ಕೋಣೆ; ಅಲ್ಲಿ ಪೇದೆ ಇರುವನು. ಆಗಲೇ ಎರಡು ಮೋಟರುಕಾರುಗಳೂ ಅಲ್ಲಿಗೆ ಬಂದಿವೆ. ಒಬ್ಬಿಬ್ಬರು ಗುಮಾಸ್ತರೊಡನೆ ವರ್ತಕರು ವಾದಿಸುತಿದ್ದಾರೆ. ಪೇದೆ ಇವನನ್ನು ಸ್ವಲ್ಪ ಕಾಯ ಹೇಳಿದನು. ಅಷ್ಟು ಅವಕಾಶ ದೊರೆತುದೂ ಇವನ ಪುಣ್ಯವೇ ಸರಿ. ಮನಸ್ಸಿನೊಳಗಣ ಗಲಿಬಿಲಿ, ಎದೆಯ ದಡಬಡ ಬಡಿತ ಎಲ್ಲವೂ ಸ್ವಲ್ಪ ಸಮಾಧಾನ ಹೊಂದಲು ಈಗ ಅನುಕೂಲವಾಯಿತು.

ಪೇದೆ ಆಗಲೇ, "ಮೇಲೆ ಬರಬೇಕಂತೆ" ಎಂದನು. ಇವನು ಮೇಲೆ ಹೋಗಿ ನೋಡುತ್ತಾನೆ,—ನಲ್ವತ್ತು ವರ್ಷ ವಯಸ್ಸಾದ ದೃಢಕಾಯನು, ದೀಪದ ಬಳಿ ಕೂತಿರುವನು. ಆಫೀಸಿನ ಮೆನೇಜರು!

ಈಗಲೇ ಪೇದೆಯನ್ನು ಕರೆದು, ಗುರುತಿಸಿದ ತನ್ನನ್ನು ಬೈದು, ಪೊಲೀಸರ ವಶ ಕೊಡುವನಂತೆ: ಇನ್ನೇನು? ಎಂದೇ ಇವನು ಕೂಡಲೇ ತಿಳಿದುಕೊಂಡನು. ಆವನು ಮಾತಾಡುವುದಕ್ಕೆ ಒಂದೆರಡು ನಿಮಿಷ ವಿಳಂಬವಾಗುವಷ್ಟರಲ್ಲೇ ಇವನು ಮೂರ್ಛೆ ಹೋಗುತಿದ್ದನೇನೋ?

ಅವನು—'ಏಜಂಟರಾಗಲು ಬಂದಂತೆ ಪೇದೆ ತಿಳಿಸಿದ್ದಾನೆ. ಹಾಗೆ ಹೇಳಿರುವುದು ಸರಿಯೇ?'

ತನ್ನ ಗುರುತು ಮೆನೇಜರನಿಗೆ ಹತ್ತಲಿಲ್ಲೆಂದು ಇವನು ಆಗ ಧೈರ್ಯದಿಂದ,–'ಹೌದು ಸ್ವಾಮಿ, ಪತ್ರಿಕೆಯಲ್ಲಿ ನಿಮ್ಮ ವಿಜ್ಞಾಪನೆ ನೋಡಿ ತಿಳಿದೆ. ಕೂಡಲೇ ಬೇಕಾಗಿದೆ ಎಂದಿದ್ದುದರಿಂದ ಈಗಲೆ ಬಂದೆ' ಎಂದನು.

ಅವನು— 'ಹಿಂದಣ ಅನುಭವ ಏದೆಯೆ?'

ಇವನು—'ನಾನು ತ್ರಿವಾಂಕೂರಿನಲ್ಲಿ ಐದು ವರ್ಷ ಮೇಲೂರು ಚಾತೋಟದಲ್ಲಿದ್ದೆ. ಅಲ್ಲಿ ತಮಿಳೂ ಮಲೆಯಾಳಿಯೂ ಅಗತ್ಯವಾಗಿದ್ದುದರಿಂದ, ಕಲಿತುಕೊಂಡು ಆಫೀಸಿನಲ್ಲಿ ಗುಮಾಸ್ತನಾಗಿಯೂ ಕೆಲಸ ನೋಡಿದ ಅನುಭವ ಏದೆ. ಮೆನೇಜರರಿಲ್ಲದಿದ್ದಾಗ ನಾನೆ ಎಲ್ಲ ಲೇವಾದೇವಿ, ವಹಿವಾಟು ನಡೆಸುತಿದ್ದೆ. ತೋಟದ ಧನಿಗಳು "ಮಲೆಯಾಳಿಗಳನ್ನೇ ಕೆಲಸಕ್ಕೆ ಇಟ್ಟು ಕೊಳ್ಳಬೇಕೆಂದು ಒತ್ತಾಯ ಪಡಿಸಿದ ಕಾರಣ ಮಾತ್ರ, ಕನ್ನಡಿಗನಾದ ನನ್ನನ್ನು ಬಹಳ ವ್ಯಸನಪಟ್ಟೇ ಮೆನೆಜರರು ಪೂರ್ಣ ಸಂಬಳವನ್ನೂ ಪ್ರಯಾಣದ ಭತ್ತೆಯನ್ನೂ ಕೊಟ್ಟು ಊರಿಗೆ ಕಳುಹಿಸಿ ಕೊಟ್ಟರು. ಇಲ್ಲಿಗೆ ಬಂದು ಎರಡು ತಿಂಗಳಾಗಿವೆ. ಆ ಮೆನೇಜರರ ಸರ್ಟಿಫಿಕೇಟು ಇಲ್ಲಿದೆ. ಇಷ್ಟು ದಿನವೂ ಮಾತ್ರ ನಿರುದ್ಯೋಗಿ.'

ಅವನು—'ಸರಿ. ಹಾಗಿದ್ದರೆ ನಾನು ಕೆಲಸಕ್ಕಿಟ್ಟುಕೊಳ್ಳುವೆನು. ನನಗೆ ಬೇಕಾಗಿದ್ದ ಯೋಗ್ಯತೆಯುಳ್ಳ ಏಜಂಟರಾಗಿ ಕೆಲಸ ನೋಡ ಬಹುದು. ಸದ್ಯಕ್ಕೆ ಒಂದು ತಿಂಗಳ ತನಕ, ಮೂವತ್ತು ರೂಪಾಯಿ ಸಂಬಳ ಮತ್ತು ವಾಡಿಕೆಯ ಕಮಿಶನ್ ಕೊಡುವೆನು. ಇದೊಂದು ತಿಂಗಳಾಗುತ್ತಲೇ, ದೀಪಾವಳಿಯ ಸಮ

ಯಕ್ಕೆ ಬಡತೀ ತಲಾಬಿನ ಮೇಲೆ ಕಾಯಂ ಇಟ್ಟುಕೊಳ್ಳುವೆನು. ಒಪ್ಪಿದಿರಾ?

ಇವನು—'ಆಗಬಹುದು.'

ಅವನು—ನಾಳೆ ಬೆಳಿಗ್ಗೆ ಹತ್ತು ಹೊಡೆಯುವಾಗ ಇತ್ತ ಬಂದರಾಯಿತು.

ಇವನು–ಮೆನೇಜರರನ್ನು ನಮಸ್ಕರಿಸಿ, ಹೊರಡುವಷ್ಟರಲ್ಲಿ,– ಮೆನೇಜರರು "ನಿಮ್ಮನ್ನು ಎಲ್ಲಿಯೋ ಕಂಡ ನೆನಪು. ಸರಿ,—ಹೋಟ್ಲಿನಲ್ಲಿ ನನ್ನ ಚೀಟನ್ನು ಎತ್ತಿಕೊಂಡವರು ನೀವೆಯೊ?

ಇವನು– ಹೌದು, ನಾನೇ. (ಕೊರಳು ಕಟ್ಟಿತು.)

ಅವನು—ಹಾಗೆ ಮಾಡಿದುದೇಕೆ?

ಇವನು, ನಿಜಸ್ಥಿತಿಯನ್ನೆ ವಿವರಿಸಿ ಹೇಳಿಕೊಂಡನು. ಇನ್ನು ನಿಜವಾಗಿಯೂ ಪೇದೆಯನ್ನು ಕರೆದು ಕೆಳಗೆ ಓಡಿಸುವನಾಗಿ ಭಾವಿಸಿ, ಅದನ್ನೇ ನಿರೀಕ್ಷಿಸಿ ನಿಂತನು.

ಮೆನೇಜರನು ನಗುತ್ತಲೇ ಇದ್ದನು. "ನಿಮ್ಮ ಉಪಕಾರವಾಯಿತು. ತಿಳಿಯದೆ ಉಪಕಾರ ಮಾಡಿದಿರಿ. ನಮ್ಮ ಗಿರಾಕಿಗಳಲ್ಲಿ ಒಬ್ಬರು ಇಲ್ಲಿಗೆ ಬಂದು ಒಂದು ಸಾವಿರ ರೂಪಾಯಿಯ ಚಾ ಖರೀದು ಮಾಡಬೇಕೆಂದಿದ್ದರು. ಅವರಿಗೆ ಇಂದೇ ರೈಲಿನಲ್ಲಿ ಊರಿಗೆ ಹಿಂತೆರಳ ಬೇಕಾಗಿದ್ದಿತು. ಅವರ ವಿಷಯ ಏನೇನೋ ವರ್ತಮಾನವಿದೆ. ಈ ಸಲ ಅಷ್ಟು ಸಾಲ ಕೊಡಬಾರದಂತೆ ತೋರಿತು. ಹಾಗೆ ಹೇಳಿದರೆ, ಹಿಂದಣ ಹಣಕ್ಕೂ ಮೋಸವಾದೀತೆಂದೂ ತಿಳಿದಿದ್ದೆ. ಅದಕ್ಕಾಗಿ, ಇಂದೇ ಮಧ್ಯಾಹ್ನ ನಾನು ಆಫೀಸಿನಲ್ಲಿರದೆ, ಡೈರೆಕ್ಟರರೊಬ್ಬರಲ್ಲಿಗೆ ಹೋಗಿ, ಅವರೊಡನೆ ಟಿಫಿನು ಮುಗಿಸಿ ಇತ್ತ ಬರುವೆನೆಂದೆ. ಆ ಹೊತ್ತಿಗೆ ನಾನು ಸರಿಯಾಗಿ ಹೋಟ್ಲಿಗೆ ಹೋಗುತ್ತಿರುವಾಗ, ಚಾ ವಿಷಯವಾಗಿ ಪ್ರಚಾರವು ಬಹಳ ಹೆಚ್ಚುವಂತಾದರೆ ವರ್ಷಕ್ಕೆ ಇಪ್ಪತ್ತು ಕೋಟಿ ರೂಪಾಯಿ ಮೌಲ್ಯದ ಚಾ ವ್ಯಾಪಾರ ಮಾಡಬಹುದೆಂದು, ಅದರ ಕ್ರಮ ವಿವರಿಸಿ ಬರೆದ ಪ್ಲೆಂಟರರ ಸಂಘದ ಲೇಖವೊಂದು ಪ್ರಕಟವಾಗಿದ್ದ ಪತ್ರಿಕೆಯು ದೊರೆಯಿತು. ಅದನ್ನೋದಿಯೆ ಕುಳಿತಿದ್ದೆ. ಹಾಗೆ ಪತ್ರಿಕೆಯಲ್ಲೇ ಮಗ್ನನಾಗಿದ್ದ ನನಗೆ ನೀವು ಎದ್ದು ಹೋದುದೇ ತಿಳಿಯಲಿಲ್ಲ. ಅಷ್ಟರಲ್ಲೇ ಆ ವ್ಯಾಪಾರಿಯೂ ನನ್ನನ್ನು ಹುಡುಕಿ ಅತ್ತ ಬಂದನು. ನಾನೊಬ್ಬನೇ ಅಲ್ಲಿದ್ದುದನ್ನು ಕಂಡು, ನನ್ನ ಮೇಲೆ ಬಹಳವಾಗಿ (ನಾನು ಅವನನ್ನು ತಪ್ಪಿಸಲು ಡೈರೆಕ್ಟರರೊಡನೆ ಟಿಫಿನು ಮಾಡುವೆನೆಂಬ ಉಪಾಯಮಾಡಿದ್ದೆನೆಂದು) ಕೋಪಿಸಿಕೊಳ್ಳುತಿದ್ದನು. ಆದರೆ, ನೀವು ಹಿಂದೆ ಬಿಟ್ಟ ಚೀಟು ಉಳಿಯಿತು. ಅದೇ ನನ್ನನ್ನು ಆ ಬಿಕ್ಕಟ್ಟಿನಲ್ಲಿ ಮಾನಕಾಪಾಡಿತು. ಹನ್ನೆರಡೂವರೆ ಆಣೆ; ಇಬ್ಬರು ನಿಶ್ಚಿತವಾಗಿ ಟಿಫಿನ್ ಮುಗಿಸಿದ್ದಿರಬೇಕೆಂದು ನನ್ನ ಹೇಳಿಕೆಯನ್ನು ಅವನು ನಂಬಿ, ನನ್ನ ಮಾತಿನಲ್ಲಿ ಸಂದೇಹ ಕಾಣಲಾರದಾದನು. ಹಾಗೆ ಲೆಕ್ಕಾಚಾರದ ಮಾತಾಗಿ, ಮುಂದಣ ದೀಪಾವಳಿಯ ಕಾಲಕ್ಕೆ ಅವನು ವ್ಯಾಪಾರಕ್ಕಾಗಿ ಪುನಃ

ಬರುವುದೆಂದು ತೃಪ್ತನಾಗಿ ಮರಳಿದನು ನಾನು ಓದುತ್ತಿದ್ದ ಪತ್ರಿಕೆಯಲ್ಲಿಯೇ, ಪ್ಲಾಂಟರರ ಸಭೆಯಲ್ಲಿ ಈತನ ವಿಷಯವಾಗಿ, ಬಹಳವಾಗಿ ಕೊಂಡಾಡಿದ ಪ್ರಸ್ತಾಪಗಳಿದ್ದುವು. ಹೀಗಾಗಿ,— ನನ್ನ ಮಾತೂ ಸುಳ್ಳಾಗದಂತಾಯಿತು; ಅಷ್ಟು ಯೋಗ್ಯನಾದ ಗಿರಾಕಿಯೂ ಉಳಿದನು; ಅವನಿಗೆ ನನ್ನಲ್ಲಿಯೂ ನನಗೆ ಅವನಲ್ಲಿಯೂ ಇದ್ದ ಸಂಶಯಗಳು ಮಾಯವಾದುವು. ಇಷ್ಟಕ್ಕೆಲ್ಲ, ನೀವು ಬಡಲಾಯಿಸಿಟ್ಟ ಆ ಹನ್ನೆರಡಾಣೆಯ ಚೀಟೇ ಕಾರಣವಲ್ಲವೆ? ನನ್ನ ಚೀಟು ಬರೆ ಮುಕ್ಕಾಲಾಣೆಯದಾಗಿ ಅಲ್ಲಿ ಉಳಿದಿದ್ದರೆ, ನಾನೂ ಡೈರೆಕ್ಟರರೂ ಅಲ್ಲಿ ಟಿಫಿನು ಮಾಡುತಿದ್ದರೆಂದು ಅವನು ನಂಬುವಂತಾಗುತಿತ್ತೇ? ಹನ್ನೆರಡೂವರೆ ಆಣೆ ಎಂದೋದಿ ಸಮಾಧಾನಪಟ್ಟನು. ಇದೆಲ್ಲವೂ ನೀವು ತಿಳಿಯದೆ ಮಾಡಿರುವ ಉಪಕಾರ." ಎಂದನು.

ಇವನು ಉತ್ತರ ಕೊಡಲಿಲ್ಲ, ನಕ್ಕನು ಅಷ್ಟೆ. "ನನ್ನ ಉಪಕಾರವೆಲ್ಲಿ? ಉಪವಾಸದ ಉಪಕಾರ" ಎಂದು ತನ್ನೊಳಗೇ ಎಂದುಕೊಂಡನು.

೧೧. ಸಜೆಯಂತಹ ರಜೆ

ಆರು ತಿಂಗಳು ಕೂಲಿ ದುಡಿದು, ಆರು ದಿನ ರಜಾ ಪಡೆದು ಸಂಕಪ್ಪನು ತನ್ನ ಹಳ್ಳೀಮನೆಗೆ ಶಹರಿನಲ್ಲಿರುವ ಕಾರ್ಖಾನೆಯಿಂದ ಹೊರಟನು. ಮನೆಯಲ್ಲಿ ಒಂದು ಮಗುವೂ ಇವೇ ಆರು ತಿಂಗಳೊಳಗೆ ಹುಟ್ಟಿದ್ದಿತಾದರೂ, ಅವನು ಅದನ್ನು ಇದುವರೆಗೆ ಕಾಣಲು ಬಿಡುವೇ ಇಲ್ಲದಿದ್ದನು. ಚಿಕ್ಕ ಗುಡಿಸಲಿನಲ್ಲಿ ಅವನ ಹೆಂಡತಿಯು ಮಗುವಿನ ಆರೈಕೆ ನೋಡುತ್ತ ಅವನ ಬರೋಣವನ್ನು ಹಾರಯಿಸಿ ಕೂತಿದ್ದಳು. ಸಂಕಪ್ಪನು ಹಳ್ಳಿಯ ನೂರಾರು ಜನರ ಮುಂದೆ ತನ್ನ ಶಹರುಸಂಭ್ರಮ ವಿವರಿಸುತ್ತಲೂ, ಮಗುವನ್ನು ಮುದ್ದಾಡುತ್ತಲೂ, ದುಡಿದುದರಲ್ಲಿ ಉಳಿದ ಹಣವನ್ನು ಗೆಳೆಯರಿಗೆ ತಿಂಡಿತೀರ್ಥ ಕೊಡುತ್ತ ತನ್ನಲ್ಲಿ ಅವರಿಗೆ ಭಕ್ತಿಯುಂಟಾಗುವಂತೆ ಮಾಡಿಕೊಳ್ಳುತ್ತಲೂ ಇವೇ ಆರು ದಿನಗಳನ್ನು ಕಳೆಯಬೇಕಾಗಿ ಎಣಿಸುತ್ತ, ದಾರಿಯಲ್ಲಿ ಹಜ್ಜೆಹಾಕುತ್ತ ಹಳ್ಳಿಗೆ ತಲಪಿದನು.

ಅದೇ ಹತ್ತೆಂಟು ದಿನಗಳ ಹಿಂದೆ, ಹಲವು ಮನೆಗಳಲ್ಲಿದ್ದ ಕೋಳಿಗಳು ಮಾಯವಾಗುತ್ತಲಿದ್ದುವು. ಈ ದೂರು ಮಾಗಣೆಕಚೇರಿಗೆಮುಟ್ಟಿದ್ದು, ತಾಲುಕು ಸ್ಟೇಷನಿನಿಂದ ಒಬ್ಬ ಪೊಲೀಸ ಜವಾನನು ಹಳ್ಳೀ ಸಂಚಾರಕ್ಕಾಗಿ ಬಂದಿದ್ದನು. ಸಂಕಪ್ಪನ ಮನೆಗೆ ನೂರು ಮಾರು ದೂರದಲ್ಲಿ ಜವಾನನು ಕಣ್ಣೆ

ರೆದು ನಡೆಯುತ್ತ ಬರುವಾಗ, ಆ ಸಂಜೆ
ನಸುಕಿನಲ್ಲಿ ಸಂಕಪ್ಪನು ಇದಿರಾದನು.
ಅವನು ಸಂಕಪ್ಪನನ್ನು ಅವೇ ನಾಲ್ಕು
ದಿನಗಳ ಗಸ್ತಿನಲ್ಲಿ ಕಂಡಿದ್ದಿಲ್ಲ; ಇವನು
ಯಾರೆಂದು ವಿಚಾರಿಸಿದರೆ, ತನ್ನ ಮನೆಗೆ
ಹೋಗುವವನೆಂದು ಸಂಕಪ್ಪನೆಂದು
ದನ್ನು ಪೊಲೀಸನು ತಿಳಿದು, ಅವನ
ಹಿಂದೆಯೆ ತಾನೂ ಬರುವೆನೆಂದೂ ಹೇಳಿ
ದನು. ಸಂಕಪ್ಪನಿಗೆ ಸಂಶಯವೂ
ಭಯವೂ ಉಂಟಾಗಿ, ಕೊಂಚ ವೇಗ
ವಾಗಿ ಹೆಜ್ಜೆ ಇಡಲು, ಜವಾನನು ತಡೆ
ದನು. ಸಂಕಪ್ಪನಿಗೆ ಭೂತವೇ ಕೊರ
ಳು ಹಿಸುಕಿದಷ್ಟು ಭಯವಾಗಿ, ಅವನು
ತಟ್ಟನೆ ಹಾರಿ, ಆವೇಶದಿಂದ ಜವಾನನ
ಕೈಯಿಂದ ಬಿಡಿಸಿಕೊಳ್ಳಲೆತ್ನಿಸುವಾಗ,
ಜವಾನನ ಹೊಟ್ಟೆಗೆ ಸಂಕಪ್ಪನ ಕೈಕೋ
ಲು ಚೆನ್ನಾಗಿ ಒತ್ತಿದಂತಾಗಿ, ಅವನು
ತಟ್ಟನೆ ಬಿದ್ದನು. ಸಂಕಪ್ಪನು ಒಂದೇ
ಉಸಿಗಲ್ಲಿ ಓಡಿ, ತನ್ನ ಮನೆಯೊಳಕ್ಕೆ
ಕಾಲಿಟ್ಟು, ಬಾಗಿಲಿಕ್ಕಿಕೊಂಡು, ಆ
ತಡೆದ ಉಸಿರನ್ನು ಅಲ್ಲಿ ಸುಯ್ದನು.

ಉಸಿರು ತಡೆದೋಡಿ ಬಂದ ತನ್ನ
ಪತಿಯ ಅಪೂರ್ವಭೇಟಿಯಿಂದ ಚಕಿತ
ಳಾದರೂ ಸಂತೋಷತಾಳಿದ ಅವನ
ಹೆಂಡತಿ ಗಂಗಮ್ಮನು 'ತಿಳಿಸದೆ ಬಂದಿರಿ!
ಚೆನ್ನಾಯಿತು. ಮುದ್ದನ್ನು ಒಮ್ಮೆ
ನೋಡಿರಿ. ಯಾರ ಹಾಗೆ ಅವನ ರೂಪು
ಹೇಳಿ ನೋಡುವ!' ಎನ್ನುತ್ತ ಒಳಕೋ
ಣೆಯಿಂದ ಮಗುವನ್ನು ತಂದು ಅವನ
ತೋಳಲ್ಲಿಟ್ಟಳು. ಸಂಕಪ್ಪನ ಕೈಯೂ
ಕಣ್ಣೂ ಮಗುವಿನ ಸಂಸರ್ಗದಿಂದ ಹ
ರ್ಷಹೊಂದಿದರೂ, ಅವನ ಕಣ್ಣೆದು
ನಲ್ಲಿ ಆ ಪೊಲೀಸನ ಮೂರ್ತಿಯೂ
ಕೈಯ ಸುತ್ತಲೂ ಪೊಲೀಸನು ಕೈಬಿಗಿ
ಸೋವೂ ಗೋಚರಕ್ಕೆ ಬರುವಂತಾ
ಯಿತು.

"ಏನಯ್ಯಾ? ಹೀಗೆಲ್ಲ ಆಗುತ್ತಿ
ತ್ತೆಂದು ಯಾರಿಗೆ ತಿಳಿದಿದ್ದಿತು?" ಎಂದು
ಅವನ ಬಾಯಿಯಿಂದ ಮಾತು ಹೊ
ಡಲು, ಅದರ ಮರ್ಮವನ್ನು, ಆಶ್ಚರ್ಯಭ
ರಿತಳಾದ ಗಂಗಮ್ಮನು ವಿಚಾರಿಸಲೇ
ಬೇಕಾಯಿತು. ಈ ಮಾತುಗಳು ಮಗು
ವಿನ ವಿಷಯವಾಗಿ ಏನೂ ಅಲ್ಲವೆಂದೂ,
ಆದರೆ ತನ್ನ ಆರು ದಿನದ ರಜೆಯನ್ನು
ಸುಖವಾಗಿ ಹಳ್ಳಿಗರೊಡನೆ ಕಳೆಯುವು
ದೆಂದು ತಾನು ಮಾಡಿರುವ ನಿರ್ಧಾರವು
ಮಾಯವಾಗುವ ಹಾಗೆ, ಒಬ್ಬ ಪೊಲೀ
ಸ ಜವಾನನನ್ನು ತಾನು ಅಕಸ್ಮಿತವಾಗಿ
ಬಡೆದು ಬೀಳಿಸಿದಂತಾಯಿತೆಂದೂ ಇನ್ನೇ
ನಾಗುವುದೋ ಎಂದ ತನಗೆ ಭಯವೂ
ಆಗಿದ್ದುದರಿಂದ, ರಾಹುಕಾಲದಲ್ಲಿ
ಏಕೆ ತಾನೆ ಊರಿಗೆ ಮರಳಿದೆ ಎಂದೂ
ಅವನು ವಿವರಿಸುತ್ತ ಕಣ್ಣೀರಿಡುತ್ತ
ಮಗುವನ್ನು ಮುದ್ದಾಡುವುದನ್ನು ಮರೆ
ತು, ಹೇಗೊ ಹಾಗೆ, ಒಂದು ಗೋಡೆಗೆ
ಒರಗಿ ಕೂತನು.

ರಾತ್ರಿ ಹೇಗೂ ಕಳೆಯಿತು. ಇರುಳ
ಶಾಂತಿಯಿಂದ ಅವನ ಮನಸ್ಸು ಸ್ವಲ್ಪ
ಸಮಾಧಾನವಾಗಿತ್ತಾದರೂ, ಹಿಂದಣ
ಭಯವು ಆರಿರಲಿಲ್ಲ. ತಾನಾಗಿ ಮನೆಯ
ಹೊರಗೆ ಕಾಲಿಡಲಾರನು. ಅವನನ್ನು
ಎಲ್ಲಿಯಾದರೂ ಆ ಜವಾನನು ಕಂಡರೆ

ಕೂಡಲೆ ಕೈದು ಮಾಡುವನೆಂದು ಜೆದರಿಕೆ. ಅದಕ್ಕಾಗಿ, "ಮೆಲ್ಲನೆ ತಿರುಗಿ ಬಾ, ಯಾರಿಗೂ ನಾನು ಬಂದುದನ್ನೆ ತಿಳಿಸದಿರು. ನಿನ್ನೆಯ ಸುದ್ದಿ ಹೇಗಿದೆ ನೋಡು. ಆ ಪ್ರಸ್ತಾಪವೇ ಇಲ್ಲದಿರುವಲ್ಲಿ, ಹಳ್ಳಿಯಲ್ಲಿರುವ ನನ್ನ ಗೆಳೆಯರನ್ನೆಲ್ಲ ಕಂಡು, ಸ್ನೇಹಾಚಾರದಿಂದ ಅವರನ್ನು ಸಂತೋಷಪಡಿಸಿ ಬರುವೆನು. ಪೊಲೀಸನಿಗೆ ಏನಾಗಿದೆಯೋ, ನನ್ನನ್ನು ಹುಡುಕುತ್ತಾರೆಯೋ ಎಲ್ಲವನ್ನೂ ತಿಳಿದುಕೊಂಡು ಬಾ' ಎಂದು ಗಂಗಮ್ಮನಿಗೆ ಅಪ್ಪಣೆಕೊಟ್ಟು ಅವಳನ್ನು ಹೊರಗೆ ಕಳಿಸಿ, ಮುದ್ದನನ್ನು ಆಡಿಸುತ್ತ ತಾನು ಬಾಗಿಲಿಕ್ಕಿಕೂತನು.

ಗಂಗಮ್ಮ ಚುರುಕು ಬುದ್ಧಿಯ ಹೆಂಗಸು. ಹತ್ತೇ ನಿಮಿಷಗಳಲ್ಲಿ ಮರಳಿದಳು. ಬಂದವಳೇ "ಏನೆನ್ನಲಿ! ಜವಾನನಿಗೆ ಬಲವಾಗಿ ಪೆಟ್ಟು ತಗಲಿದ್ದಂತೆ ತಿಳಿದು ಅವನನ್ನು ತಾಲೂಕು ಆಸ್ಪತ್ರೆಗೆ ಒಯ್ದಿರುವರು. ಅವನನ್ನು ಒಡೆದವನು ಎಂತವನೆಂದು ಅವನು ಸ್ಟೇಶನಿಗೆ ತಿಳಿಸಿದುದರಿಂದ, ಉಗ್ರಾಣಿಯೂ ಇತರರೂ ಅಪರಾಧಿಯನ್ನು ಹುಡುಕುತ್ತಿದ್ದಾರಂತೆ" ಎಂದು ತಿಳಿಸಲು, ಸಂಕಪ್ಪನ ಎರಡೂ ಕೈಗಳೂ ಅವನ ಮಂಡೆಗೇರಿದುವು. "ಅವನು ಸತ್ತೇ ಹೋಗಿದ್ದರೆ, ಒಡೆದವನು ಯಾರೆಂದು ಯಾರಿಗೂ ತಿಳಿಯುತ್ತಿರಲಿಲ್ಲ. ನಾನು ಈ ಅಪರೂಪವಾಗಿ ದೊರೆತ ರಜಾ ಕಾಲವನ್ನು ಊರವರ ಕೂಟದಲ್ಲಿ ಸುಖ ಸಂಭ್ರಮದಿಂದ ಕಳೆಯುತ್ತಿದ್ದೆ. ಈಗ?" ಎಂದು ಹೆಂಡತಿಗೆ ದುಃಖದಿಂದ ಹೇಳಿದನು.

"ಏನೂ ಆಗಲಿ; ನೀವು ಮಾತ್ರ ಮನೆಯಿಂದ ಹೊರಗೆ ಕಾಲಿಡಬಾರದು. ನನ್ನಾಣೆ. ಏನಾಗುತ್ತದೋ ನೋಡಿ, ಪ್ರತಿದಿನ ತಿಳಿಸುವೆನು". ಎಂದಳು ಗಂಗಮ್ಮ.

"ಮತ್ತೆ ನಾನು ಹೊರಗೇಕೆ ಹೋಗುವೆನು? ಆದರೆ, ನನ್ನ ರಜಾ ಕಾಲದ ಸಂತೋಷವೆಲ್ಲ ಮಣ್ಣು ಪಾಲಾಯಿತು; ಊರವರಿಗೆ ಶಹರಿನ ಸುದ್ದಿ ಸಂಭ್ರಮದಿಂದ ತಿಳಿಸಿ ಅವರೊಡನೆ ಪೇಟೆಗೆ ಹೋಗಿ ಹೊಟ್ಲಲ್ಲಿ ಕಾಫಿ ತಿಂಡಿ ಕುಡಿದು ಸುಖವಾಗಿ ಹಿಂತಿರುಗುವ ಆಸೆಯು ಮಣ್ಣು ಪಾಲಾಯಿತು. ಆದ್ದರೂ, ಇಲ್ಲೇ ಕೊಳೆತು ಏನುಮಾಡಲಿ?" ಎಂದು ನಿಟ್ಟುಸಿರಿಟ್ಟು ಅವನು ನುಡಿದನು.

"ಮನೇ ಮಾಡು ಸರಿಯಿಲ್ಲ. ಗೋಡೆಯ ಮೇಲೆಲ್ಲ ಜೇಡರ ಬಲೆಗಳು ತೂಗುತ್ತಿವೆ; ಗೋಡೆಗೆ ಸುಣ್ಣ ಬಳಿಯುವುದು ಆಗತ್ಯ. ಅಷ್ಟು ಕೆಲಸವನ್ನು ಇಲ್ಲಿ ಕೂತಲ್ಲೇ ಮಾಡಿ ಮುಗಿಸಬಹುದಲ್ಲವೆ?" ಎಂದಳು.

ನಿರುಪಾಯನಾಗಿ ಸಂಕಪ್ಪನು ಹಾಗೇ ಮಾಡತೊಡಗಿದನು. ಹೆಂಡತಿ ಊರ ಅಂಗಡಿಯಿಂದ ಬೇಕಾದುದನ್ನೆಲ್ಲ ತಂದು ಕೊಟ್ಟಳು. ಹೋಗಿ ಬಂದಂತೆಲ್ಲ, "ನಾಲ್ಕಾರು ಜವಾನರು ತಾಲೂಕು ಸ್ಟೇಶನಿನಿಂದ ಬಂದಿದ್ದು, ಅಲ್ಲಲ್ಲಿ ವಿಚಾರ ತೆಗೆದುಕೊಳ್ಳುತ್ತಿರುವರಂತೆ" ಎಂದಳು. ಸಂಕಪ್ಪನು ಕೇಳಿ, ಖಿನ್ನ ವದನನಾಗಿ, ಇನ್ನಷ್ಟು ಚೆನ್ನಾಗಿ ಮನೆಯ ದುರುಸ್ತಿ

ಮಗ್ನನಾದನು. ಇಷ್ಟು ಕೆಲಸವು ಎರಡು ದಿನಗಳಲ್ಲಿ ಮುಗಿಯಿತು.

ಮೂರನೆಯ ದಿನ ಬೆಳಗೆದ್ದು, ಅಂಗಡಿಯಿಂದ ಅಕ್ಕಿ ತರಲು ಹೋದ ಗಂಗಮ್ಮನು, "ಆ ಜವಾನನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಿರುವರಂತೆ. ಇಲ್ಲಿಗೆ ಬಂದವರಲ್ಲಿ ಒಬ್ಬರಿಬ್ಬರು ಮಾತ್ರ ಸುಳಿದಾಡುತಿದ್ದಾರೆ." ಎಂದು ಅಂದಿನ ವಾರ್ತೆ ತಿಳಿಸಿದಳು.

"ಅಯ್ಯೋ, ಹೀಗಾದರೆ,— ಇಂದಿಗೂ ಹೊರಗೆ ಹೋಗುವುದಕ್ಕಿಲ್ಲ. ಏನು ಮಾಡಲಿ?" ಎಂದು ಸಂಕಪ್ಪನು ನಿಟ್ಟುಸಿರಿಟ್ಟನು.

"ತುಲಸೀಕಟ್ಟೆ ಹಾಳಾಗಿದೆ; ಬಚ್ಚಲಲ್ಲಿ ನೆಲದಲ್ಲಿ ಹಂಚುಗಳು ಬಿದ್ದೇ ಇವೆ. ಒಲೆಯು ತುಂಡಾದಂತಿದೆ. ಅವುಗಳ ಕಡೆಗೆ ಕಣ್ಣು ತಿರಿಗಿಸಿದರಾಗದೆ? ಎಂದಳು.

ಸಂಕಪ್ಪನು ಹಾರೆ ಹಿಡಿದುಕೊಂಡು ಮಣ್ಣು ಮುದ್ದೆ ಕಲಸಿ, ಇವನ್ನೆಲ್ಲ ಸರಿಪಡಿಸುವುದರಲ್ಲಿ ಎರಡು ದಿನ ಕಳೆದನು. ಜವಾನನಿಗೆ ಗುಣ ಮುಖವಾಗಿದೆ ಎಂದೂ, ಒಬ್ಬನೇ ಜವಾನನು ಹಳ್ಳಿಯಲ್ಲಿ ಪಠೇಲ ಚಾವಡಿ ಬಳಿ ಇದ್ದನೆಂದೂ ಅಂದಿನವಾರ್ತೆಯನ್ನು ನಾಲ್ಕನೇ ದಿನ ಗಂಡನಿಗೆ ತಿಳಿಸಿ, ಅವನ ಬೇಸರವನ್ನು ಸ್ವಲ್ಪ ಇಳಿಸಿದವಳು. ಆದರೂ, ದಿನಕ್ಕೆ ಹತ್ತೆಂಟು ಸಲ, "ದಯವಿಟ್ಟು ಹೊರಗೆ ಹೋಗದಿರಿ, ನನ್ನಾಣೆಯಿದೆ-ಮುದ್ದನಾಣೆಯಿದೆ; ನಿಮಗೇನಾದರೂ

ಘಾತವಾದರೆ ನಮಗೇನು ಗತಿ?" ಎಂದ
ಅವನ ಕಾಲಿಗೆ ಬಿದ್ದು ಬೇಡಿಕೊಂಡ
ಕಣ್ಣೀರು ಮಿಡಿಯುತಿದ್ದಳು. ಅದು ದು
ಖಾಶ್ರುವೊ ಆನಂದಬಾಷ್ಪವೋ ಎಂ
ಅವನು ತಿಳಿಯಲಾರದಾದನು.

ಐದನೆ ದಿನ ಪೇಟೆಗೆ ಹೋದವಳು
ಇಷ್ಟು ದಿನಗಳಲ್ಲಿ, ಹಳ್ಳಿಯಲ್ಲಿ
ಇವಳೊಡನೆ ಮಾತಾಡುತಿದ್ದ ಹೆಂಗ
ರು, (ಇವಳ ಗೆಳತಿಯರು) ಮನೆಗೆ ಬಂ
ಈಕೆಯ ಗಂಡನು ಅಮೂಲ್ಯ ರಜ
ಕಾಲವನ್ನು ತನ್ನ ಮನೆಯಲ್ಲಿ ಸುಂದ
ವಾಗಿಯೂ ಭದ್ರವಾಗಿಯೂ ಮಾಡ
ವುದರಲ್ಲೂ ಮಗುವನ್ನೇ ಆಡಿಸು
ತನ್ನ ಹೆಂಡತಿಯ ಇಚ್ಛೆಗಳನ್ನು ನೆರವ
ರಿಸುವುದರಲ್ಲೂ ಕಳೆವುದನ್ನು ಕೇಳಿ ತಿ
ಕೊಂಡು; ತಮ್ಮ ಗಂಡಂದಿರಿಗೆ ಇವನ
ಮಾದರಿ ಗೃಹಸ್ಥನೆಂದು ಸಾರುತ್ತ ಅಂತ
ಗಂಡಂದಿರನ್ನು ಹಂಗಿಸಿಭಂಗಿಸಿ ನಾನಾ
ವಿಧವಾಗಿ ಪೀಡಿಸಿ ಹಿಯ್ಯಾಳಿಸಿ, ಧಿಕ್ಕ
ಸುತ್ತಲಿದ್ದರು. ಹಳ್ಳಿಯಲ್ಲಿ ಗಂಡಸರೆ
ಲ್ಲ ಒಂದು ಬಗೆಯಾಗಿ ಅವರ ಮನಸ
ಉದ್ವಿಗ್ನವಾಗುವಂತಾಯಿತು. ಅ
ರೆಲ್ಲರು ಸಂಕಪ್ಪನನ್ನು ಕಂಡಿದ್ದರೆ ಬಡೆ
ಬಿಡುತಿದ್ದರೋ ಎನ್ನುವಷ್ಟಾಗಿದ್ದಿತು
" ಭಾರೀ ಶಹರಿನವನಾದನಯ್ಯ, ಸ
ಕಪ್ಪ! ಇಲ್ಲಿ ಗಂಜಿಗಿಲ್ಲದೆ ನುಸೀ ತಿಕಾ
ಯಲ್ಲಿ ಕಾಲಕಳೆಯುತಿದ್ದವನು, ಹಂಚಿ
ಕಾರ್ಖಾನೆಯಲ್ಲಿ ಕೂಲಿದುಡಿದು ಮ
ಹಾ ಪುರುಷನಾಗಿದ್ದಾನಯ್ಯ! ಹೆಂಡ
ತಿಯ ಇಚ್ಛೆಯ ಹೇಡಿ! ರಾಣೀ ಸರಕಾ
ವಾಗುವುದಯ್ಯ! ಅವನಿಗೆ ಗಡ್ಡ ಏ

ಇನ್ನೂ ಉಳಿದಿದೆಯೋ ನೋಡಬೇಕೆಂ ರೆ, ಹೊರಗೆ ಬಾರದೆ ಗುಮಾನಿ ಕೇಡಿ ು ಹಾಗೆ ಅಟ್ಟದ ಮೇಲೆಯೋ ಗೊಬ್ಬ ದ ಗುಳಿಯಲ್ಲೊ ಅಡಗಿಕೊಂಡಿದ್ದಾನೆ. ಹಿ ಹಿ" ಎಂದು ಒಬ್ಬೊಬ್ಬರು ಒಂದೊಂ ದು ತೆರ ನಿಂದೆ ಹರಡಿಸಲಾರಂಭ ವಾಯಿತು.

ಸಂಕಪ್ಪನಿಗೆ ಇದು ಹೇಗೆ ಗೊ ತ್ತಾಗಬೇಕು? ಐದನೇ ದಿನ ಪೇಟೆಗೆ ಹೋದ ಗಂಗಮ್ಮನು ಮರಳುತ್ತಲೆ, ದಾರಿಯಲ್ಲಿ ಏನೋ ಭಾವಿಸುತ್ತ ಬಂದು, "ಕೇಳಿದರಾ? ಆಸ್ಪತ್ರೆಯಲ್ಲಿದ್ದ ಆ ಜವಾ ನನು ಸತ್ತೇ ಹೋದನಂತೆ! ಅವನ ಶವ ಸಂಸ್ಕಾರ ಈ ದಿನ ನಡೆವುದೆಂದು, ಇಲ್ಲಿ ಗೆ ಬಂದಿದ್ದ ಜವಾನರಲ್ಲಿ ಉಳಿದಿದ್ದ ಅವ ನೊಬ್ಬನು ಈ ದಿನ ತಾಲೂಕು ಸ್ಟೇಶ ನಿಗೆ ಮರಳುವನಂತೆ. ಇನ್ನಿಲ್ಲಿ ಪತ್ತೆ ಮಾಡಲು ಪಟೇಲರಿಗೂ ಉಗ್ರಾಣಿಗೂ ತಿಳಿಸಿದ್ದಾರಂತೆ. ಆದರೂ ನೀವು ಮಾತ್ರ ಹೊರಗೆ ಹೋಗದಿರಿ." ಎಂದು ಗಂಡನಿಗೆ ತಿಳಿಸಿದಳು. "ಅವನು ಸತ್ತೇಹೋದನೆ? ಹಾಗಾದರೆ, ನನ್ನ ಮೇಲೆ ಇನ್ನು ಅಪ ರಾಧ ಹೆಚ್ಚಿತಲ್ಲ! ನಾನು ಯಾವ ವೇಳೆ ಯಲ್ಲಿ ಈ ರಜಾ ಪಡೆದೆನೋ! ಕಠಿನ ಸ ಶ್ರಮ ಸಜೆಗೂ ಹೆಚ್ಚಾಯಿತಲ್ಲ ಈ ರಜೆ? ಇನ್ನು ಪೇಟೆಗೆ ಹೋಗುವದಕ್ಕಿಲ್ಲ. ನಾಳೆ ಗೇ ಶಹರಿಗೆ ಮರಳಬೇಕಾಗಿದೆ. ಥೂ, ಅದೃಷ್ಟವೇ! ಎಲ್ಲಾ ಈ ಮುದ್ದನ ಗ್ರಹ ಚಾರ!" ಎಂದು ತನ್ನನ್ನೂ ಮಗುವನ್ನೂ ಬೈದುಕೊಂಡನು! ಗಂಗಮ್ಮ ಮರುಮಾ ತಾಡದೆ ಸುಮ್ಮನೆ ಅಳುವೋರೆಮಾಡಿ ಕೊಂಡು, ತನ್ನಲ್ಲೆ ನಸುನಕ್ಕಳು.

ಆ ದಿನವೆಲ್ಲ ಹಿತ್ತಿಲಲ್ಲಿದ್ದ ಮರಗಿಡ ಗಳ ಬುಡವನ್ನು ಸರಿಯಾಗಿ ತೋಡಿ, ನೀರು ನಿಲ್ಲುವಂತೆ ಮಾಡಿಟ್ಟನು. ಐದನೆ ದಿನ ಹೀಗೆಯೇ ಕಳೆಯಿತು. ನಾಳೆಗೆ ಹೊರಡುವನಾದ ಕಾರಣ,ಅಂದು ರಾತ್ರಿ ಲೆಕ್ಕವಿಚಾರಮಾಡುತ್ತ, ಆರು ತಿಂಗಳ ದುಡಿತದಲ್ಲಿ ಉಳಿಸಿ ತನ್ನೊಡನೆ ತಂದಿದ್ದ ಇಪ್ಪತ್ತನಾಲ್ಕು ರೂಪಾಯಿಗಳನ್ನು ಗಂ ಗಮ್ಮನಿಗೆ ಕೊಟ್ಟು "ಮಗುವಿನ ಕೊರಳಿ ಗೊಂದು ಪವನಿನ ಸರಪಣಿಮಾಡಿಸೆ"ಂದ ನು. ಆಗ ಗಂಗಮ್ಮನ ಮುಖದ ಮೇಲೆ ಆನಂದ ಅರಳಿದುದನ್ನು ಕಂಡವರೇನೆನ್ನ ಬಹುದು? ಅವಳ ಮನಸ್ಸು ಮಾತ್ರ ಸ್ವಲ್ಪ ಅಳುತಿದ್ದಿತು. ಎಷ್ಟೆಂದರೂ ಗಂಡನು ಸುಖವಾಗಿ ಹಳ್ಳೀ ಗೆಳೆಯರೊಡನೆ ಪೇ ಟೆಗೆ ಹೋಗಿ ತನ್ನ ವೈಭವ ಸಾರುತ್ತ ಅವರೊಡನೆ ಹೋಟ್ಲಿಗೆ ಫಲಹಾರ ಮಾ ಡಿ ಬಾರದಂತಾಯಿತಲ್ಲ ಎಂದು ಅವ ಳಲ್ಲೂ ಪಶ್ಚಾತ್ತಾಪವಾಗಿದ್ದಿತು. ಆದರೆ ಮಾಡುವುದೇನು? ಆದುದೆಲ್ಲ ಒಳ್ಳೆತೇ ಆಯಿತೆಂದು ಸುಮ್ಮನಿದ್ದಳು. ರಾತ್ರೆ ಯೂಟವು ಪರಮಾನ್ನದಿಂದ ವಿಶೇಷತೆ ಹೊಂದಿತು. ಮುದ್ದನು ಚಿನ್ನದ ಸರ ಪಣಿಯನ್ನು ಹಾಕಿಕೊಳ್ಳುವ ಮೊದಲೇ ನಗಲಾರದೆಯೂ, ತಂದೆಯು ಮುದ್ದಾ ಡುವಾಗ, ಎಂಟು ದಿನಗಳ ಮೊಳೆಯಂ ತಹ ಗಡ್ಡವೂ ಮೊನೆ ಮೀಸೆಗಳೂ ಅವ ನನ್ನು ಕೆಣಕಿಸಿ ಹಿಡಿಸಿದುದಕ್ಕೆ ಮತ್ತೂ ಅಳುತ್ತ, ಹೇಗೂ ನಿದ್ದೆ ಹೋದನು.

ಮೂರನೆ ದಿನ, ಶಹರಿಗೆ ಹೋಗು ವ ದಿನ. ಅಂದು ಸಂಕಪ್ಪನಿಗೇನೂ ಕೆ

ಲಸ ಕೊಡದೆ, ಆದರೆ ಅವನಿಗೆ ಪೇಟೆಗೆ ಹೋಗಲಾರದಂತೆ ಗಂಗಮ್ಮನು ಅವನ ಬಟ್ಟೆಗಳನ್ನೆಲ್ಲ ಬಲು ಶುಭ್ರವಾಗುವಂತೆ ಒಗೆದು ಕೊಟ್ಟಳು. "ಇಂದು ಹುಣ್ಣಿಮೆ ತಿಂಗಳ ಬೆಳಕಿದೆ. ನಡುರಾತ್ರಿಯ ವರೆಗೂ ಇಲ್ಲೇ ಇದ್ದು, ಬೆಳಗ್ಗಿನ ಜಾವಕ್ಕೆ ಕೋಳಿ ಕೂಗುತ್ತಲೇ ಎದ್ದು ಕಾರ್ಖಾನೆಗೆ ಹೋಗಲು ಹೊರಡಬಹುದು" ಎಂದು ಬಹಳ ಆಗ್ರಹದಿಂದ ಬೇಡಿಕೊಂಡಳು. ಇನ್ನು ಆರು ತಿಂಗಳ ತರುವಾಯದಲ್ಲಿ ಬರುವವನಲ್ಲವೆ? ಮನೆಯೂ ಅಂಗಳವೂ ಹಿತ್ತಿಲೂ ಚೊಕ್ಕವಾಗಿ ಕಾಣುತ್ತಿರಲು, ಜವಾನನು ಮಡಿದುದೂ ನಿಶ್ಚಯವಾಗಿರಲು, ಬೆಳಗ್ಗಿನ ಜಾವಕ್ಕೆ ಎದ್ದು ಹೋಗುವುದು ಉತ್ತಮವೆಂದು ಅವನಿಗೂ ತೋರಿತು.

ಸಂಜೆಗೆ ತಿಂಗಳು ಮೂಡುತ್ತಲೆ,— ಆರು ದಿನ ಪೇಟೆಯಲ್ಲಿ ತಿರುಗುತಿದ್ದೆ, ಮನೆಯ ಹೊರಗೆ ಕಾಲಿಟ್ಟಿಲ್ಲ; ಇನ್ನೆಂತೂ ಮರಳುವುದಷ್ಟೆ. ಹಿತ್ತಿಲ ಗೋಡೆಬಳಿ ನಿಂತು, ಹಳ್ಳಿಯನ್ನು ಒಮ್ಮೆ ತಿಂಗಳಬೆಳಕಿನಲ್ಲಿ ನೋಡುತ್ತೇನೆಂದು ಭಾವಿಸಿ ಸಂಕಪ್ಪನು ಹಿಂಬಾಗಿಲ ಬಳಿ ನಿಂತುಕೊಂಡನು. ತಣ್ಣನೆ ಗಾಳಿ ಬೀಸುತ್ತಿದೆ. ಸುತ್ತಲು ಗಿಡಗಳು ದಟ್ಟ ಬೆಳೆದು ನಿಂತಲ್ಲೇ ತಲೆ ತೂಗುತ್ತಿವೆ. ಶುಭ್ರವಾದ ಬೆಳದಿಂಗಳು! ಹಾಗೆಯೆ ಅರೆತಾಸು ನಿಂತಿರ ಬಹುದು,- ಅಷ್ಟರಲ್ಲೇ, ಅಯ್ಯೊ! ಎಂದು ಅವನು ಅರೆಗಟ್ಟಿಯಾಗಿ ತನ್ನೊಳಗೆ ಅರಚಿಕೊಂಡು, ನಾಲ್ಕೇ ಹಜ್ಜೆಗಳೊಳಗೆ ಮನೆಯೊಳಕ್ಕೆ

ಹಾರಿ ಬಂದು, ಬಾಗಿಲು ಭದ್ರಮಾ ಕೊಂಡು, ಮಾತೆತ್ತಲಾರದಾದನು.

ಮುದ್ದನಿಗೆ ಹಾಲುಕುಡಿಸುತಿ ಗಂಗಮ್ಮನು ದಿಗಿಲುಗೊಂಡು ಅ ಬಂದಳು.

"ಕಂಡೆ, ಕಂಡೆ, ನಾನು ಕಣ್ಣಾ ಕಂಡೆ!" ಎಂದನವನು.

"ಏನಾಯಿತು? ಯಾರನ್ನು ಕ ಡುದು?"

"ಅವನ ಪ್ರೇತ, ಪಿಶಾಚಿ. ಅವ ಶವಸಂಸ್ಕಾರ ಅಲ್ಲಿಯಾಗಿದೆ. ಆದರೂ ಅವನ ನೆರಳು ಇಲ್ಲಿ, ಅವನು ಅಂದ ಬಿದ್ದಲ್ಲಿಯೇ ಸುಳಿಯುತ್ತಿದೆಯಲ್ಲ!"

"ಛೆ, ಏನು ಹುಚ್ಚಾಟ? ಅವನ ಮಣ್ಣುಪಾಲಾದನೋ, ಬೆಂಕಿಯ ಪಾ ಲಾದನೋ ಯಾರು ಬಲ್ಲರು? ಸುಮ್ಮನ ಏನನ್ನೋ ಭಾವಿಸಿ, ಹೀಗೆ ಮೈಹಾರಿದ ಹೇಗೆ? ನಮ್ಮಂತಹ ಹೆಣ್ಣುಮಕ್ಕಳ ಏನು ಮಾಡಬಹುದು?"

"ಗೊತ್ತಿದೆ, ನಾನು ಗಂಡಸಲ್ಲವೆ ಇದುವರೆಗೆ ಚಿಕ್ಕಂದಿನಿಂದಲೂ ಈ ಹಳ್ಳಿ ಯಲ್ಲಾಗಲಿ, ಎಲ್ಲಿಯೇ ಆಗಲಿ, ಪ್ರೇ ಪಿಶಾಚಿಗಳನ್ನು ಕಂಡವನಲ್ಲ. ಆ ಮ ಗಳ ನೆರಳಲ್ಲಿ ಅವನ ನೆರಳು ಈಗಲೇ ಸು ಳಿಯುತಿದ್ದಿತು. ಅದೇ ಉಡುಪು, ಟೊ ಪಿ. ಹಾಗೇ ಖದಮು ಇಡುತ್ತಾನೆ ದರೆ! ಸಾಯುವವರೆಗೂ ಈ ಪ್ರೇತವ ನನ್ನನ್ನು ಹಿಂಬಾಲಿಸುವುದಲ್ಲ! ನಾನ ಶಹರಿಗೆ ಹೋದ ಮೇಲೆ ನಿಮ್ಮನ್ನು ಬೆ ರಿಸಿ ಪೀಡಿಸದೆ ಇದ್ದೀತೆ? ನಿನ್ನಂತಹ

ೆಂಗಸನ್ನು, ಈ ಪುಟ್ಟ ಕೂಸನ್ನು
ಬಗೆಯಾಗಿ ಪೀಡಿಸುವುದೋ!
ೇಕೆ ಈಗಲೇ ರಜೆ ಪಡೆದು ಬಂದೆ
!"

ಗಂಗಮ್ಮ ಗಂಡನ ಈ ಸಂತಾಪ
ಕೇಳಿ ನಿಜವಾಗಿಯೂ ಮರುಗಿ
ಸಮಾಧಾನವನ್ನು ಹೇಗೆ ಹೇಳ
ದು? ಅದಕ್ಕಾಗಿ "ಏನೋ ಮಬ್ಬು
ದಂತೆ ಕಂಡಿರಿ. ನಾವು ಮೂವರೂ
ಹಿಂಬಾಗಿಲ ಬಳಿ ನಿಂತುಕೊ
ೇಣ. ಪ್ರೇತವು ಪೀಡಿಸುವದಾದರೆ,
ಿಸಿ ಕೊಳ್ಳಲಿ. ಒಂದು ಸಲ ನೋ
ೇಣ," ಎನ್ನುತ್ತ, ಮಗುವನ್ನೆತ್ತಿ
ಂಡು, ಗಂಡನನ್ನು ಬಲಾತ್ಕರಿಸಿ
ಂಡು, ಹಿಂಬಾಗಿಲ ಕಡೆಗೆ ಬಂದಳು.

ಸುತ್ತಲೂ ನೋಡುತ್ತಿದ್ದಾರೆ,—
ಬ್ಬರು ಅದೇ ಮನೆಯ ಬದಿಯಿಂದ ಪೇ
ು ಕಡೆಗೆ ನಡೆಯುತ್ತಿದ್ದಾರೆ, ಅದೇ
ಮರಗಳುಳ್ಳ ಹಾದಿಯ ಮಾರ್ಗವಾ
ಹೋಗುತ್ತ, "ಹದಿನೈದು ದಿನಗಳಿಂದ
ನಿನ್ನನ್ನೇ ಹುಡುಕುತಿದ್ದೇನೆ. ಇಂದು
ಗೂ ಸಿಕ್ಕಿದೆ. ನನಗೆ ತಾಕೀದಿನ
ೇಲೆ ತಾಕೀದು ಬರುತ್ತಲೇ ಇದೆ.
ೇಳಿ ಕದ್ದು ಈ ರೀತಿ ಹಳ್ಳಿಯಲ್ಲೆಲ್ಲ
ೆವಳಿ ಮಾಡುವ ಬದಲಾಗಿ, ಶಹರಿನ
ಚು ಕಾರ್ಖಾನೆಗೆ ಹೋಗಿ ಕೂಲಿದು
ರುಬಾರದಾಗಿದ್ದಿತೇ?" ಎಂದೊಬ್ಬನು
ತ್ತೊಬ್ಬನ ಕೈಹಿಡಿದು ಗರ್ಜಿಸುತ್ತ
ಬ್ಬರೂ ಪಟೇಲರ ಮನೆಯ ಕಡೆಗೆ
ಯುತ್ತಾರೆ! ಸಂಕಪ್ಪನು "ನೋಡಿದೆ
ಾ, ಇವನೇ ಆ ಜವಾನ. ಈಗಲೆ

ಕಂಡದ್ದು ಇವನನ್ನೆ. ಇವನು ಸತ್ತದ್ದೆಂದೆಯಲ್ಲ?" ಎಂದು ಹೆಂಡತಿಯನ್ನು ಬೆದರಿಸುತ್ತ ಪ್ರಶ್ನೆಮಾಡಿದನು.

"ಇವನೇ, ಓ, ಹೋ, ಇವನೇ? ಇವನು ಯಾವಾಗಲು ಇಷ್ಟು ದಿನ ಇಲ್ಲೆ ಇದ್ದವನು. ಇಲ್ಲಿ ಈ ತಿಂಗಳಲ್ಲಿ ಕೋಳಿ ಕಳವು ಬಹಳವಾಗಿದ್ದಿತೆಂದು, ಇವನನ್ನು ಆ ಕಳ್ಳರನ್ನು ಹಿಡಿಯಲು ಕಳಿಸಿದ್ದರಂತೆ. ಕಳ್ಳನು ಈ ದಿನ ಸಿಕ್ಕಿರಬೇಕು! ಇನ್ನು ಇವನು ಸ್ಟೇಶನಿಗೆ ಹೋಗುವನು. ಇವನು ಪ್ರೇತವೆ? ಪಿಶಾಚನೆ? ಹುಚ್ಚಾಟವೇಕೆ?" ಎಂದು ನಗುತ್ತ ನುಡಿದಳು.

"ಮತ್ತೆ ಅವನು ಸತ್ತಿದ್ದನೆಂದೆಯಲ್ಲ! ಶವಸಂಸ್ಕಾರವೆಂದೆಯಲ್ಲ! ಎಲ್ಲರೂ ಮರಳಿದ್ದರೆಂದೆ! ಸುಳ್ಳೇ ಹೇಳಿದೆಯಾ?" ಎಂದು ತನ್ನ ರಜಾಕಾಲವೆಲ್ಲ ಮನೆಯೊಳಗೇ ಕೆಲಸಮಾಡುತ್ತ ಕಳೆದ ವ್ಯಥೆಯಿಂದ ಕೆರಳಿ ನುಡಿದನು.

"ಸತ್ತವನು ಯಾವ ಜವಾನನೆಂದು ಯಾರಿಗೆ ತಾನೆ ಗೊತ್ತಾಗಿದ್ದಿತು? ಊರೆಲ್ಲ ಸುದ್ದಿಯಿತ್ತು. ಅದನ್ನೆ ಹೇಳಿದ್ದೆ. ಇವನು ಪ್ರತಿದಿನ ನಾಲ್ಕಾರು ಸಲ ನನಗೇ ಕಾಣಸಿಕ್ಕಿದವನು. ಇವನ ವಿಷಯವಾಗಿ ನೀವು ಕೇಳುತಿದ್ದಿರೆಂದು ಯಾರು ತಿಳಿದಿದ್ದರು?" ಎಂದು ಸಿಡು ಮೋರೆ ಮಾಡಿ, ಅಳುವಂತೆ ಕಾಣಿಸಿಕೊಂಡು ಅವಳು ಉತ್ತರಕೊಟ್ಟಳು.

"ಗೊತ್ತೇ ಇದೆ, ನಿನ್ನ ಉಪಾಯ. ಮನೆಕೆಲಸವನ್ನೆಲ್ಲ ನನ್ನಿಂದ ಮಾಡಿಸಿಕೊಳ್ಳುವುದಕ್ಕಾಗಿ, ನನ್ನ ಸಂಕಟ ತಿಳಿ

ದ್ದು, ನೀನು ನಿನ್ನಷ್ಟಕ್ಕೆ ಭಾವಿಸಿದಂತೆ ನನಗೆ ನುಡಿದುದಲ್ಲವೆ?"

" ಹಾಗೂ ಮಾಡಿದೆ ಎನ್ನುವ. ಯಾರಿಗಾಗಿ? ಇದೇ ಮನೆ ಕೆಲಸಕ್ಕಾಗಿ ಎಷ್ಟು ಕೂಲಿ ಖರ್ಚಾಗುತಿದ್ದಿತು? ಪೇಟೆಗೆ ಗೆಳೆಯರೊಡನೆ ಹೋಗಿ ಹೋಟ್ಲು ತಿಂಡಿಗಾಗಿ ಎಷ್ಟು ವ್ಯರ್ಥವಾಗುತಿದ್ದಿತು? ಮುದ್ದನಿಗೆ ಚಿನ್ನದ ಸರಪಣಿಯಾಗುವುದಿದ್ದಿತೆ? ಎಷ್ಟೆಂದರೂ, ಸಂಸಾರಕ್ಕೊಂದು ಮಗು. ಅದಲ್ಲದೆ, ಊರಲ್ಲಿ ನಿಮ್ಮ ಖ್ಯಾತಿಯೆಷ್ಟಾಗಿದೆ ಬಲ್ಲಿರಾ? ಸೊಕ್ಕಿನಿಂದ, ಮನೆಕಡೆಗೆ ನೋಡದೆ, ಎಲ್ಲ ಕೆಲಸವನ್ನು ಹೆಂಡಿರಮೇಲೆ ಹೊತ್ತಿಟ್ಟು, ದರ್ಬಾರು ನಡೆಸುತಿದ್ದ ಹಳ್ಳಿಯ ಗಂಡಸರೆಲ್ಲ, ನಿಮ್ಮಂತೆಯೆ ಬಹಳವಾಗಿ ಮನೆ ಕೆಲಸಮಾಡುತ್ತ ಹೆಂಡಿರ ಪ್ರೀತಿಗೆ ಪಾತ್ರರಾಗಿ ತಮ್ಮ ಮನೆ ಹಿತ್ತಿಲು ಎಲ್ಲವನ್ನೂ ಸೊಗಸಾಗಿ ಮಾಡಿಟ್ಟುದರಿಂದ, ಹಳ್ಳಿಯ ಹೆಂಗಸರೆಲ್ಲ ನಿಮ್ಮ ನಡತೆಯನ್ನು ಕೊಂಡಾಡುತ್ತಾರೆ. ಮೊದಲು ಹಳ್ಳಿಯಲ್ಲಿ ಕೆಲಸವಿಲ್ಲದೆ, ಪೇಟೆಗೆ ಹೋದ ಕೂಲಿಯವನ ಹೆಂಡತಿಯೆಂದು ನನ್ನನ್ನು ಕರೆಯುತಿದ್ದವರು, ಈಗ ನಾನೆಂದರೆ ಹೆಂಗುಸರಿಗೆ ಮೆಚ್ಚಿನವಳಾಗಿದ್ದೇನೆ, ಎಲ್ಲವೂ ಮುದ್ದನ ಜಾತಕ ಫಲ" ಎಂದಳು.

ಸಂಕಪ್ಪನೇನು ಮಾಡುವನ…
ನ್ನಾಗಿ ಪರಿಭಾವಿಸಿದನು. ನಿ…
ಯೂ ತನ್ನ ಹಣವನ್ನೂ ಉಳಿಸಿ…
ಮನೆಯನ್ನು ಹಳ್ಳಿಯಲ್ಲಿ ಮಾಡ…
ಯಾಗುವಂತೆ ಮಾಡಿಸಿ ಮಗ…
ಆಭರಣಮಾಡಿಸಿಕೊಂಡವಳು,
ಉಪಾಯ ಮಾಡಿದರೂ, ಯೋಗ್ಯ…
ದಿಯೆಂದು ಅವನು ಅವಳ ಕೈಯಿ…
ಗುವನ್ನೆತ್ತಿಕೊಂಡು ಮುದ್ದಿಟ್ಟು…
ನೆನಿಸಿಕೊಂಡನು.

ಬೆಳಗ್ಗಿನ ಜಾವದಲ್ಲಿ ಕೋಳಿ…
ಗಿದೊಡನೆ ಎದ್ದು ಶಹರಿನ ಕಾಖಾ…
ತೆರಳುವಾಗ ತನಗೆ ರಜೆ ಎಂಬುದು…
ಯಂತಾಯಿತೆಂದು ಹಿಂದೆ ದೂರಿ…
ಡುದು ತಪ್ಪಾಯಿತೆಂದು ಅವನಿಗೆ ತಿ…
ದಿರಲಿಲ್ಲ. ಶಹರಿನಲ್ಲಿ ದುಡಿದು, ಹಳ…
ನ್ನು ಉದ್ಧರಿಸಬೇಕಲ್ಲದೆ ಹಳ್ಳಿಗ…
ಕೆಡವಿ ಶಹರನ್ನು ಸಿಂಗರಿಸುವುದು ಹ…
ದು ಮುಂದೆ ತನ್ನ ಕೂಲಿಕಾರರ ಸಂಘ…
ಸೂಚನೆ ಕೊಡುತ್ತಾ ಗಂಗಮ್ಮನ…
ಹಳ್ಳೀ ಹೆಂಗಸರು ಹೆಚ್ಚಲೆಂದು …
ಅವಳನ್ನು ಕೊಂಡಾಡುವಂತೆ ಮ…
ದನು.

